ಇದುವೇ ಜೀವನ

# ಸಾಕ್ಷರತೆ

# TRUE EDUCATION

# ಸಂಸ್ಕೃತಿ

ಡಾ|| ಸಿ. ರಾಮಸ್ವಾಮಿ M.B.B.S., Ph.D., ( U.S.A. )

ಪುನರ್ಜನ್ಮ ಸಂಶೋಧನ ಕೇಂದ್ರ

# ಇದುವೇ ಜೀವನ ಸಾಕ್ಷರತೆ

## ಸಂಗೀತ ಶಾಸ್ತ್ರದ ಸೌರಭ !
## ಕನ್ನಡ ಸಾಹಿತ್ಯದ ಮಕರಂದ !!
## ಮಾನವ ಸಂಸ್ಕೃತಿಯ ಸಂವೇದ !!!

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುನರ್ಜನ್ಮ ಪ್ರಕಾಶನದ ಈ ಸಂಗೀತ–ಸಾಹಿತ್ಯ–ಸಂಸ್ಕೃತಿಯ ಪ್ರಚಾರ ।
ವಿಶ್ವ ಸಾಹಿತ್ಯದ ವಿಶ್ವ ಮಾನವ ಸಂಸ್ಕೃತಿಯ ಝೇಂಕಾರ ॥
ಇದುವೇ ಕನ್ನಡ ಸಾಹಿತ್ಯದ ಶೃಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುನರ್ಜನ್ಮ ಸಂಶೋಧನ ಕೇಂದ್ರದ ಈ ಜನ್ಮಾಂತರ ಜ್ಞಾನಸಾರ ।
ಸರ್ವಧರ್ಮಗಳ ಸಹಿಷ್ಣುತೆಗೆ ನೀಡಲಿದೆ ವಿನೂತನ ಆಧಾರ ॥
ಇದುವೇ ಭಾರತ ಸಂಸ್ಕೃತಿಯ ಶೃಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುರಾತನ ಕಾಲದ ಈ ಪುನರ್ಜನ್ಮ ಸುಜ್ಞಾನ ಸುವಿಚಾರ ।
ಮಾನವ ಕುಲಕ್ಕೆ ನೀಡಲಿದೆ ವಿನೂತನ ವಿಶ್ವಶಾಂತಿಯ ಆಧಾರ ॥
ಇದುವೇ ವಿಶ್ವಶಾಂತಿಗೆ ವಿವೇಕಯುತ ನಿರ್ಧಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುನರ್ಜನ್ಮ ಸಂಶೋಧನ ಕೇಂದ್ರದ ಈ ಪುನರ್ಜನ್ಮ ಜ್ಞಾನಸಾರ ।
ಸರ್ವದೇಶ ಧರ್ಮಗಳಿಗೂ ನೀಡಲಿದೆ ಸುಖಿನೋಭವ ಸಾಕ್ಷಾತ್ಕಾರ ॥
ಇದುವೇ ಮಾನವ ಬದುಕಿನ ಬಾಳಬಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಜನುಮ ಜನುಮ ಜ್ಞಾನದ ಈ ಮಾನವ ಅಂತರ್‌ಜ್ಞಾನ ಸಂಸ್ಕಾರ ।
ವಿಶ್ವಜನತೆಗೆ ನೀಡಲಿದೆ ದಿವ್ಯ ಆತ್ಮಜ್ಞಾನದ ಸುಜ್ಞಾನ ಸಾಕ್ಷಾತ್ಕಾರ ॥
ಇದುವೇ ಮಾನವ ಜೀವನ ಅಂತಿಮ ಸಾಕ್ಷಾತ್ಕಾರ ॥

ಡಾ॥ ಸಿ. ರಾಮಸ್ವಾಮಿ.

# ಮಾನವ ಸಂಸ್ಕೃತಿಯ ಸಂವೇದ
# ಸಾಕ್ಷಾರತೆಯ ಮೂರನೇಯ ಭಾಗ

ಡಾ॥ ಸಿ. ರಾಮಸ್ವಾಮಿ.

– ಲೇಖಕರು –

ಡಾ॥ ಸಿ. ರಾಮಸ್ವಾಮಿ **M.B.B.S., Ph.D., ( U.S.A. )**

ಲೇಖಕ – ಸಂಪಾದಕ – ಪುನರ್ಜನ್ಮ ಸಂಶೋಧಕ

ನಿರ್ದೇಶಕ

**ಪುನರ್ಜನ್ಮ ಸಂಶೋಧನ ಕೆಂದ್ರ**

ನಂ. 101, ಶ್ರೀ ಅಪಾರ್ಟ್ ಮೆಂಟ್ಸ್, ಕೃಷ್ಣ ಅಡ್ಡರಸ್ತೆ,

ಬಸವನಗುಡಿ , ಬೆಂಗಳೂರು – 500 004.

– ಪ್ರಕಾಶಕರು –

ಶ್ರೀಮತಿ ಬಿ.ಎಲ್. ಮಂಗಳಗೌರಿ. B.Sc., B.Ed.

**ಪುನರ್ಜನ್ಮ ಪ್ರಕಾಶನ**

ನಂ. 101, ಶ್ರೀ ಅಪಾರ್ಟ್ ಮೆಂಟ್ಸ್, ಕೃಷ್ಣ ಅಡ್ಡರಸ್ತೆ,

ಬಸವನಗುಡಿ , ಬೆಂಗಳೂರು – 500 004.

ದೂರವಾಣಿ : 2661 5449

# ಮಾನವ ಸಂಸ್ಕೃತಿಯ ಸಂವೇದ
# ಸಾಕ್ಷಾರತೆಯ ಮೂರನೇಯ ಭಾಗ

ಡಾ|| ಸಿ. ರಾಮಸ್ವಾಮಿ.

**PUBLISHER**
**Smt. B. L. Mangala Gowri.** B.Sc. B.Ed.
**PUNARJANMA PUBLICATIONS**

**COPYRIGHT BY PUBLISHER / AUTHOR**
( Subjected to Bangalore Jurisdiction )

**First Edition :** August 2013
**COPIES : Unlimited** Free distribution
Through E-Mail **;** Web site & Print media

**PRICE :** Free distribution only

ವಿಶ್ವಮಾನವ ಸಂಸ್ಕೃತಿಯ ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ,
ಸಾರ್ಥಕತೆ – ಸಾಕ್ಷಾತ್ಕಾರ – ಜೀವನ್ಮುಕ್ತಿ
ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ
ಮನಸ್ಸಿನ ರಹಸ್ಯ – ಮನೋರೋಗಗಳ ರಹಸ್ಯ – ಸೃಷ್ಟಿಯ ರಹಸ್ಯ
ಮಾನವ ಜನಾಂಗದ ಪುನರುತ್ಥಾನ ಮತ್ತು ವಿಶ್ವಶಾಂತಿ ಸ್ಥಾಪನೆ
ಈ ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನ ಸಂದೇಶವನ್ನೂ
ಮತ್ತು
ವಿಶ್ವಶಾಂತಿಯ ಅಮರ ಆದೇಶವನ್ನೂ ಮಾನವಜನಾಂಗದಲ್ಲಿ ಪ್ರಸರಿಸುವ ಉದ್ದೇಶದಿಂದ
ಪುನರ್ಜನ್ಮ ಸಂಶೋಧನ ಕೇಂದ್ರದ ಈ ಉಚಿತ ಪ್ರಕಟಣೆ.

**GRAPHIC DESIGNER Smt. R. Sushma CRISSP VISIONS**

**PUBLISHED BY: PUNARJANMA PRAKASHNA,**
**Shree apartments, Krishna Road Cross**
**Basavanagudi, Bangalore - 560 004.**
**Karnataka I N D I A**

# ಪರಿವಿಡಿ


| ಅಧ್ಯಾಯ | ವಿವರ | ಪುಟ |
|---|---|---|
| ಇದುವೇ ಜೀವನ ಸಾಕ್ಷರತೆ | | 1 |
| ಆಧ್ಯಾತ್ಮಿಕ ಕ್ರಾಂತಿಯಿಂದ ವಿಶ್ವಶಾಂತಿ | | 2 |
| ಸಾಕ್ಷರತೆ | | 3 |
| ಪರಿವಿಡಿ | | 5 |
| ಮೊದಲಮಾತು | | 7 |
| ಮುನ್ನುಡಿ | | 9 |
| ನಿವೇದನೆ | | 12 |
| ಕೃತಜ್ಞತೆ | | 14 |
| ಅರ್ಪಣೆ–ಸಮರ್ಪಣೆ | | 15 |
| ವಿಶ್ವಮಾನವ ಸಂಸ್ಕೃತಿ ಕನ್ನಡ ಕಹಳೆ ಮೊಳಗಲಿ | | 16 |
| ಸ್ವಾಗತ–ಸುಸ್ವಾಗತ | | 17 |


## ಮಾನವ ಸಂಸ್ಕೃತಿಯ ಸಂವೇದ


1. ಸಂಸ್ಕೃತಿ 18

2. ಮಾನವ ಮೌಲ್ಯಗಳು ಮತ್ತು ಸಂಸ್ಕೃತಿ 21

3. ಪಂಚ ಮಾನವ ಮೌಲ್ಯಗಳು 22

1. ಸತ್ಯ 22

2. ಧರ್ಮ 24

3. ಶಾಂತಿ 26

4. ಪ್ರೇಮ 28

5. ಅಹಿಂಸೆ 30

4. ಪಂಚ ಮೌಲ್ಯಗಳ ಉಪಮೌಲ್ಯಗಳು 33

5. ಪಂಚ ಮಾನವ ಮೌಲ್ಯಗಳ ಪ್ರಮುಖ ಉಪಮೌಲ್ಯಗಳು 37

1. ಕ್ಷಮೆ (Forgiveness) 37

2. ತ್ಯಾಗ (Sacrifice) 40

3. ವಾತ್ಸಲ್ಯ (Affection) 42

4. ಸಹನೆ (patience) 45

5. ಸ್ವಾಭಿಮಾನ (Self-respect) 48

6. ಏಕಾಗ್ರತೆ (ದೃಢತೆ) (Concentration) 49

7. ಲಜ್ಜೆ ಅಥವಾ ನಾಚಿಕೆ (Modesty) 52

8. ನಗು ಮತ್ತು ಅಳು (Laugh & Cry) 53

**6. ಪಂಚ ಮಾನವ ಮೌಲ್ಯಗಳ ಪ್ರಮುಖ ಉಪದ್ರವಗಳು 55**

1. ಕುತೂಹಲ (Anxiety) 55

2. ಕೋಪ (Anger) 57

3. ಅಸೂಯೆ (ಮಾತ್ಸರ್ಯ) (Envious) 61

4. ಹೆದರಿಕೆ (Apprehension) 65

5. ಭಯ (Fear) 67

**7. ಸಂಸ್ಕೃತಿ ಮುತ್ತು ಮಾನವ ಮೌಲ್ಯಗಳ ಉಗಮ ಮತ್ತು ಆಗಮ 70**

**8. ಮಾನವೀಯ ಮೌಲ್ಯಗಳನ್ನು ವರ್ಧಿಸುವ ವಿಧಾನಗಳು 72**

**9. ಸಂಸ್ಕೃತಿ ಮತ್ತು ನಾಗರಿಕತೆ = ವಾದ – ಸಂವಾದ 73**

**10. ಕರ್ಣಾಟಕ ಸಂಸ್ಕೃತಿ 80**

**11. ಕನ್ನಡ ನಾಡಿನ ಭೂಸ್ವರ್ಗದಲ್ಲಿ ಡಾ॥ಶೀಲ ಮತ್ತು ಡಾ॥ರಾಮು 88**

# ಮೊದಲ ಮಾತು

## ಪ್ರಿಯ ಓದುಗರೇ,

ಕನ್ನಡ ಸಾಹಿತ್ಯ ಪರಿಷತ್ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಅನೇಕ ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಮತು ್ತವಿಶ್ವಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಿರುವುದು. ಇದ್ದನ್ನೆಲ್ಲ ನೋಡಿದ ನಾನು, ನನ್ನ ಮಾತೃಭಾಷೆಯಾದ ಕನ್ನಡದ ಉದ್ಧಾರಕ್ಕೆ ಏನು ಮಡಿದ್ದೇನೆ ? ಎಂದು ಮತ್ತೆ ಮತ್ತೆ ಪ್ರಶ್ನಿಸಿಕೊಂಡೆನು.

"ತಿಳಿದಿರುವ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಸುವುದೇ ಮಾನವ ಜೀವನ"

– ತತ್ತ್ವಜ್ಞಾನಿ ಅರಿಸ್ಟಾಟಲ್

## ಮಾನವ ನುಡಿ

ಮನುಷ್ಯ ದೀಪವಾದರೂ ಆಗಬೇಕು, ಕನ್ನಡಿಯಾದರೂ ಆಗಬೇಕು. ಒಂದು ಬೆಳಕನ್ನು ಕೊಡುತ್ತದೆ. ಮತ್ತೊಂದು ಅದನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಬ್ಬರೂ ದೀಪ ಆಗದೆ ಹೋಗಬಹುದು, ಆದರೆ ಕನ್ನಡಿಯಾಗಬಹುದು.

## ಹಣ – ಆಸ್ತಿ

ಮನುಷ್ಯರು ತಾವು ಸಂಪಾದಿಸಿದ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಕೊಡಬಹುದು. ಆ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಅವರು ಒಂದು ಸಾರಿ ದಾನಮಾಡಿದರೆ ಅವು ಅವರಿಗೆ ಒಂದು ಸಾರಿ ಮಾತ್ರ ಉಪಯೋಗವಾಗಿ ನಂತರ ಮತ್ತೊಮ್ಮೆ ಉಪಯೋಗಕ್ಕೆ ಬರುವುದಿಲ್ಲ. ಪುಸ್ತಕ ಜ್ಞಾನ ಓದುಗರ ಮನಸ್ಸಿನಲ್ಲಿ ಎಂದಿಗೂ ಬತ್ತದೆ ಅವರ ಜ್ಞಾನವನ್ನು ಬೆಳಗಿಸುತ್ತಿರುತ್ತದೆ.

ಜ್ಞಾನಜ್ಯೋತಿಯ ಪುಸ್ತಕಗಳು ಬೇರೆ ಎಲ್ಲಾ ಉಡುಗೊರೆಗಳಿಗಿಂತ ಅತ್ಯುತ್ತಮ ಉಡುಗೊರೆಗಳು.

ಅದಕ್ಕೆ ನಾನು ನನ್ನ 40 ವರ್ಷಗಳ ಸಾಧನೆ – ಶೋಧನೆ – ಸಂಶೋಧನೆಗಳ, ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನಸಾರವನ್ನು, "ಧಾರ್ಮಿಕಪ್ರಜ್ಞೆ ಮತ್ತು ಧರ್ಮಸಹಿಷ್ಣುತೆ"ಯನ್ನು ಎತ್ತಿಹಿಡಿದಿರುವ ಮಾನವ ಸಂಸ್ಕೃತಿಯ ಶಿಖರಪ್ರಾಯವಾದ ಸುವರ್ಣಕರ್ನಾಟಕದ ಕನ್ನಡ ಸಂಸ್ಕೃತಿಯನ್ನು ಮತ್ತೆ ಬೆಳಗಿಸುವ ಉದ್ದೇಶದಿಂದ ಕಸ್ತೂರಿಯಾದ ಕನ್ನಡಭಾಷೆಯಲ್ಲಿ, ಮಕರಂದವಾದ ಕನ್ನಡ ಸಾಹಿತ್ಯದಲ್ಲಿ, ಮುಂದಿನ ಸತ್ಯಯುಗದ ಅಂದರೆ ಸುವರ್ಣಯುಗದ ಈ ಪಂಚಮ ಜ್ಞಾನವೇದಗಳನ್ನು ಹೃದಯ ತುಂಬಿ ರಚಿಸಿದೆ.

ಈ ಪುನರ್ಜನ್ಮ ಜ್ಞಾನ ವೇದಗಳು ಕಲಿಯುಗದ ವೇದ ಮತ್ತು ಉಪನಿಷತ್‌ಗಳಂತೆ ನಮ್ಮ ಮಾನವ ಜನಾಂಗಕ್ಕೆ ದಾರಿದೀಪಗಳಾಗಿವೆ.

1. ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ – True Education
2. ಸಾರ್ಥಕತೆ = ನಿಜಜೀವನ ದರ್ಶನ – ಸಂದರ್ಶನ – ಸಮ್ಮಿಲನ – Right Living
3. ಸಾಕ್ಷಾತ್ಕಾರ = ದಿವ್ಯಆತ್ಮಜ್ಞಾನ ದರ್ಶನ – ಸಂದರ್ಶನ – ಸಮ್ಮಿಲನ ಸಿದ್ಧಿ – Self Realization
4. ಮನಸ್ಸಿನ ಮತ್ತು ಮನೋರೋಗಗಳ ರಹಸ್ಯಗಳ ಸಂಶೋಧನೆ–ಈ ಶತಮಾನದ ಮಹಾ ಸಂಶೋಧನೆ
   = Mystery of Mind & Mental diseases
5. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ = ಪ್ರಕೃತಿಯ ಮತ್ತು ಸೃಷ್ಟಿಯ ರಹಸ್ಯ.
   = Research on Reincarnation and Survival of Soul

ಹಾಗೂ
ವಿಶ್ವಶಾಂತಿ ಸ್ಥಾಪನೆ ಮತ್ತು ಮಾನವ ಜನಾಂಗದ ಪುನರುತ್ಥಾನ
– Establish World Peace and Resuscitate Humanity

ವಿಶ್ವಮಾನವ ಸಂಸ್ಕೃತಿಯನ್ನು ಬೆಳಗಿಸುವ ಉದ್ದೇಶದಿಂದ ಈ ಸತ್ಕೃತಿಗಳನ್ನು ನಮ್ಮ ಪುನರ್ಜನ್ಮ ಸಂಶೋಧನ ಕೇಂದ್ರವು ಪ್ರಕಟಿಸಿ, ಉಚಿತವಾಗಿ ಮನುಕುಲಕ್ಕೆ ವಿಶ್ವ ಅಂತರ್‌ಜಾಲದ ( Internet ) ಮೂಲಕ ನೀಡುತ್ತಿದೆ. ನನ್ನ ಹಾಗೆ ಪ್ರತಿಯೊಬ್ಬ ಕನ್ನಡಿಗರೂ ಹಾಗೂ ಉಳಿದ ಮಾನವರೂ ತಾವು ಒಬ್ಬ ಮಾನವರಾಗಿ ಅವರವರ ಭಾಷೆಗೆ ಹಾಗೂ ಮಾನವ ಜನಾಂಗಕ್ಕೆ ಏನು ಮಾಡಿದ್ದೇವೆ ? ಎಂಬ ಪ್ರಶ್ನೆಯನ್ನು ತಾವೇ ಹಾಕಿಕೊಂಡು ಉತ್ತರ ನೀಡಿದರೆ " ಭಾಷೆ ಬೆಳೆಯುತ್ತದೆ, ಭಾಷೆ ಉಳಿಯುತ್ತದೆ, ವಿಶ್ವಮಾನವ ಸಂಸ್ಕೃತಿ ಬೆಳೆಗುತ್ತದೆ."

ಉರಿಯುತ್ತಿರುವ ಒಂದೇ ಒಂದು ಸೊಡರು ಜ್ಯೋತಿಯಿಂದ ನಾವು ಪ್ರಪಂಚಕ್ಕೆಲ್ಲಾ ಬೆಳಕನ್ನು ನೀಡುವಷ್ಟು ಅಸಂಖ್ಯಾತ ಸೊಡರುಗಳನ್ನು, ಅಂದರೆ ದೀಪಗಳನ್ನು ಹೊತ್ತಿಸಬಹುದು. ಈಗ ಈ ಶತಮಾನದ ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನಸಾರಾಮೃತವನ್ನೊಳಗೊಂಡ ಈ ಐದು ಸತ್ಕೃತಿಗಳು ಮಾನವ ಜನಾಂಗಕ್ಕೆ ಎಲ್ಲಾ ಉಡುಗೊರೆಗಳಿಗಿಂತ ಸರ್ವಶ್ರೇಷ್ಠವಾದ ಅತ್ಯುತ್ತಮ ಉಡುಗೊರೆಗಳೇ !!! ಓದಿ ಹೇಳಿ ?

ಈ ಕೃತಿಗಳನ್ನು ರಚಿಸುವಾಗ ನನಗೆ ಉಂಟಾದ ರಸಾಸ್ವಾದನೆಯಿಂದ ಬಂದಿರುವ ರಸಸುಖದಲ್ಲಿ ಒಂದಿನಿತನ್ನಾದರೂ ಇದನ್ನು ಓದುವವರು ಸವಿದು ಅವರಿಗೆ ಈ ಎಲ್ಲಾ ಜ್ಞಾನ ಉಂಟಾಯಿತೆಂದು ಗೊತ್ತಾದರೆ ಈ ಸತ್ಕೃತಿಗಳು ಸಾರ್ಥಕವಾದವೆಂದು ಭಾವಿಸುತ್ತೇನೆ. ಈ ಕೃತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಟೀಕೆ–ಟಿಪ್ಪಣಿಗಳಿದ್ದಲ್ಲಿ ಅದನ್ನು ಲಿಖಿತ ಮೂಲಕ ಅಥವಾ ಈ ಕೆಳಕಂಡ ಈ–ಮೇಲ್ ಮೂಲಕ ಲೇಖಕರಿಗೆ ತಿಳಿಸಬಹುದು.

**E-mail : reincarnationresearchcentre@gmail.com**

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ

–ಭಗವಾನ್ ಬುದ್ಧ

**( Triple Gems of Buddhism )**

ಸಂಗೀತಂ ಶರಣಂ ಗಚ್ಛಾಮಿ
ಸಾಹಿತ್ಯಂ ಶರಣಂ ಗಚ್ಛಾಮಿ
ಸಂಸ್ಕೃತಿ ಶರಣಂ ಗಚ್ಛಾಮಿ

–ಡಾ॥ ಸಿ. ರಾಮಸ್ವಾಮಿ

**( Triple Gems of Humanity )**

# ಸಾಕ್ಷರತೆ

ಓದಿ ವಿಷಯವನ್ನು ಗ್ರಹಿಸಿಕೊಳ್ಳುವುದರ ಜೊತೆಗೆ ನಿತ್ಯಜೀವನಕ್ಕೆ ಸಂಬಂಧಪಟ್ಟ ಲೌಕಿಕ ವಿಷಯವನ್ನು ಸರಳವಾದ ಶೈಲಿಯಲ್ಲಿ ಬರೆಯುವ ಅಕ್ಷರಜ್ಞಾನವನ್ನು ಹೊಂದುವುದು ಅಕ್ಷರತೆ ಅಂದರೆ ಲಿಟ್ರಸಿ ಎನ್ನುತ್ತೆವೆ. ಆ ಅಕ್ಷರತೆಯ ಅಕ್ಷರಜ್ಞಾನವನ್ನು ತಿಳಿದವನನ್ನು ಅಕ್ಷರಸ್ಥನೆನ್ನುತ್ತಾರೆ ಅಂದರೆ ಲಿಟರೆಟ್ ಎನ್ನುತ್ತೇವೆ.

ಆ ಸಾಕ್ಷರತೆ ಮಾನವನನ್ನು ಸುಶಿಕ್ಷಿತನನ್ನಾಗಿ ಮಾಡುತ್ತದೆ ಅಂದರೆ ಸುಸಂಸ್ಕೃತನನ್ನಾಗಿ ಮಾಡುತ್ತದೆ. ಇಂದಿನ ವಿದ್ಯಾರ್ಥಿಗಳಿಗೆ ದೊರೆಯುವ ಶಿಕ್ಷಣ ಕೇವಲ ಸರ್ಕಾರೀಯ ಅಥವ ಖಾಸಗಿ ಉದ್ಯೋಗವನ್ನು ಪಡೆದು ಹೊಟ್ಟೆ ಹೊರೆದುಕೊಳ್ಳವ ಗುರಿಯನ್ನು ಹೊಂದಿ, ಇದರಿಂದ ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಿದೆ.

ಇಂದಿನ ಈ ರೀತಿಯ ದಾರಿತಪ್ಪಿದ ಶಿಕ್ಷಣ(Education)ನಮ್ಮ ಇಂದಿನ ಮಾನವ ಜೀವನವನ್ನು ಅಧಃಪಥನಕ್ಕೆ ತಳ್ಳಿದೆ. **Education** ಎಂಬ ಪದವು ಲ್ಯಾಟಿನ್ ಭಾಷೆಯ **Educare** ಎಂಬ ಪದದ ಉತ್ಪತ್ತಿ. ಇದರ ಅರ್ಥ ದಾರಿತೋರಿಸು, ಅಭಿವೃದ್ಧಿಪಡಿಸು ಎಂದಾಗುತ್ತದೆ. ಶಿಕ್ಷಣ ಎನ್ನುವುದು ಬೆಳವಣಿಗೆ, ಅಭಿವೃದ್ಧಿಗಳಿಗೆ ಅನ್ವಯಿಸುವ ಪದ.

ನಿಜವಾದ ಶಿಕ್ಷಣವೆಂದರೆ ಕೇವಲ ವಿದ್ಯಾದಾನವಲ್ಲ ಅದು ಜ್ಞಾನದಾನವಾಗಬೇಕು. ಅಂದರೆ ವಿದ್ಯಾರ್ಥಿಗೆ ದೊರೆಯುವ ಶಿಕ್ಷಣ ಕೇವಲ ಹೊಟ್ಟೆ ಹೊರೆದುಕೊಳ್ಳುವ ಗುರಿಯನ್ನು ಹೊಂದಿರುವ ಶಿಕ್ಷಣವಾಗಬಾರದು.

ಸರ್ಕಾರಿ ಉದ್ಯೋಗವನ್ನು ಪಡೆದು ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಬಾರದು. ಶಿಕ್ಷಣವೆಂದರೆ ಕೇವಲ ಗ್ರಂಥಗಳ ಅಧ್ಯಯನವೂ ಅಲ್ಲ. ವಿಷಯಗಳ ಸಂಗ್ರಹಣೆಯೂ ಅಲ್ಲ. ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮಾನವನನ್ನಾಗಿಸುವ ಶಿಕ್ಷಣ ಆಗಿರಬೇಕು. ಅಂತಹ ಮಾನವನ ಹಾಗೂ ಮಾನವೀಯ ಗುಣಗಳು ಅಭಿವೃದ್ಧಿಯಾಗಲು ತಕ್ಕ ಅವಕಾಶ ಮುಕ್ತವಾಗಿ ಶಿಕ್ಷಣದಲ್ಲಿ ದೊರೆಯಬೇಕು.

ಮನುಷ್ಯ ಮೊದಲು ಮಾನವನಾಗಿರಬೇಕು. ನಂತರ ಅವನು ವಿಜ್ಞಾನಿಯೋ, ವೈದ್ಯನೋ, ಇಂಜಿನಿಯರೋ, ವಕೀಲನೋ, ಕವಿಯೋ, ಕಲಾವಿದನೋ, ತತ್ವಶಾಸ್ತ್ರಜ್ಞನೋ ಮತ್ತೊಂದೋ ಆಗಬಹುದು.

ಹಾಗಾದರೆ ಶಿಕ್ಷಣದ ಮಹತ್ತರ ಉದ್ದೇಶ ಏನಾಗಿರಬೇಕು ?

ಶಿಕ್ಷಣಕ್ಕೆ ಮಹತ್ವ ಬರುವುದು ಅದನ್ನು ನೀಡುವ ಉದ್ದೇಶ, ಗುರಿ ಹಾಗೂ ವಿಧಾನಗಳಿಂದ ಮಾತ್ರ.. ಶಿಕ್ಷಣವೆಂದರೆ ಕೇವಲ ವಿದ್ಯಾದಾನವೇ ? ಅದು ಕೇವಲ ವಿದ್ಯಾದಾನವಾಗಿದ್ದರೆ ಇಂದಿನ ಸಾಮಾಜಿಕ ರಾಷ್ಟ್ರೀಯ ಹಾಗೂ ವೈಯಕ್ತಿಕ ಬದುಕು ಏಕೆ ಹದಗೆಡಬೇಕಾಗಿತ್ತು? ಲೌಕಿಕ ಬದುಕು ಉತ್ತಮಗೊಳ್ಳುತ್ತದೆಯೆಂದು ಕಂಡು ಬಂದರೂ ಮಾನವೀಯ ಬದುಕು ದಿನದಿಂದ ದಿನಕ್ಕೆ ಹದಗೆಡುತ್ತಿದೆ.

ವಿದ್ಯಾವಂತರ ಸಂಖ್ಯೆ ಹೆಚ್ಚಿದಷ್ಟು ಚಾರಿತ್ರ್ಯ ಹಾಗೂ ಮಾನವ ಸಂಬಂಧಗಳು ನಿಧಾನವಾಗಿ ಮಾಯವಾಗುತ್ತವೆ. ಜೀವನದ ಸೌಲಭ್ಯಗಳು ಹೆಚ್ಚಿದಷ್ಟು ಜೀವಿಗಳ ಬಾಂಧವ್ಯ ಮರೆಯಾಗುತ್ತಿದೆ. ಅಂದರೆ ನಮಗೆ ದೊರೆಕುತ್ತಿರುವ ಶಿಕ್ಷಣ ದೋಷಪೂರ್ಣವಾಗಿರಬೇಕು ಅಥವಾ ಅರ್ಥಪೂರ್ಣವಾಗಿಲ್ಲದಿರಬೇಕು.

ಸಮಾಜದ ಸಂಘಟನೆಯಲ್ಲಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಮಾನವನ ಶಿಕ್ಷಣ ಒಂದು ಪ್ರಮುಖ ಪ್ರಕ್ರಿಯೆ. ನಿಜವಾದ ಶಿಕ್ಷಣವೆಂದರೆ ಮನುಷ್ಯನ ಇಚ್ಛಾಶಕ್ತಿಯನ್ನು ಸರಿಯಾದ ಮತ್ತು ಸಮರ್ಥವಾದ ರೀತಿಯಲ್ಲಿ ಬಳಸುವಂತೆ ತರಬೇತಿ ನೀಡುವುದು. ವ್ಯಕ್ತಿಯಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನ ಸಂಪತ್ತನ್ನು ಉತ್ತಮ ಪರಿಸರದಲ್ಲಿ ವೀಕ್ಷಿಸುವಂತೆ ಮಾಡಿ ವ್ಯಕ್ತಿಯಲ್ಲಿ ಶಿಸ್ತು, ಚತುರತೆ, ಸ್ವಾತಂತ್ರ್ಯ ಹಾಗೂ ವಿಧೇಯತೆ ಭಾವನೆಯನ್ನು ಬೆಳೆಸುವುದೇ ಶಿಕ್ಷಣ.

ನಿಜವಾದ ದೈಹಿಕ, ಬೌದ್ಧಿಕ ಹಾಗೂ ಭಾವನಾತ್ಮಕ ದೃಷ್ಟಿಗಳಿಂದ ವ್ಯಕ್ತಿಯು ಸಮನಾಗಿ ಬದಲಾವಣೆ ಹೊಂದುತ್ತ ಬೆಳವಣಿಗೆ ಹಾಗೂ ಅಭಿವೃದ್ಧಿಗಳನ್ನು ಸಾಧಿಸುತ್ತಾನೆ. ಇದನ್ನೇ ಶಿಕ್ಷಣ ಎನ್ನಬಹುದು.

ಜೀವನ ಪರ್ಯಂತ ಗಳಿಸುವ ಅನುಭವವೇ ಶಿಕ್ಷಣ. ನಿಜವಾದ ಶಿಕ್ಷಣ ಒಬ್ಬ ಕಾರ್ಯಗತ ವ್ಯಕ್ತಿಯಲ್ಲಿ ಪರಿವರ್ತನೆಯನ್ನುಂಟುಮಾಡುತ್ತದೆ. ಇದೊಂದು ಜೀವನ ಪರ್ಯಂತ ನಡೆಯುವ ಕ್ರಿಯೆ. ಅದು ಹುಟ್ಟುಗುಣಗಳನ್ನು ವಿಕಾಶಮಾಡುತ್ತದೆ. ಉತ್ತಮ ಜೀವನ ನಡೆಸಲು ಸಹಾಯಕವಾಗುತ್ತದೆ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತವಾಗುತ್ತದೆ. ಮನುಷ್ಯನಲ್ಲಿ ಆಗಲೇ ಇರುವ ಮಾನವೀಯತೆಯ ಬೆಳವಣಿಗೆಯ ಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ಶಿಕ್ಷಣ.

ಶಿಕ್ಷಣ ಪಡೆದ ವ್ಯಕ್ತಿಯು ಹೃದಯದಲ್ಲಿ ಅಪರಿಮಿತ ಅನುಕಂಪ ಭಾವನೆಯನ್ನು ಕಾರ್ಯಗತಗೊಳಿಸುವ ದಕ್ಷತೆ ಹಾಗೂ ಹಿಡಿದ ಕಾರ್ಯವನ್ನು ಬಿಡದೆ ಸಾಧಿಸಬಲ್ಲ ಎದೆಗಾರಿಕೆ ಹೊಂದಿರಬೇಕು.

### ಇಂದಿನ ಶಿಕ್ಷಣವನ್ನು ನೀವು ಸಂಸ್ಕಾರಯುತವನ್ನಾಗಿ ಮಾಡಬೇಕು

ಸಂಸ್ಕಾರವೆಂಬುದು ಜೀವನದ ಕ್ರಮ. ಸಾಮಾಜಿಕ ಪರಂಪರೆ ಮತ್ತು ಸಾಮಾಜಿಕ ವಿಧಾನಗಳು ವ್ಯಕ್ತಿಯ ದೇಹಕ್ಕೆ ಸೌಂದರ್ಯಕ್ಕೆ ಒಂದು ಕಡೆ ಮೆರಗು ನೀಡಿದರೆ ಮತ್ತೊಂದೆಡೆ ಸಂಗೀತ, ಕಲೆ, ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದವುಗಳ ಬೆಳವಣಿಗೆ ಮನಸ್ಸಿಗೆ ನೆಮ್ಮದಿ ನೀಡುತ್ತವೆ.

ಮಕ್ಕಳ ಗಮನವನ್ನು ಸಂಸ್ಕಾರವೆಂಬ ಶಬ್ದಾರ್ಥದ ಕಡೆಗೆ ಸೆಳೆದರೆ ಮಾತ್ರ ಅವರು ತಮ್ಮ ನಡುವಳಿಕೆಗಳನ್ನು ಸುಧಾರಿಸಿಕೊಂಡು ಉನ್ನತಿಕರಿಸುತ್ತಾರೆ. ಸುಸಂಸ್ಕೃತವಾದ ಒಬ್ಬ ವ್ಯಕ್ತಿ ಬೆಲೆಕಟ್ಟಲಾಗದಂತಹ ಅತ್ಯುನ್ನತ ಮೌಲ್ಯವುಳ್ಳ ಸಮಾಜದ ಬಹುದೊಡ್ಡ ಆಸ್ತಿ.

ಸಂಸ್ಕಾರವು ಒಂದು ರಾಷ್ಟ್ರದ ಜೀವನಾಡಿಯ ಪ್ರತೀಕ. ಆದ್ದರಿಂದಲೇ ಒಂದೊಂದು ರಾಷ್ಟ್ರವು ತನ್ನ ಸಾಂಸ್ಕೃತಿಕ ಹೆಸರನ್ನು ಹೇಳತ್ತಾ ಬಂದಿವೆ.

ಉದಾ : ಭಾರತೀಯ ಸಂಸ್ಕೃತಿ, ಬ್ರಿಟಿಷ್ ಸಂಸ್ಕೃತಿ, ಅಮೇರಿಕಾಸಂಸ್ಕೃತಿ, ಜಪಾನ ಸಂಸ್ಕೃತಿ, ಇತ್ಯಾದಿ.

ಒಂದು ಜನಾಂಗದ ವೇಷ ಭೂಷಣಗಳು, ನಡವಳಿಕೆಗಳು ಆಚಾರ ವಿಚಾರಗಳು ಅವರ ಜ್ಞಾನ ಸಂಪತ್ತು, ಪ್ರತಿಭೆ, ನಾಗರಿಕ ಜನರ ಅಭಿಪ್ರಾಯ ಭಾವನೆಗಳೆಲ್ಲವೂ ಒಳಗೊಂಡಿರುವುದನ್ನು ಸಂಸ್ಕೃತಿ ಅಥವಾ ಸಂಸ್ಕಾರ ಎನ್ನುತ್ತೇವೆ.

ಒಂದು ಜನಾಂಗದ ಸತತವಾದ ವ್ಯವಸಾಯದಿಂದ ಉದ್ಭವಿಸಿದ ಅನುಭವವೇ ಸಂಸ್ಕಾರ. ಒಂದು ಜನಾಂಗ ತನ್ನ ಮುಂದಿನ ಜನಾಂಗಕ್ಕೆ ಈ ಸಂಸ್ಕಾರವನ್ನು ವರ್ಗಾಯಿಸುತ್ತಾ ಹೋಗುತ್ತದೆ. ಜೀವನದ ಉತ್ತಮ

ಸಂಸ್ಕಾರ ವ್ಯಕ್ತಿಯ ಅತ್ಯಂತ ಸೂಕ್ಷ್ಮ ನಡುವಳಿಕೆಗಳನ್ನು ಮತ್ತು ವೈಯಕ್ತಿಕ ವರ್ತನೆಗಳನ್ನು ವ್ಯಕ್ತಪಡಿಸುತ್ತದೆ. ಸುಸಂಸ್ಕೃತನಾದ ವ್ಯಕ್ತಿ ಆದರ್ಶ ಭಾವನೆಯನ್ನು, ಕಲೆಯನ್ನು ಮೆಚ್ಚುವನಲ್ಲದೆ ವಿಶಾಲವಾದ ಮಾನವೀಯತೆಯಿಂದ ಕೂಡಿದ ಆಸಕ್ತಿಯನ್ನು ಹೊಂದಿ ಸಮಾಜ ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ.

ನಿಜವಾದ ಶಿಕ್ಷಣದ ಕಾರ್ಯವೆಂದರೆ ವ್ಯಕ್ತಿಯನ್ನು ಸಂಸ್ಕಾರವುಳ್ಳವನನ್ನಾಗಿ ಮಾಡುವುದು. ಸತ್ ಚಿಂತನೆಗೆ ಸತ್ ಕಾರ್ಯಕ್ಕೆ ಸದ್ ವರ್ತನೆಗಳು ಪ್ರೇರಕ ಶಕ್ತಿಯಾಗಿ ನಿಲ್ಲುವುದೇ ದಿವ್ಯ ಸಂಸ್ಕೃತಿಯ ಲಕ್ಷಣ. ನಿಜವಾದ ಶಿಕ್ಷಣ ವ್ಯಕ್ತಿಗೆ ಸಂಸ್ಕಾರವನ್ನು ನೀಡುತ್ತದೆ. ಸಂಸ್ಕಾರವೇ ಶಿಕ್ಷಣ, ಶಿಕ್ಷಣವೇ ಸಂಸ್ಕಾರ.

ವ್ಯಕ್ತಿಯು ಜನನದಿಂದ ಮರಣದವರೆಗೆ ವಿವಿಧ ರೀತಿಯ ಸಂಸ್ಕಾರಗಳಿಗೆ ಒಳಗಾಗುತ್ತಾನೆ. ಹುಟ್ಟು, ಮುಂಜಿ, ಮದುವೆ, ಹಾಗೂ ಮರಣ ಇತ್ಯಾದಿಗಳಲ್ಲಿ ಸಂಸ್ಕಾರವೇ ಪ್ರಧಾನ. ಸಂಸ್ಕಾರ ವ್ಯಕ್ತಿಯ ಜೀವನವನ್ನು ಪಾವನವನ್ನಾಗಿ ಮಾಡುತ್ತದೆ.

ಸಂಸ್ಕಾರ ನಿರ್ಜೀವ ವಸ್ತುಗಳಲ್ಲಿ ದೈವೀಶಕ್ತಿಯನ್ನು ತುಂಬುತ್ತದೆ. ನಿರ್ಜೀವ ವಸ್ತುಗಳಿಗೆ ಸಂಸ್ಕಾರ ಕೊಡುತ್ತೇವೆ. ಅವುಗಳನ್ನು ಪೂಜ್ಯನೀಯವಾಗಿ ಆರಾಧಿಸುತ್ತೇವೆ. ಶಿಕ್ಷಣ ಮಾನವರಲ್ಲಿ ಸಂಸ್ಕಾರಯುಕ್ತ ಕ್ರಿಯೆಗಳನ್ನು ಪೂರೈಸಿ ವ್ಯಕ್ತಿಯನ್ನು ಪೂಜ್ಯನೀಯವಾಗಿ ಮಾಡುತ್ತದೆ.

ಶಿಕ್ಷಣ ಮತ್ತು ಸಂಸ್ಕಾರಗಳೆರಡೂ ಮನುಷ್ಯನಿಗೆ ಇಂದು ಅನಿವಾರ್ಯವಾಗಿದೆ. ಪೂಜ್ಯ ಮತ್ತು ಪಾವನ ಶಕ್ತಿಯ ಪ್ರತೀಕವೇ ಸಂಸ್ಕಾರ. ಸಂಸ್ಕಾರ ಮತ್ತು ಶಿಕ್ಷಣ ಮಕ್ಕಳನ್ನು ಶಕ್ತಿಯುತರನ್ನಾಗಿ ಹಾಗೂ ಪಾವನರನ್ನಾಗಿ ಮಾಡುತ್ತವೆ.

ನಿಜವಾದ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳ ಕಾರ್ಯ ಇಂದು ಅತಿ ಮಹತ್ವದು. ಜೀವನದ ನೆಮ್ಮದಿಗಾಗಿ ವಿವಿಧ ರಂಗಗಳಲ್ಲಿ ಕಾರ್ಯವೆಸಗಲು ಯೋಗ್ಯ ನಾಯಕರನ್ನು ರೂಪಿಸುವ ಹೊಣೆ ವಿಶ್ವವಿದ್ಯಾಲಯಗಳ ಪವಿತ್ರ ಕರ್ತವ್ಯವಾಗಬೇಕು.

ಅತ್ಯುತ್ತಮ ಶಿಕ್ಷಣ–ತರಬೇತಿ ಪಡೆದ ಯುವಜನರ ನಿರ್ಮಾಣ ವಿಶ್ವವಿದ್ಯಾನಿಲಯಗಳ ಗುರಿಯಾಗಬೇಕು. ಈ ಶಿಕ್ಷಣ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಾಗಬಾರದು. ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾಗುವ ಜ್ಞಾನ ದೇಶದ ನಾಡಿನಾಡಿಯಲ್ಲೆಲ್ಲ ಪ್ರವಹಿಸಿವಂತಾಗಬೇಕು. ಆಗ ಮಾತ್ರ ವಿಶ್ವವಿದ್ಯಾನಿಲಯದ ಅಸ್ತಿತ್ವ ಸಾರ್ಥಕವಾಗುತ್ತದೆ. ಇದರಿಂದ ಒಟ್ಟಾರೆ ವೈಯಕ್ತಿಕ ಮತ್ತು ಸಮಾಜದ ಬಾಳು ಸುಖಮಯವಾಗುತ್ತೆ.

**ಈಪವಿತ್ರ ಕರ್ತವ್ಯವನ್ನು ನೇರವೇರಿಸಲು ವಿಶ್ವವಿದ್ಯಾಲಯಗಳು ಜ್ಞಾನದಾನ ಮತ್ತು ಪ್ರಸಾರದ ಜೊತೆಗೆ ಸಂಗೀತ, ಸಾಹಿತ್ಯ, ಸಂಸ್ಕೃತಿಯ ಪೋಷಣೆಮಾಡಬೇಕು.**

# ನಿವೇದನೆ

ಧರೆಗಿಳಿದು ಬಂದ
ವಿಶ್ವಮಾನವರೆಲ್ಲರಿಂದ
ಮೂಡಿಹುದು ನೋಡಿ
ಮುನ್ನುಡಿಯ ಈ ಮೋಡಿ
ದಿವ್ಯ ಪ್ರಾರ್ಥನೆಯ ತಾ ಮಾಡಿ
ಭವ್ಯ ಸುಸ್ವಾಗತವ ತಾ ನೀಡಿ
ಮಾನವ ಜೀವನದ ಸಾರ್ಥಕತೆಯ ಪರಿಚಯಿಸುತ್ತ ತಾ ಓಡಿ
ನವ್ಯ ನಿವೇದನೆಯ ಈ ಮುನ್ನುಡಿ ಹೇಗಿದೆ ಓದಿ ನೋಡಿ ॥

ಸಾರ್ಥಕತೆ : ಜೀವನ ದರ್ಶನ – ಜೀವನ ಸಂದರ್ಶನ – ಜೀವನ ಸಂಮ್ಮಿಲನ ಸತ್ಕೃತಿಯ ಆರಂಭದ ಅಮೃತ ಘಳಿಗೆಯಲ್ಲಿ ಆಕಾಶದಿಂದ ದೇವದೇವತೆಗಳು, ಋಷಿಮುನಿಗಳು ಹೂಮಳೆಗರೆದು ತಮ್ಮ ಅಭಯ ಹಸ್ತದಿಂದ ಆಶೀರ್ವಾದ ಮಾಡುತ್ತಿರುವುದನ್ನು ನೋಡಿ ಆನಂದಪರವಶನಾಗಿ ನನ್ನ ಕಲ್ಪನೆಯ ನೈಜ ಕನಸು ಮತ್ತು ನನಸುಗಳ ಈ ಸಾರ್ಥಕತೆ ಕೃತಿ ಹೇಗೆ ವಿರಚಿತವಾಗಿ ಮೂಡಿ ಬರಬೇಕೆಂಬ ಹೆಬ್ಬಯಕೆಯನ್ನು ನಯ, ವಿನಯ, ಒಲುಮೆ, ನಲ್ಮೆಯಿಂದ ನಿವೇದಿಸುತ್ತಿದ್ದೇನೆ.

ಕಸ್ತೂರಿಯಂತೆ ಕಂಪನ್ನು ಬೀರುವ ಕನ್ನಡ ಭಾಷೆಯ ನುಡಿಮುತ್ತುಗಳಲ್ಲಿ ಈ ಸಾರ್ಥಕತೆ ಮೂಡಿ ಬರಲಿ. ಹಿಂದಿನ ಕಾಲದ ಸಾಹಿತಿಗಳು, ವಿದ್ವಾಂಸರು, ವಿಮರ್ಶಕರು, ಕವಿಪುಂಗವರು, ವ್ಯಾಕರಣಕಾರರು, ಅಲಂಕಾರಶಾಸ್ತ್ರಜ್ಞರು, ಪಂಡಿತರು ಎತ್ತಿ ಹಿಡಿದಿರುವ ಆದರ್ಶಗಳನ್ನು, ವಿಚಾರಲಹರಿಗಳನ್ನು, ಕಾವ್ಯ ಲಕ್ಷಣಗಳನ್ನು, ಗ್ರಹಿಸಿ, ಆ ಸತ್ಕವಿಗಳಿಗೆಲ್ಲ ನಮಿಸಿ ಅವರ ಆದರ ಪ್ರಶಂಸೆಗೆ ಪಾತ್ರವಾಗುವಂತೆ ರಮಣೀಯ ಕಾವ್ಯಧರ್ಮದಿಂದ, ಕಾವ್ಯ ಕೃಷಿಯಿಂದ ಈ ಸತ್ಕೃತಿ ರಚಿತವಾಗಲಿ.

ವಿಶ್ವಮಾನ್ಯವಾದ ಪಾತ್ರಸೃಷ್ಟಿ, ಆಕರ್ಷಕ ಕಥಾವಸ್ತು, ಉತ್ತಮೋತ್ತಮ ಪಾತ್ರ ಪೋಷಣೆ, ಕುಶಲ ಸಂಭಾಷಣೆ, ಹೃದಯಂಗಮ ರಸಭಾವ ನಿರೂಪಣೆ, ಮನೋಹರವಾದ ಶೈಲಿ, ಪ್ರತಿಭಾಮಯವಾದ ವರ್ಣನೆ, ಉದಾರವೂ, ಗಂಭೀರವೂ, ಉಜ್ವಲವೂ ಆದ ಭಾವಗಳು, ಕಿವಿಗಿಂಪಾದ ಶಬ್ಧಾಲಂಕಾರಗಳು, ಚಿತ್ತ ಪರಿಪಾಕವನ್ನುಂಟು ಮಾಡುವ ನೀತಿಬೋಧೆ, ಜೊತೆಗೆ ವಿದ್ವಾಂಸರನ್ನು, ಜಾಣರನ್ನು, ರಸಿಕರನ್ನು, ಸಾಹಿತಿಗಳನ್ನು, ಕಲಾವಿದರನ್ನು ಮೆಚ್ಚಿಸುವ ಮಾಣಿಕ್ಯದಂತ ಮಾತುಗಳು, ರಸವತ್ತಾದ ಪದಪುಂಜಗಳು, ಸರಸವಾದ ಉಕ್ತಿಗಳ ಚಮತ್ಕಾರ, ಭಕ್ತಿಯ ಆವೇಶ, ಓಜಸ್ಸು, ತೇಜಸ್ಸುಗಳಿಂದ ತುಂಬಿ ತುಳುಕುವ ಕಥಾಕಥನ, ಭಾಷಾ ಮಾಧುರ್ಯ ಶೈಲಿ ಇವೆಲ್ಲವುಗಳ ಸಮೀಕರಣದಿಂದ ಮೈಗೂಡಿ, ಈ ಸಾರ್ಥಕತೆಯ ಕೃತಿ ಮೂಡಿಬರಲಿ.

ಈ ಸಾರ್ಥಕತೆ ಕೃತಿ ವಿನೂತನವಾದ, ನಿತ್ಯನೂತನವಾದ, ನವಚೇತನವನ್ನು ಬಾಳಿಗೆ ನೀಡುವ ಲೌಕಿಕ ಮತ್ತು ಪಾರಮಾರ್ಥಿಕ ಸತ್ವಗಳಿಂದ, ತಾತ್ವಿಕ ವಿಷಯಗಳಿಂದ, ಸಿದ್ಧಾಂತಗಳ ಖನಿಯಾಗಿ, ಸ್ಫಟಿಕದಂತೆ, ವಿಚಾರಧಾರೆಗಳನ್ನು, ಪ್ರತಿಬಿಂಬಿಸುತ್ತ, ರಸಧಾರೆಗಳ ಬುಗ್ಗೆಗಳನ್ನು, ರಸಕಾರಂಜಿಗಳನ್ನು, ಸ್ಫುರಿಸುತ್ತ, ಮಾನವನ

ಬಾಳಿನ ಅಂತರಿಕ ಹಾಗೂ ಬಹಿರಂಗ ಜೀವನದ ಕಿಲುಬನ್ನು ಶುದ್ಧಿಗೊಳಿಸುತ್ತಾ ಮಾನವನ ವಾತಾವರಣವನ್ನು ಪರಿಶುದ್ಧಿಗೊಳಿಸಿ, ಜೀವನವನ್ನು ಪಾವನಗೊಳಿಸಲಿ.

ಈ ಸಾರ್ಥಕತೆ ಕಾವ್ಯಪ್ರಪಂಚದ ಕಲ್ಪವೃಕ್ಷವಾಗಿ, ರಸಿಕರ ಕಾಮಧೇನುವಾಗಿ, ಸಹೃದಯರ ಚಿಂತಾಮಣಿಯಾಗಿ, ಸೃಜನಶೀಲ ವಿಚಾರಧಾರೆಗಳಿಂದ ಮೂಡಿಬರಲಿ. ಪುಷ್ಪ ಸಮುದಾಯದಲಿ ಗುಲಾಬಿ ಹೂವುಗಳ ಹಾಗೆ ಸೊಬಗು ಸುವಾಸನೆಗಳೆರಡನ್ನೂ ಏಕಕಾಲದಲ್ಲಿ ಪಡೆದು ಮೆರೆಯುವ ಭಾಗ್ಯ, ಕಾವ್ಯ ಸಮುದಾಯದಲ್ಲಿ ಈ ಸಾರ್ಥಕತೆಗೆ ದೊರೆಯಲಿ.

ಕರ್ನಾಟಕ ಕವಿಗಳೆಂಬ ಮಾವಿನ ತೋಪಿನ ವಸಂತಮಾಸವೆಂಬ ಕೋಗಿಲೆ ಆಹ್ಲಾದಕರವಾಗಿ ಹಾಡಿದಂತೆ ಈ ಶ್ರೇಷ್ಠವೂ, ಪವಿತ್ರವೂ ಆದ ಸಾರ್ಥಕತೆಯು ಸಮಸ್ತ ವಿದ್ವನ್ಮಂಡಲಿಯು ವಿನಯದಿಂದ ಮೆಚ್ಚಿ ನಲಿಯುವಂತೆ ಮೂಡಿ ಬರಲಿ. ಈ ಸಾರ್ಥಕತೆಯ ಮಕರಂದವು ರಸಿಕರೆಂಬ ಗಿಳಿಗಳನ್ನೂ, ಗಮಕಿಗಳೆಂಬ ಕೋಗಿಲೆಗಳನ್ನೂ, ಸಹೃದಯರೆಂಬ ದುಂಬಿಗಳನ್ನೂ, ಜಿಜ್ಞಾಸುಗಳೆಂಬ ಜೀವ ಕೋಟಿಗಳನ್ನು ಸದಾ ತನ್ನೆಡೆಗೆ ಬರಮಾಡಿಕೊಳ್ಳಲಿ. ಓದುಗರೆಂಬ ದುಂಬಿಗಳು ಈ ಸಾರ್ಥಕತೆಯೆಂಬ ಹೂವಿನ ಮಧುರವಾದ ಮಕರಂದವನ್ನು ಹೀರಿ, ವಿದ್ವಾಂಸರ ಸಭೆಯೆಂಬ ಸರೋವರದಲ್ಲಿ ಸುಲಲಿತವಾಗಿ ಝೇಂಕರಿಸಲಿ.

ಹೃದಯ ಸಂವೇದನೆಯಂತೆ, ಸಂದೇಶದಂತೆ ಸತ್ಯತೆಯು ಸಾಬೀತಾಗಿ ಮಾನವಮತದ ವಿಶ್ವಪಥದ ಹಿರಿಮೆಗರಿಮೆಗಳನ್ನು ಸಾರುವ ಮಹಾಮೇರು ಕಾವ್ಯವಾಗಿ, ಕಾವ್ಯ ಪ್ರಪಂಚದಲ್ಲಿ ಸಾರ್ಥಕತೆ ಬೆಳಗಲಿ.

ಈ ಸಾರ್ಥಕತೆಯು ಭಾರತೀಯ ಸಂಸ್ಕೃತಿಯ ಅಳತೆಗೋಲಾಗಿ ಭಾವಿಸಲ್ಪಟ್ಟು, ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಜನಪ್ರಿಯವಾಗಿ, ಭಾರತೀಯ ಕಾವ್ಯಾಮೃತವನ್ನು ಪಾನ ಮಾಡಬೇಕೆಂದು ಬಯಸುವ ವಿಶ್ವದ ಸಮಸ್ತ ಕೋಟಿಮಾನವರಿಗೂ ಹಾಲಿನ ಹೊಳೆಯಾಗಲಿ, ಅಮೃತ ಸಾಗರವಾಗಲಿ, ವಿಶ್ವಮಾನವರ, ಭಾರತೀಯರ ಹಾಗೂ ಕನ್ನಡಿಗರ ಅಭಿಮಾನವನ್ನು ಕೆರಳಿಸಿ, ಕನ್ನಡ ಸಾಹಿತ್ಯದ ಶೆಹನಾಯ್ ಊದಿ, ಕನ್ನಡ ಕಹಳೆ ಮೊಳಗಲಿ. ಈ ಸಾರ್ಥಕತೆಯ ಕೀರ್ತಿಲತೆ ಕನ್ನಡ ನಾಡಿನಲ್ಲೆಲ್ಲಾ ಹಬ್ಬಿ, ಭಾರತದೇಶದಲ್ಲೆಲ್ಲಾ ಹರಡಿ, ವಿಶ್ವದಾದ್ಯಂತ ವ್ಯಾಪಿಸಲಿ.

ಡಾ॥ ಸಿ. ರಾಮಸ್ವಾಮಿ

ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ,

ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೂಡುತ್ತದೆ,

ಕನ್ನಡಕ್ಕಾಗಿ ಕಿರು ಬೆರಳೆತ್ತಿದ್ದರೂ ಸಾಕು,

ಅದೇ ಗೋವರ್ಧನ ಗಿರಿಯಾಗುತ್ತದೆ.

– ಕನ್ನಡದ ಕಂಪು ಕುವೆಂಪು

ಸಂಗೀತಕ್ಕಾಗಿ ಕೊರಳೆತ್ತು, ನಿನ್ನ ಕಂಠಸ್ವರ ಕಾಮಧೇನುವಾಗುತ್ತದೆ.
ಸಾಹಿತ್ಯಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.
ಸಂಸ್ಕೃತಿಗಾಗಿ ಕಿರು ಬೆರಳೆತ್ತಿದ್ದರೂ ಸಾಕು,
ವಿಶ್ವ ಶಾಂತಿಗೆ ನಾಂದಿಯಾಗುತ್ತದೆ.

ಡಾ॥ ಸಿ. ರಾಮಸ್ವಾಮಿ

# ಕೃತಜ್ಞತೆ

" ಸಾರ್ಥಕತೆ : ಜೀವನ ದರ್ಶನ – ಜೀವನ ಸಂದರ್ಶನ – ಜೀವನ ಸಂಮ್ಮಿಲನ " ಈ ಸತ್ಕೃತಿಯ ರಚನೆಯಲ್ಲಿ ಕನ್ನಡ ಹಾಗೂ ಆಂಗ್ಲಭಾಷೆಯ ಹಲವಾರು ಗ್ರಂಥಗಳಿಂದ ಪ್ರಯೋಜನ ಪಡೆದಿದ್ದೇನೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಿರಿಯರ–ಹಿರಿಯರ ಅನೇಕ ಜೀವನಾನುಭವಗಳನ್ನು ಕೇಳಿ, ಓದಿ ತಿಳಿದುಕೊಂಡಿರುವುದನ್ನು ಈ ಬರಹದಲ್ಲಿ ಬಳಸಿಕೊಂಡಿದ್ದೇನೆ.

ಅನೇಕ ಮಹನೀಯರ ಸದ್ಗಂಥಗಳ ಸದ್ವಿಚಾರಗಳನ್ನು ಅಳವಡಿಸಿಕೊಂಡಿರುತ್ತೇನೆ. ಆಯಾಯ ಸಂದರ್ಭಗಳಲ್ಲಿ ಗ್ರಂಥ–ಗ್ರಂಥಕರ್ತರ ಹೆಸರುಗಳನ್ನು ವಿಶದವಾಗಿ ಸೂಚಿಸಬಯಸಿದ್ದೆ. ಆದರೆ ಆ ಗ್ರಂಥ–ಗ್ರಂಥಕರ್ತರ ಹೆಸರುಗಳನ್ನು ಸ್ಥಳಾವಕಾಶದ ಕೊರತೆಯಿಂದ ಅಲ್ಲಲ್ಲೇ ಸೂಚಿಸಲು ಸಾಧ್ಯವಾಗಿಲ್ಲ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಈ ಸತ್ಕೃತಿಯ ಹಸ್ತಪ್ರತಿಯನ್ನು ಓದಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಶದ್ಧೆಯಿಂದ ಸಕಾಲದಲದಲ್ಲಿ ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಶ್ರೀ ಎನ್. ಪುಟ್ಟರುದ್ರರವರಿಗೂ, ಶ್ರೀ ಎಂ.ಆರ್. ನರೇಂದ್ರರವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಪ್ರಕಟಣೆಯ ಮುನ್ನಡೆಯನ್ನು ಆಗಿಂದಾಗ್ಗೆ ವಿಚಾರಿಸಿ, ಅನೇಕ ರೀತಿಯ ಸಹಾಯಮಾಡಿ ಪ್ರೋತ್ಸಾಹಿಸಿದ ಪುನರ್ಜನ್ಮ ಸಂಶೋಧನಾ ಕೇಂದ್ರದ ಅಭಿಮಾನಿಗಳಾದ ಶ್ರೀ ಎಸ್.ರಮೇಶ್, ಶ್ರೀ ಎಮ್.ಎಸ್. ರಾಮಯ್ಯ ಇತ್ಯಾದಿ ಸಹೃದಯರಿಗೆ ನನ್ನ ಅನಂತ ಧನ್ಯವಾದಗಳು.

ಈ ಸತ್ಕೃತಿಯನ್ನು ಹೊರತರಲು ನನ್ನೊಡನೆ ಬಾಗಿಗಳಾದ ನನ್ನ ಧರ್ಮಪತ್ನಿ ಶ್ರೀಮತಿ ಬಿ.ಎಲ್. ಮಂಗಳಗೌರಿ, ನನ್ನ ಸುಪುತ್ರಿಯರಾದ ಶ್ರೀಮತಿ ಆರ್. ಸೌಮ್ಯ, ಶ್ರೀಮತಿ ಆರ್. ಸುಷ್ಮ, ಕುಮಾರಿ ಆರ್.ಸುಷುಪ್ತಿ ಇವರುಗಳು ನೀಡಿದ ಸಹಕಾರವನ್ನು ನಾನು ಎಂದೆಂದಿಗೂ ಮರೆಯಲಾರೆ. ವಾನೀಗ ಅವರ ಸಹಾಯವನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ.

ಡಾ|| ಸಿ. ರಾಮಸ್ವಾಮಿ

"ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿಯುವುದು
ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು"

– ಕನ್ನಡದ ಕಂಪು ಕುವೆಂಪು

" ಪುನರ್ಜನ್ಮ ಸಂಶೋಧಕ ರಚಿಸಿದನೆಂದರೆ
ಕಲಿಯುಗ ಕೃತಯುಗವಾಗುವುದು
ವಿಶ್ವಮಾನವ ಧರ್ಮ ಉದಯಿಸುವುದು
ಭೂಲೋಕದಲ್ಲಿ ಸಾಕ್ಷತ್ಕಾರ ಜ್ಞಾನ ಮಿಂಚುವುದು "

ಡಾ|| ಸಿ. ರಾಮಸ್ವಾಮಿ

# ಅರ್ಪಣೆ– ಸಮರ್ಪಣೆ

**ಸಂಪತ್ತಿನ ಸಂಗ್ರಹದಲ್ಲಿ, ಸಲ್ಲದ ಸಲ್ಲಾಪದಲ್ಲಿ,**
**ಸಂಕಷ್ಟಗಳ ಸುಳಿಯಲ್ಲಿ ಸದಾ ಸುತ್ತುತ್ತಾ**
**ಸಂತೃಪ್ತರಾಗಿರುವ ಸಾಮಾನ್ಯರಿಗೆ,**

**ಸಿದ್ಧಹಸ್ತರಾಗಿ ಸಹಾಯ ಸಹಕಾರಗಳನ್ನು ಸಂವತ್ಸರಗಳಿಂದ**
**ಸನ್ಮಾರ್ಗದಿಂದ ಸದಾ ನೀಡುತ್ತಾ ಸತ್ಸಂಗದ ಸದ್ವಿಚಾರಗಳಿಂದ**
**ಸರ್ವರನ್ನೂ ತಮ್ಮೆಡೆಗೆ ಸೆಳೆಯುತ್ತಿದ್ದ**

**ನನ್ನ ಪರಮಪೂಜ್ಯ ಮಾತಾಪಿತೃಗಳಾದ**
**ಶ್ರೀಮತಿ ಸಿದ್ದಮ್ಮ ಮತ್ತು ಶ್ರೀ ಚನ್ನೇಗೌಡರ**



**ಪಾದಾರವಿಂದಗಳಿಗಳಿಗೆ**

**ಗೌರವ ಹೃತ್ಪೂರ್ವಕ**

## ಅರ್ಪಣೆ – ಸಮರ್ಪಣೆ

## ವಿಶ್ವಮಾನವ ಸಂಸ್ಕೃತಿಯ ಕನ್ನಡದ ಕಹಳೆ ಮೊಳಗಲಿ

ಕನ್ನಡದ ರವಿ ತಾ ಮೂಡಿ ಬಂದ ಬೆಳಕನ್ನು ತಾ ತಂದಾ
ವಿದ್ಯೆಯ ಕಲಿತು ವಿದ್ಯೆಯ ಕಲಿಸಿ ಜ್ಞಾನವಾ ಹರಡೋಣ
ಸತ್ಯ ಧರ್ಮ ನ್ಯಾಯದ ಮಾರ್ಗದಲ್ಲಿ ಮುಂದೆ ಸಾಗೋಣ
ಪ್ರೇಮ ಕರುಣಯ ಕಲಿಸಿ ಶಾಂತಿ ಸಹನೆಯ ಬೆಳೆಸೋಣ
ಜಾತಿ ಧರ್ಮ ಭೇದವ ತೊರೆದು ಒಂದಾಗಿ ಬಾಳೋಣ
ಒಂದೇ ಜಗವು ಒಂದೇ ಕುಲವು ಒಂದೇ ದೈವವು
ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ
ಶಾಂತಿಯೆ ಉಸಿರಾಗಿರಲಿ ಸೇವೆಯೆ ಗುರಿಯಾಗಿರಲಿ
ಒಮ್ಮನದಿಂದ ಎಲ್ಲರು ದುಡಿದು ಜಗವನೆಗೆಲ್ಲೋಣ
ವಿಶ್ವಮಾನವ ಸಂಸ್ಕೃತಿಯ ನವಯುಗ ನಿರ್ಮಿಸೋಣ
ಸಿರಿಗನ್ನಡದ ಭಾಷಾಸಾಹಿತ್ಯವ ಸ್ವರ್ಣಾಕ್ಷರದಲ್ಲಿ ಬರೆಯೋಣ
ಲೋಕ ಸನ್ಮಾನಿತ ಸತ್ಯಯುಗ ಉದಯ ಚರಿತ್ರೆಯ ಸ್ವಾಗತಿಸೋಣ

ಮೊಳಗಲಿ
ಮೊಳಗಲಿ
**ಮೊಳಗಲಿ ವಿಶ್ವಮಾನವ ಸಂಸ್ಕೃತಿಯ**
**ಕನ್ನಡ ಕಹಳೆ ಮೊಳಗಲಿ**





**ಸಿರಿಗನ್ನಡಂ ಗೆಲ್ಗೆ**
**ಸಿರಿಗನ್ನಡಂ ಬಾಳ್ಗೆ**

# ಇದು
# ಪುನರ್ಜನ್ಮ ಸಂಶೋಧನಾ ಕೇಂದ್ರ ಆಚರಿಸುತ್ತಿರುವ
# ಕನ್ನಡ ರಾಜ್ಯೋತ್ಸವ
# ಕನ್ನಡ ವಿಜಯೋತ್ಸವ

# ಸ್ವಾಗತ – ಸುಸ್ವಾಗತ



## ಸ್ವಾಗತ – ಸುಸ್ವಾಗತ

ಸರ್ವರನು ಸುಸ್ವಾಗತಿಸುವ ಸುಯೋಗದ ಸವಿನೆನಪಿನಲ್ಲಿ ನಾ ನಿಂದು

ಓದುಗರಿಗೆ ಹೊಸ ಹೊಸ ಆಸೆ–ಆಕಾಂಕ್ಷೆಯ ಸುಜ್ಞಾನ ಸಂದೇಶ ನಾ ತಂದು

ಮುಂದಿನ ಕೃತಯುಗದಲ್ಲಿ ಪಂಚಮ ವೇದಗಳೆಂದೇ ಕರೆಯಬಹುದಾದ ಈ ಸತ್ಕೃತಿಗಳ
ಜ್ಞಾನ, ವಿಜ್ಞಾನ, ಸುಜ್ಞಾನ, ದಿವ್ಯಜ್ಞಾನ ದೇಗುಲಕೆ
ಎಲ್ಲರೂ ಕೈಮುಗಿದು ಬನ್ನಿರೆಂದು
ವಿನಂತಿಸಿ ಸುಸ್ವಾಗತಿಸುವ ಕಾಲ ಸಮೀಪಿಸುತ್ತಿರುವುದು ನಿಮ್ಮೊಡನಿಂದು

ಇದೊಂದು ಶುಭಘಳಿಗೆ
ಅನೇಕ ಜನ್ಮಜನ್ಮಾಂತರಗಳಿಗೆ

ಒಮ್ಮೊಮ್ಮೆ ತಾ ಮೂಡಿ ಬರುವ ಸಾರ್ಥಕತೆಯ ಜ್ಞಾನಾನುಭವದ ಶುಭಗಳಿಗೆ
ಸರ್ವರೂ ಸವಿಯ ಬಯಸುವ ಸಾಕ್ಷಾತ್ಕಾರ ದಿವ್ಯಜ್ಞಾನಾಮೃತದ ಅಮರಗಳಿಗೆ

# ಸಾಕ್ಷರತೆ: ಮಾನವ ಸಂಸ್ಕೃತಿಯ ಸಂವೇದ

ಅಂದು ಭಾನುವಾರ. ಬೆಂಗಳೂರು ಮೆಡಿಕಲ್ ಕಾಲೇಜಿನ ಆಡಿಟೋರಿಯಂನಲ್ಲಿ ಕಾಲೇಜಿನ ಡೀನ್ ಡಾ॥ವ್ಯಾಸರಾಯರ ಆಧ್ಯಕ್ಷತೆಯಲ್ಲಿ ಸಂಸ್ಕೃತಿಯ ಸಂವೇದ ಎಂಬ ವಿಷಯದ ಬಗ್ಗೆ ಚರ್ಚಾಕೂಟ ಪ್ರಾರಂಭ ವಾಯಿತು. ಆಗ ಡಾ॥ಶೀಲ ಡಾ॥ರಾಮುವಿಗೆ ನೇರವಾಗಿ ಎದುರಾಗಿ ಬಂದು ಕುಳಿತಳು.

ಒಂದು ಕಡೆ ವಿನಯ ಮತ್ತು ಗಾಂಭೀರ್ಯ ಮೂರ್ತಿಯೇ ಆಗಿದ್ದ ಡಾ॥ರಾಮು ಸುಸಂಸ್ಕೃತ ತರುಣನಾಗಿ ಕುಳಿತಿದ್ದರೆ ಇನ್ನೊಂದು ಕಡೆ ಸ್ವುರದ್ರೂಪಿಣಿ ಸೌಂದರ್ಯಗಳ ಮೂರ್ತಿಯೇ ಆಗಿದ್ದ ತರುಣಿಯಾದ ಡಾ॥ಶೀಲ ಸಂಭಾಷಣೆಗೆ ಮಂಡಿಸಿದ್ದಳು. ಆಡಿಟೋರಿಯಂನಲ್ಲಿ ಜನರು ಕಿಕ್ಕಿರಿದು ತುಂಬಿ ಚಪ್ಪಾಳೆ ಸುರಿಮಳೆಗೈದರು. ಡಾ॥ರಾಮು ಮತ್ತು ಡಾ॥ಶೀಲ ಕಣ್ಣು ಮುಚ್ಚಿ ವಾಗ್ದೇವಿಯನ್ನು ನೆನೆದರು.

ಕಾಲೇಜಿನ ಎದುರಿಗಿದ್ದ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ಸಮಯದ ಅರ್ಚನೆಯ ಘಂಟಾರವು ಜಾಗಟೆ, ಶಂಖನಾದದ ಧ್ವನಿ ವಾದ್ಯ ಘೋಷಣೆಗಳ ಜೊತೆಗೆ ಮೊಳಗುತ್ತಿತ್ತು.

## 1. ಸಂಸ್ಕೃತಿ

### ಸಂಸ್ಕೃತಿಯ ಸಂವೇದ

ಡಾ॥ಶೀಲ : ಸಂಸ್ಕೃತಿ ಎಂದರೇನು ?

ಡಾ॥ರಾಮು : ನೂರಾರು, ಸಾವಿರಾರು ವರ್ಷಗಳ ನಡುವಳಿಕೆ ಮತ್ತು ತಿಳುವಳಿಕೆಯ ಫಲವಾಗಿ ಸಮಾಜಕ್ಕೆ ಕೂಡಿ ಬರುವ ಸಂಸ್ಕಾರ ವಿಶೇಷವನ್ನು ನಾವು ಸಂಸ್ಕೃತಿಯೆಂದು ಕರೆಯುತ್ತೇವೆ. ಅಂದರೆ ಮನುಷ್ಯನಲ್ಲಿ ಮೃಗತ್ವವನ್ನು ಹೋಗಿಸಿ ಅಲ್ಲಿ ನಿಜವಾದ ಮಾನವೀಯತೆಯನ್ನು ಸ್ಥಾಪಿಸುವುದೇ ಸಂಸ್ಕೃತಿ.

ಡಾ॥ಶೀಲ : ಸಂಸ್ಕೃತಿ ಏನ್ನನ್ನು ಹೇಳುತ್ತದೆ ?

ಡಾ॥ರಾಮು : ಸಂಸ್ಕೃತಿಯು ಒಂದು ನಾಡಿನ ಜನತೆಯ ಒಟ್ಟಾರೆಯಾದ ಜೀವನ ವಿಧಾನವನ್ನು ಹೇಳುತ್ತದೆ. ಮಾನವನ ಜೀವನ ವಿಧಾನದ ಬೆಳವಣಿಗೆಯಲ್ಲಿ ಅದು ಬೆಳೆಯುವ ರೀತಿಯನ್ನು ಬದಲಾವಣೆಯಾಗುವ ರೀತಿಯನ್ನು ಜೀವನ ವಿಧಾನವನ್ನು ಹೇಳುತ್ತದೆ.

ಡಾ॥ಶೀಲ : ಸಂಸ್ಕೃತಿ ಏನ್ನನ್ನು ಒಳಗೊಂಡಿರುತ್ತದೆ ?

ಡಾ॥ರಾಮು : ಸಂಸ್ಕೃತಿ ಎಂದರೆ ಜನತೆಯ ಧರ್ಮ, ಮೌಲ್ಯ, ಸಾಹಿತ್ಯ, ಕಲೆಗಳು, ಉಡಿಗೆತೊಡಿಗೆಗಳು, ಆಹಾರ ವಿಧಾನಗಳು, ಉದ್ಯೋಗ, ಆಚರಣೆ, ಆರ್ಥಿಕ ಸ್ಥಿತಿ, ಕಾನೂನು, ರಾಜಕೀಯ ವಿಧಾನ ಎಲ್ಲವನ್ನೂ ಒಳಗೊಂಡಿರುತ್ತದೆ.

ಡಾ॥ಶೀಲ : ವ್ಯಕ್ತಿಯು ಸುಸಂಸ್ಕೃತನಾಗಬೇಕಾದರೆ ಯಾವ ಮಾರ್ಗಗಳನ್ನು ಅನುಸರಿಸಬೇಕು ?

ಡಾ॥ರಾಮು : ಉತ್ತಮ ನಡವಳಿಕೆ, ನುಡಿಯಲ್ಲಿ ಸೌಜನ್ಯ, ಸಭ್ಯತೆ, ನಾಗರಿಕತೆ, ವಿನಯತೆ, ಸ್ನೇಹಪರತೆ, ಕೃತಜ್ಞತೆ, ವಿಚಾರಪರತೆ, ಕರ್ತವ್ಯದಕ್ಷತೆ, ಸತ್ಯಶೀಲತೆ, ತ್ಯಾಗಗುಣ ಸಂಪನ್ನತೆ, ದೇಶಾಭಿಮಾನ, ಗುರು ದೇವತಾ ಭಕ್ತಿ ಇತ್ಯಾದಿ ಎಲ್ಲ ಸದ್ಗುಣ ಸಂಪತ್ತಿನ ಸಾರ ಸ್ವರೂಪವನ್ನು ಅನುಸರಿಸಬೇಕು.

ಡಾ॥ಶೀಲ : ಸಂಸ್ಕೃತಿಯು ಯಾವುದಕ್ಕೆ ಸಂಬಂಧಿಸಿದೆ ?

ಡಾ॥ರಾಮು : ಸಂಸ್ಕೃತಿಯು ಮನುಷ್ಯನ ವರ್ತನೆಗಳ ವ್ಯವಸಾಯಕ್ಕೆ ಸಂಬಂಧಿಸಿದೆ.

ಡಾ॥ಶೀಲ : ಸಂಸ್ಕೃತಿಯಲ್ಲಿ ಯಾವ ಅಂಶಗಳಿವೆ ?

ಡಾ॥ರಾಮು : ಸಂಸ್ಕೃತಿಯಲ್ಲಿ ಕಾಲದೇಶಗಳನ್ನು ಮೀರಿದ ಕೆಲವು ಶಾಶ್ವತ ಅಂಶಗಳಿವೆ.

ಡಾ॥ಶೀಲ : ಯಾವುದು ಸಂಸ್ಕೃತಿಯನ್ನು ಪ್ರಕಟಿಸುತ್ತದೆ.

ಡಾ॥ರಾಮು : ಮನುಷ್ಯನ ಆಚಾರ, ಆಲೋಚನೆಗಳು, ನಂಬುಗೆ, ಶ್ರದ್ದೆಗಳು ಸಂಸ್ಕೃತಿಯನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಪ್ರಕಟಿಸುತ್ತಿರುತ್ತದೆ.

ಡಾ॥ಶೀಲ : ಸಂಸ್ಕೃತಿಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

ಡಾ॥ರಾಮು : ಸಂಸ್ಕೃತಿಯನ್ನು ಮಹಾನದಿಗೆ ಹೋಲಿಸಿದ್ದಾರೆ.

ಡಾ॥ಶೀಲ : ಸಂಸ್ಕೃತಿಯು ಏನ್ನನ್ನು ಹೇಳಬಲ್ಲದು ?

ಡಾ॥ರಾಮು : ಸಂಸ್ಕೃತಿಯು ಒಂದು ದೇಶ ಎಂಥದ್ದು ಎಂಬುದನ್ನು ಹೇಳಬಲ್ಲದು.

ಡಾ॥ಶೀಲ : ಒಬ್ಬ ವ್ಯಕ್ತಿ ಒಂದು ಸಂಸ್ಕೃತಿಯ ಜೊತೆ ಹೇಗೆ ಸ್ಪಂದಿಸುತ್ತಾನೆ ?

ಡಾ॥ರಾಮು : ಒಬ್ಬ ವ್ಯಕ್ತಿ ಎಷ್ಟೇ ಸಣ್ಣವನಿರಲಿ, ದೊಡ್ಡವನಿರಲಿ ಅವನಿಗೆ ಅರಿವಿಲ್ಲದಂತೆಯೇ ಒಂದು ಸಂಸ್ಕೃತಿಯ ಪಾಲುದಾರನಾಗಿರುತ್ತಾನೆ. ಏಕೆಂದರೆ ಸಂಸ್ಕೃತಿಯು ಮಾನವ ಸಮಾಜದ ಉಸಿರು. ವ್ಯಕ್ತಿಯ ಅನುಭವಕ್ಕೆ ಬರುವ ಸಂವೇದನೆಗಳನ್ನು ಸ್ಪಂದಿಸುವ ಸಣ್ಣ ಪುಟ್ಟ ಸಂದರ್ಭಗಳು ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತವೆ.

ಡಾ॥ಶೀಲ : ಬಡವ, ಶ್ರೀಮಂತರ ನಡುವೆ ಯಾರಲ್ಲಿ ಹೆಚ್ಚು ಸಂಸ್ಕೃತಿ ಕಂಡು ಬರುತ್ತದೆ ?

ಡಾ॥ರಾಮು : ಬಡವರಲ್ಲಿ ಅವರ ಸಾಮಾನ್ಯ ನಡುವಳಿಕೆಗಳಲ್ಲಿಯೂ ಹೆಚ್ಚು ಸಂಸ್ಕೃತಿ ಕಂಡು ಬರುತ್ತದೆ.

ಡಾ॥ಶೀಲ : ಸಂಸ್ಕೃತಿಯ ಆಚರಣೆಯ ಒಂದು ಪುಟ್ಟ ಉದಾಹರಣೆ ಹೇಳಿ ?

ಡಾ॥ರಾಮು : ಒಂದು ಮಗು ತನಗೆ ಬಹುಮಾನವಾಗಿ ದೊರೆತ ಲಾಡುವನ್ನು, ಬಾಳೆಹಣ್ಣುಗಳನ್ನು ತಾನೊಬ್ಬನೇ ತಿನ್ನದೆ ತನ್ನ ಸ್ನೇಹಿತರಿಗೆಲ್ಲಾ ಹಂಚಿಕೊಂಡು ತಿನ್ನುವ, ಅನಂದಪಡುವ ಪ್ರವೃತಿ ಒಂದು ಉತ್ತಮ ಸಂಸ್ಕೃತಿ.

ಡಾ॥ಶೀಲ : ಸಂಸ್ಕೃತಿಯನ್ನು ವಿವರಿಸಿ ಹೇಳಿ ?

ಡಾ॥ರಾಮು : ಮಾನವರು ತಮ್ಮನ್ನು ತಾವು ಉತ್ತಮಗೊಳಿಸಿಕೊಳ್ಳಲು ಮಾಡುವ ಪ್ರಯತ್ನವೇ ಸಂಸ್ಕೃತಿ.

ಸಮಾಜ ಜೀವನಕ್ಕೆ ಶಕ್ತಿಯನ್ನು, ಸ್ಪೂರ್ತಿಯನ್ನು ತಂದುಕೊಡುವುದೇ ಸಂಸ್ಕೃತಿ.

ಮಾನವ ಸಮಾಜದ ಸಮೂಹ ಜೀವನದ ಅಭಿವ್ಯಕ್ತಿ ಮಾನದಂಡವನ್ನು ಸಮೂಹ ಜೀವಿಯಾಗಿ ಇತರರೊಂದಿಗೆ ಸಮರಸಗೊಂಡು ಜೀವಿಸುವಂತಹ ಪರಿಸರವನ್ನು ನಿರ್ಮಿಸುವುದು ಸಂಸ್ಕೃತಿ.

ಸಂಸ್ಕೃತಿಗೆ ಇಂಗ್ಲಿಷಿನಲ್ಲಿ **culture** ಎನ್ನುತ್ತಾರೆ. **Culture** ಎಂಬುವುದರ ಮೂಲ **cult** ಎಂಬುದು. **Cult** ಎಂದರೆ ಗೌರವಿಸುವುದು, ಸೇವೆಮಾಡುವುದು, ಆರಾಧಿಸುವುದು.

Agriculture ಎಂದರೆ ಕೃಷಿ, ವ್ಯವಸಾಯ. ಅದೇ ಭೂದೇವಿಯ ಆರಾಧನೆ – ಭೂಮಿಯನ್ನು ಉತ್ತಿ, ಬಿತ್ತಿ, ನೀರು ಗೊಬ್ಬರ ಹಾಕಿ ಹಸನು ಮಾಡುವುದು.

ಅದೇ ರೀತಿ culture ಎಂದರೆ ಮಾನವನ ಅಂತರಂಗದ ವ್ಯವಸಾಯ. ಇದು ಆತ್ಮದ ಕೃಷಿ.

ಮಾನವನು ತನ್ನ ಜೀವನ ವ್ಯವಸಾಯದಿಂದ, ಅವನ ಅಂತರಂಗದಲ್ಲಿರುವ ದುರ್ಗುಣಗಳನ್ನು ಆ ವ್ಯವಸಾಯದ ಕ್ರಮದಿಂದಲೇ ಹೊರಹಾಕುವುದೇ ಸಂಸ್ಕೃತಿ.

ಮಾನವನ ಆಂತರಿಕ ಶಕ್ತಿ ಸಾಮರ್ಥ್ಯ ಬಹಿರಂಗವಾಗಿ ಪ್ರಕಟವಾಗಲು ವೇದಿಕೆಯನ್ನು ನಿರ್ಮಿಸಿ ಕೊಡುವುದು ಸಂಸ್ಕೃತಿ.

ಸಂಸ್ಕೃತಿಯು ಬಹುಮಟ್ಟಿಗೆ ವ್ಯಕ್ತಿಗತವಾಗಿ, ವ್ಯಕ್ತಿಯ ವಿಕಾಸಕ್ಕೆ ಸಂಬಂಧಿಸಿ, ಆತನು ಪೂರ್ಣತೆಯ ಸಿದ್ಧಿಗಾಗಿ ಮಾಡುತ್ತಿರುವ ಪ್ರಯತ್ನವಾಗಿದೆ. ಇದು ನಮ್ಮ ಪೂರ್ಣತೆಗಾಗಿ ರೂಪಿಸಿಕೊಂಡ ಯಾವುದೋ ದಿವ್ಯ ಆದರ್ಶದ ಅಭಿವ್ಯಕ್ತಿ. ಸಂಸ್ಕೃತಿ ವೈಯಕ್ತಿಕವಾಗಿದ್ದುಕೊಂಡು ಒಬ್ಬೊಬ್ಬರ ಅಂತರಂಗದಲ್ಲಿ ಅರಳುವ ಕುಸುಮ.

ಮಾನವಜೀವನ ಸಂಸ್ಕಾರ ಹೂವಾದರೆ, ಆ ಹೂವಿನ ಪರಿಮಳವೇ ಸಂಸ್ಕೃತಿ.

ನಾವು ಅನೇಕ ಭಾವನೆಗಳನ್ನು, ಪದ್ದತಿಗಳನ್ನು ಅನುಸರಿಸುತ್ತಿರುತ್ತೇವೆ. ಈ ಭಾವನೆಗಳನ್ನು, ಪದ್ದತಿ ಗಳನ್ನು ನಾವು ಅರಿತು ಆಲೋಚನೆಗಳಿಂದ, ಉಕ್ತಿಗಳಿಂದ ನಮ್ಮನ್ನು ನಾವು ಉತ್ತಮ ರೀತಿಯಲ್ಲಿ ನಡೆದುಕೊಳ್ಳಲು, ತಿದ್ದಿಕೊಳ್ಳಲು ಸಹಾಯಮಾಡಬೇಕು.

ಮಾನವನ ಸ್ವಭಾವಕ್ಕೆ ಸಂಸ್ಕಾರ ಕೊಟ್ಟು ಮಾನವನಲ್ಲಿ ಮಾನವೀತೆಯ ಮಂದಾರವನ್ನು ಅರಳಿಸು ವುದೇ ನಿಜವಾದ ಸಂಸ್ಕೃತಿ.

ಒಟ್ಟಿನಲ್ಲಿ ವ್ಯಕ್ತಿಯ ಅಂತರಂಗದಲ್ಲಿ ಅರಳುವ ಅಂತರಂಗದ ಪರಿಮಳ ಸಂಸ್ಕೃತಿ.

# 2. ಮಾನವ ಮೌಲ್ಯಗಳು ಮತ್ತು ಸಂಸ್ಕೃತಿ

ಡಾ॥ಶೀಲ : " ಮಾನವ ಮೌಲ್ಯಗಳು " ಎಂದರೇನು ?

ಡಾ॥ರಾಮು : " ಮಾನವ ಮೌಲ್ಯಗಳು " ಎಂದರೆ ನೈತಿಕ ಗುಣಗಳು.

ಇವು ಮಾನವನ ಮೂಲಭೂತವಾದ ಪುರುಷಾರ್ಥಗಳು.

ಎಲ್ಲಾ ಯುಗಗಳಿಂದಲೂ ಮಾನವ ಮೌಲ್ಯಗಳು, ಮಾನವ ಮೌಲ್ಯಗಳಾಗಿಯೇ ಉಳಿದು, ಬೆಳೆದು ಮಾನವ ಕುಲದ ಕಲ್ಯಾಣಾರ್ಥವಾಗಿ, ಜೀವಂತವಾಗಿ ಉಳಿದಿವೆ.

ಯಾವುದೇ ಕಾಲ, ದೇಶ, ಜಾತಿ, ಮತ, ಸಂಸ್ಕೃತಿ, ಭಾಷೆಯ ಹಿನ್ನಲೆಯಾಗಿರಲಿ ಅಲ್ಲಿ ಸರ್ವಕಾಲಿಕವಾದ ಸ್ವೀಕಾರಾರ್ಹ ಮಾನವ ಮೌಲ್ಯಗಳು ಇದ್ದೇ ಇರುತ್ತವೆ.

ಡಾ॥ಶೀಲ : ಮಾನವ ಮೌಲ್ಯಗಳು ಹೇಗೆ ಬೆಳೆದುಬರುತ್ತವೆ ?

ಡಾ॥ರಾಮು : ಮಾನವ ಮೌಲ್ಯಗಳು ಸಮಾಜದೊಳಗೆ, ಸಮಾಜದಿಂದ ಸಮಾಜಕ್ಕೆ, ದೇಶದಿಂದ ದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ, ಭಿನ್ನವಾಗಿರಬಹುದು.

ಆದರೆ ವಿಶ್ವದಲ್ಲಿ ಯಾವುದೇ ಧರ್ಮ, ಜನಾಂಗ, ದೇಶ, ಮತ, ಭಾಷೆ, ಸಂಸ್ಕೃತಿಯ ಹಿನ್ನಲೆಯವರೇ ಆಗಿರಲಿ ಅವರಲ್ಲಿ ನೈತಿಕ ಗುಣಗಳು ಅವರ ನಾಡಿನ ನಡೆ–ನುಡಿಗೆ ಸಂಬಂಧವಾಗಿ ಆಚರಣೆಯಲ್ಲಿರುತ್ತವೆ.

ಡಾ॥ಶೀಲ : ಸರ್ವಕಾಲಿಕವಾದ ಸ್ವೀಕಾರಾರ್ಹ ಪಂಚ ಮಾನವ ಮೌಲ್ಯಗಳು ಯಾವುವು ?

ಡಾ॥ರಾಮು : 1. ಸತ್ಯ, 2. ಧರ್ಮ, 3. ಶಾಂತಿ, 4. ಪ್ರೇಮ, 5. ಅಹಿಂಸೆ.

ಈ ಪಂಚ ಮಾನವ ಮೌಲ್ಯಗಳು ಸರ್ವಕಾಲಿಕವಾದ ಸ್ವೀಕಾರಾರ್ಹ ಮಾನವ ಮೌಲ್ಯಗಳು.

ಡಾ॥ಶೀಲ : ಈ ಸರ್ವಕಾಲಿಕ ಪಂಚ ಮಾನವ ಮೌಲ್ಯಗಳ ವಿಶೇಷತೆ ಹಾಗೂ ವೈಶಿಷ್ಟತೆಯೇನು ?

ಡಾ॥ರಾಮು : ಈ ಐದು ಮಾನವ ಮೌಲ್ಯಗಳು ಮಾನವನ ಮೇಲೆ ಸಮೃದ್ಧ ಪ್ರಭಾವ ಮತ್ತು ಮಹತ್ವ ಬಿರುತ್ತಾ ಬಂದಿರುವ ಮೌಲ್ಯಗಳಾಗಿರುತ್ತವೆ.

ಮಾನವನ ಕಣಕಣಗಳಲ್ಲಿ ಇವು ತುಂಬಿದ್ದರೂ ಸುಪ್ತವಾಗಿರುತ್ತವೆ.

ಇವುಗಳನ್ನು ಜಾಗೃತಗೊಳಿಸಿ, ಮನದಟ್ಟು ಮಾಡಿ ಚಾರಿತ್ರ್ಯ ಆಂತರೀಕರಣಗೊಳಿಸಿ ರೂಢಿಗತ ಮಾಡುವುದು ಅತಿ ಮುಖ್ಯವಾಗಿದೆ.

ಒಂದಲ್ಲಾ, ಎರಡಲ್ಲಾ, ಹತ್ತಾರು ಬಾರಿ ಈ ಮೌಲ್ಯಗಳ ಬಗ್ಗೆ ಚಿಂತಿಸಿದಷ್ಟು, ಚಿಂತನ–ಮಂಥನಗೈದಷ್ಟು ನವ–ನವನೀತ ಅಂಶಗಳು ಬೌದ್ಧಿಕವಾಗಿ ಸ್ಫುರಿಸುತ್ತವೆ.

ಅವರವರ ಅಭಿರುಚಿ, ಅಭಿಲಾಷೆ, ಅಸಕ್ತಿಗೆ ಅನಗುಣವಾಗಿ ಹುಡುಕಿ ಆಸ್ವಾದಿಸಿದರೇ ಬೌದ್ಧಿಕ ರುಚಿ ಹೆಚ್ಚುತ್ತದೆ. ಸೌಂದರ್ಯಪೂರಿತ ವಸ್ತು, ವಿಚಾರವನ್ನು ಭಿನ್ನ ಭಿನ್ನ ಆಯಾಮಗಳಲ್ಲಿ, ದೃಷ್ಟಿಕೋನಗಳಲ್ಲಿ ಎಷ್ಟೆಷ್ಟು ನೋಡಿದರೂ, ಅಷ್ಟಷ್ಟು ಹೊಸತು ಕಂಡು ಬರುವಂತಹ ಪ್ರಭಾವಿತ ಮೌಲ್ಯಗಳು ಇವಾಗಿವೆ.

ಅವು ಎಲ್ಲಾ ಯುಗಗಳಿಂದಲೂ, ಮಾನವ ಮೌಲ್ಯಿಗಳಾಗಿಯೇ ಉಳಿದು, ಬೆಳೆದು ಮಾನವಕುಲದ ಕಲ್ಯಾಣಾರ್ಥವಾಗಿ, ಜೀವಂತವಾಗಿ ಉಳಿದಿವೆ. ಇವುಗಳನ್ನು ಒಂದು ಮಾನಸಿಕ ನೆಲೆಗಟ್ಟಿನಲ್ಲಿ ನಿಂತು ಮುಕ್ತವಾಗಿ ನೋಡುವ, ಚಿಂತಿಸುವ ಸಂಯಮ ಶೀಲನೆಯಾಗಬೇಕಷ್ಟೆ.

# 3. ಪಂಚ ಮಾನವ ಮೌಲ್ಯಗಳು

ಡಾ॥ಶೀಲ : ಶಾಶ್ವತವಾದ ಸರ್ವಕಾಲಿಕವಾದ ಸ್ವೀಕಾರಾರ್ಹ ಪಂಚ ಮಾನವ ಮೌಲ್ಯಗಳು ಯಾವುವು ?

ಡಾ॥ರಾಮು : 1. ಸತ್ಯ, 2. ಧರ್ಮ, 3. ಶಾಂತಿ, 4. ಪ್ರೇಮ, 5. ಅಹಿಂಸೆ.

## ಪಂಚ ಮಾನವ ಮೌಲ್ಯಗಳ ವಿವರಗಳು

## (1) ಸತ್ಯ

ಡಾ॥ಶೀಲ : ಸತ್ಯ ಮೌಲ್ಯದ ಮಹತ್ವವೇನು ?

ಡಾ॥ರಾಮು : ಸತ್ಯ ಎಂದರೆ ಸುಳ್ಳು ಹೇಳದಿರುವುದು.

ಸತ್ಯವೆಂಬ ಪರಿಕಲ್ಪನೆಯು ಕೇವಲ **TRUTH** ಆಂಗ್ಲಪದಕ್ಕೆ ಸರಿಸಮವಾಗಿ ಸೀಮಿತವಾಗಿ ಮಾತ್ರ ಬಳಸಲಾಗದು. ಸತ್ಯದ ಪ್ರಕಾರಗಳು ಹತ್ತು ಹಲವು.

ಸತ್ಯವೆಂಬ ಪರಿಕಲ್ಪನೆಯು ಇಂದ್ರಿಯ ಗ್ರಾಹ್ಯವಾದದ್ದು. ಅಂತಃಚಕ್ಷುವಿಗೆ ಗ್ರಾಹ್ಯವಾಗುವಂತಹದು.

ಡಾ॥ಶೀಲ : ಈ ಸತ್ಯ ಮೌಲ್ಯವು ಯಾವ ಎರಡು ಅದ್ಭತ ಶಕ್ತಿಗಳನ್ನು ಒಳಗೊಂಡಿದೆ ? ಈ ಎರಡು ಅಧ್ಭುತ ಶಕ್ತಿಗಳ ವಿವರಣೆಯೇನು ?

ಡಾ॥ರಾಮು : ಇವು ಸ್ಮೃತಿ ಶಕ್ತಿ ಮತ್ತು ಅಂತರ್ಬೋಧೆ ಶಕ್ತಿ.

ಸ್ಮೃತಿ ಶಕ್ತಿಯ ದೃಢತೆ ಹಾಗೂ ವರ್ಧನೆಯು ಸತ್ಯದ ಪರಿಕಲ್ಪನೆಯ ಪ್ರಭಾವ ಬೀರುತ್ತದೆ.

ಅಂತರ್ಬೋಧೆ ವಲಯವು ಅನುಭವದ ಅತ್ಯಂತ ಮಹತ್ವದ ಹಾಗೂ ಸುಂದರವಲಯವಾಗಿದೆ.

ಸ್ಮೃತಿ ಶಕ್ತಿ, ಅಂತಃಪ್ರಜ್ಞೆ ವರ್ಧನೆಯಾದರೆ, ಸತ್ಯದ ಪ್ರಕಾರಗಳು ಹಾಗೂ ಅದಕ್ಕೆ ಪೂರಕವಾದ ಅಂಶಗಳು ತಮ್ಮ ನಿಲುವನ್ನು ಉಳಿಸಿ, ಬೆಳಸಿಕೊಳ್ಳಲು ಸಾಧ್ಯವಾಗುತ್ತದೆ.

ಆಲೋಚನೆಯಂತೆ ಚಿಂತನೆಗಳು, ಚಿಂತನೆಯಂತೆ ಭಾವನೆಗಳು, ಭಾವನೆಗಳಂತೆ ಮಾತುಗಳು, ಮಾತಿನಂತೆ ಕೃತಿಗಳು ರೂಪುಗೊಳ್ಳುತ್ತವೆ. ಹೀಗಾಗಿ ಉತ್ತಮ ಆಲೋಚನೆ, ಚಿಂತನೆ, ಮಾತು ಮತ್ತು ನಡೆವಳಿಕೆಗಳಿಂದ ತ್ರಿಕರಣ ಶುದ್ದಿಯಾಗುತ್ತದೆ.

ಈ ಹಿನ್ನಲೆಯಲ್ಲಿ ಶುದ್ಧ ಚಾರಿತ್ರ್ಯ ಅಥವಾ ಸಚ್ಚಾರಿತ್ರ್ಯವು ಸತ್ಯದ ಮೌಲ್ಯಗಳಿಂದ ಮತ್ತು ಅದರ ಪ್ರಕಾರಗಳ ಸತ್‌ಪಾಲನೆಯಿಂದ ಪ್ರೇರಿತ, ಪೋಷಿತಗೊಂಡು ದೃಢತೆಯ ಮೌಲ್ಯದ ಮೂಸೆಯಲ್ಲಿ ಪರಿಪಕ್ವಗೊಳ್ಳುತ್ತದೆ. ತನ್ಮೂಲಕ ಅಚಲತೆ, ದೃಢತೆ, ಮಿಗಿಲಾಗಿ ಶುದ್ಧ ಚಾರಿತ್ರ್ಯ ಬೆಳೆಯುತ್ತದೆ.

ಡಾ॥ಶೀಲ : ಸತ್ಯಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ॥ರಾಮು : ಸತ್ಯಮೌಲ್ಯದ ಉಪ–ಮೌಲ್ಯಗಳು ಯಾವುವೆಂದರೆ

1. ಸತ್ಯಸಂದತೆ

2. ಸತ್ಯಾನ್ವೇಷಣೆಯ ತಾರತಮ್ಯಯ ಜ್ಞಾನ

3. ಜಾತ್ಯತೀತತೆ

4. ಸರ್ವಧರ್ಮಗಳಿಗೂ ಗೌರವ

5. ಸಾರ್ವತ್ರಿಕ ಸ್ವಯಂಭೂ ಸತ್ಯ

6. ಕುತೂಹಲ

7. ಜ್ಞಾನಾನ್ವೇಷಣೆ

8. ಅನ್ವೇಷಣಾ ಬುದ್ದಿ

9. ಆತ್ಮತೃಪ್ತಿಗಾಗಿ ಅಧ್ಯಯನ.

ಈ ಉಪ–ಮೌಲ್ಯಗಳ ಆಚರಣೆಯಿಂದಲೂ ಸತ್ಯದ ಮೌಲ್ಯದ ಫಲವನ್ನು ಪಡೆಯಬಹುದು.

ಡಾ॥ಶೀಲ : ಸತ್ಯಮೌಲ್ಯಕ್ಕೆ ವಿಶ್ವದ ವಿವಿಧ ಧರ್ಮಗಳಲ್ಲಿ ಹೇಗೆ ಪೂಜ್ಯಸ್ಥಾನ ನೀಡಿ ಹೇಗೆ ಗೌರವಿಸಿದ್ದಾರೆ ?

ಡಾ॥ರಾಮು : " ಸತ್ಯವೇ ಜಯಿಸುವುದು, ಸುಳ್ಳು ಜಯಿಸುವುದಿಲ್ಲ " ಎಂದು ಸನಾತನ ಹಿಂದೂ ಧರ್ಮದಲ್ಲಿ ಹೇಳಿದೆ. ಸತ್ಯವು ಜಗತ್ತನ್ನು ಉದ್ಧರಿಸುತ್ತದೆ ಎಂದು ಅಥರ್ವಣ ವೇದದಲ್ಲಿ ಹೇಳಿದೆ.

ಸತ್ಯದ ಉಡುಗೊರೆ ಎಲ್ಲ ಉಡುಗೊರೆಗಿಂತ ಶ್ರೇಷ್ಠ. ಸತ್ಯದ ಕಂಪು ಎಲ್ಲಾ ಕಂಪುಗಳಿಗಿಂತಲೂ ಮಿಗಿಲು.

ಸತ್ಯದ ಆಮೋದ ಎಲ್ಲಾ ಆನಂದಗಳಿಗಿಂತಲೂ ಉತ್ತಮ. ಸತ್ಯವು ಅಮರವಾಗಿದೆ. ಎಂದು ಬೌದ್ಧ ಧರ್ಮದಲ್ಲಿ ಹೇಳಿದೆ.

ಯಾವನು ಸತ್ಯದಲ್ಲಿ ಮಾತ್ರ ಸಂತಸ ಪಡುವನೋ ಅವನು ಬೇರಾವುದನ್ನೂ ಗುರ್ತಿಸುವುದೇ ಇಲ್ಲ.

ಸತ್ಯಕ್ಕಾಗಿ ಶ್ರಮಿಸು; ಸತ್ಯವನ್ನು ಅರಿತವನು ಅದರಂತೆ ಬಾಳುತ್ತಾನೆ ಎಂದು ಜೈನ ಧರ್ಮದಲ್ಲಿ ಹೇಳಿದೆ.

ಸತ್ಯವು ನಿನ್ನ ದೇವನಿಂದ ಬಂದದ್ದು. ಸತ್ಯದಿಂದ ದೂರಸರಿಯದಿರಲು ಮೋಹವನ್ನು ಹಿಂಬಾಲಿಸಬೇಡ. ನೀನು ಮಾಡುವುದನ್ನೆಲ್ಲಾ ದೇವರು ನಿಜಕ್ಕೂ ಬಲ್ಲ ಎಂದು ಇಸ್ಲಾಂ ಧರ್ಮದಲ್ಲಿ ಹೇಳಿದೆ.

ನಾನೇ ಸತ್ಯ, ಮಾರ್ಗ, ಜೀವ ಆಗಿದ್ದೇನೆ. ಸತ್ಯಕ್ಕೆ ವಿರುದ್ಧವಾಗಿ ಸುಳ್ಳಾಡಿ ಹೊಗಳಿಸಿಕೊಳ್ಳಬೇಡ ಎಂದು ಕ್ರೈಸ್ತ ಧರ್ಮದಲ್ಲಿ ಹೇಳಿದೆ.

ಸತ್ಯವು ಎಲ್ಲಾ ಸದ್ಗುಣಗಳಿಗಿಂತಲೂ ಹಿರಿದು, ಆದರೆ ಜೀವಿಸುವ ಸತ್ಯವು ಅದಕ್ಕಿಂತ ಹಿರಿದು ಎಂದು ಸಿಖ್ ಧರ್ಮದಲ್ಲಿ ಹೇಳಿದೆ.

ಸತ್ಯವು ಕೃಪೆಯೂ ಒಂದನ್ನೊಂದು ಕೂಡಿರುವುದು ಎಂದು ಯಹೂದಿ ಧರ್ಮದಲ್ಲಿ ಹೇಳಿದೆ.

ನೀವು ಸತ್ಯವನ್ನು ಯಾವುದೇ ಧರ್ಮದಲ್ಲಿ ಹುಡುಕಿದಾಗ ಸಿಕ್ಕರೆ ಅದನ್ನು ಸ್ವೀಕರಿಸಿರಿ. ಸತ್ಯದಿಂದ ಯಶಸ್ಸನ್ನು ಪ್ರಾಪ್ತಿಮಾಡುತ್ತಾನೆ. ಸತ್ಯವೇ ಅಮೃತವಾಣಿಯಾಗಿದೆ. ಇದು ಸನಾತನ ನಿಯಮವಾಗಿದೆ. ಸತ್ಯ ಮಾತು ಕೊಟ್ಟ ನಂತರ ಅದನ್ನು ಪೂರೈಸಲೇಬೇಕು. ನೀವು ಮಾಡಲಾಗದ ವಚನ ಎಂದಿಗೂ ನೀಡಬೇಡಿ. ಇದನ್ನು ಸತ್ಯ, ಅರ್ಥ ಮತ್ತು ಧರ್ಮದಿಂದ ಪ್ರತಿಷ್ಠಿತವಾದ ಸಂತರು ಹೇಳಿದ್ದಾರೆ.

# (2) ಧರ್ಮ

ಡಾ॥ಶೀಲ : ಧರ್ಮ ಈ ಮೌಲ್ಯದ ಮಹತ್ವವೇನು ?

ಡಾ॥ರಾಮು : ಜಾತಿಯ ಹೆಸರಿನಲ್ಲಿ ರೂಪಗೊಂಡು, ಆಯಾ ಜನಾಂಗ ಮತ್ತು ವರ್ಗದ ಹೆಸರಿನಲ್ಲಿ ಆಚರಿಸುವ ದೇವರ ಹೆಸರಿನ ಪೂಜಾದಿ ವಿಧಿ-ವಿಧಾನಗಳನ್ನು ಸಾಮಾನ್ಯವಾಗಿ ಧರ್ಮ ಎಂದು ಪರಿಗಣಿಸುತ್ತಾರೆ.

ಆದರೆ ವಾಸ್ತವವಾಗಿ ಧರ್ಮದ ಪರಿಕಲ್ಪನೆಯು ಈ ಸಾಮಾನ್ಯವಾದ ಅರ್ಥಕಲ್ಪನೆಯಿಂದ ಹೊರತ್ತಾದ ಮಹತ್ವಪೂರ್ಣವಾದ ಮೌಲ್ಯವನ್ನು ಹೊಂದಿದೆ. ಸತ್ಯದ ಕೃತಿರೂಪವೇ ಧರ್ಮ ಅಂದರೆ ಸದ್ವರ್ತನೆ ಎನ್ನಬಹುದು.

ನುಡಿ ಸತ್ಯವಾದರೆ, ನಡೆ ಅಂದರೆ ಸದ್ವರ್ತನೆಯೂ ಧರ್ಮ ಮೌಲ್ಯವಾಗಿರುತ್ತದೆ ಎಂದು ಸಾಧು-ಸಂತರು, ದಾರ್ಶನಿಕರು ಸಮಾಜಕ್ಕೆ ಸಾರಿ ಹೇಳಿದ್ದಾರೆ.

ಡಾ॥ಶೀಲ : ಧರ್ಮ ಅಂದರೆ ಸದ್ವರ್ತನಾ ಮೌಲ್ಯಗಳನ್ನು ಕಲಿಕಾ ದೃಷ್ಟಿಯಿಂದ ಮತ್ತು ಅನುಸರಣಾ ದೃಷ್ಟಿಯಿಂದ ಹೇಗೆ ದೃಷ್ಟಿಹರಿಸಿ ವಿಭಾಗಿಸಿದ್ದಾರೆ ?

ಡಾ॥ರಾಮು : ಮನಸ್ಸಿನಲ್ಲಿ ಉಂಟಾದ ಕಾಮನೆಗಳು ಮತ್ತು ಬಯಕೆಗಳಿಗೂ, ಸತ್ಯ-ಸಂಕಲ್ಪನೆಗಳಿಗೂ ತುಂಬಾ ವ್ಯತ್ಯಾಸವಿರುವುದನ್ನು ಬಹು ಎಚ್ಚರಿಕಯಿಂದ ಮನದಟ್ಟು ಮಾಡಿಕೊಂಡು, ಸದ್ವರ್ತನಾ ಮೌಲ್ಯಗಳನ್ನು ಕಲಿಕಾ ದೃಷ್ಟಿಯಿಂದ ಮತ್ತು ಅನುಸರಣಾ ದೃಷ್ಟಿಯಿಂದ ಸ್ವಸಹಾಯ ಕೌಶಲ್ಯ, ಸಾಮಾಜಿಕ ಕೌಶಲ್ಯ, ನೈತಿಕ ಕೌಶಲ್ಯ, ಗಳೆಂದು ಮೂರು ಕೌಶಲ್ಯಗಳಾಗಿ ವಿಭಾಗಿಸಿದ್ದಾರೆ.

ಡಾ॥ಶೀಲ : ಸದ್ವರ್ತನಾ ಮೌಲ್ಯಗಳನ್ನು ಮೂರು ಕೌಶಲ್ಯಗಳಾಗಿ ಹೇಗೆ ವಿಭಾಗಿಸಿದ್ದಾರೆ ?

ಡಾ॥ರಾಮು : ತನ್ನ ವ್ಯಕ್ತಿಗತವಾಗಿ ತಾನು ರೂಢಿಸಿಕೊಳ್ಳುವ ಕೌಶಲ್ಯಗಳನ್ನು ಸ್ವಸಹಾಯ ಕೌಶಲ್ಯಗಳೆಂದು; ನೆರೆಹೊರೆ, ಬಂಧುಬಳಗ, ಸಮುದಾಯ, ಸಮಾಜ ಸಂಬಂಧಿತ ಚಟುವಟಿಕೆಗಳ ಕೌಶಲಗಳನ್ನು ಸಾಮಾಜಿಕ ಕೌಶಲ್ಯಗಳೆಂದು; ವ್ಯಕ್ತಿಗತವಾಗಿ ನೆರೆಹೊರೆ, ಸಮುದಾಯ ಮತ್ತು ಸಮಾಜಕ್ಕೆ ಸಂಬಂಧಪಟ್ಟಂತೆ ಬೆಳೆಸಿಕೊಳ್ಳಬೇಕಾದ ಆಚಾರ-ವಿಚಾರಗಳನ್ನು ನೈತಿಕ ಕೌಶಲ್ಯಗಳೆಂದು ಮೂರುಬಗೆಯಾಗಿ ವಿಭಾಗಿಸಿದ್ದಾರೆ.

ಡಾ॥ಶೀಲ : ಧರ್ಮ ಮೌಲ್ಯದ ಉಪಮೌಲ್ಯಗಳು ಯಾವುವು ?

ಡಾ॥ರಾಮು : ಧರ್ಮ ಮೌಲ್ಯದ ಉಪಮೌಲ್ಯಗಳು ಮುಖ್ಯ ಆಚರಣಾ ದೃಷ್ಟಿಯಿಂದ ಈ ರೀತಿ ಇವೆ. ಅವೇ

1. ಸ್ವಚ್ಛತೆ
2. ಆರೋಗ್ಯಕರ ಜೀವನ ನಿರ್ವಹಣೆ
3. ದೈಹಿಕ ದುಡಿಮೆಗೆ ಗೌರವ
4. ವೇಳೆಯ ಸದುಪಯೋಗ
5. ನಿಯಮಿತತೆ
6. ಕಾಲನಿಷ್ಠತೆ
7. ಸ್ವಸಹಾಯ
8. ಸ್ವಂತಾಧಾರ ಇತ್ಯಾದಿ.

ಡಾ॥ಶೀಲ : ಧರ್ಮ ಮೌಲ್ಯದ ಸಹಮೌಲ್ಯಗಳು ಯಾವುವು ?

ರಾಮು : ಧರ್ಮ ಮೌಲ್ಯದ ಸಹಮೌಲ್ಯಗಳು ಈ ರೀತಿ ಇವೆ. ಅವೇ

1. ವಿಧೇಯತೆ

2. ಸರಳ ಜೀವನ

3. ಕರ್ತವ್ಯ

4. ಕರ್ತವ್ಯ ನಿಷ್ಠೆ.

ಡಾ॥ಶೀಲ : ಧರ್ಮಮೌಲ್ಯಕ್ಕೆ ವಿಶ್ವದ ವಿವಿಧ ಧರ್ಮಗಳಲ್ಲಿ ಹೇಗೆ ಪೂಜ್ಯಸ್ಥಾನ ನೀಡಿ ಹೇಗೆ ಗೌರವಿಸಿದ್ದಾರೆ ?

ಡಾ॥ರಾಮು : ಜೀವಿಗಳ ದುಃಖ ಅಧರ್ಮದಿಂದ ಉದ್ಭವಿಸುವುದು. ಅವಿನಾಶಿಯಾದ ಸುಖವು ಧರ್ಮದಿಂದ ಬರುವುದು.

ಯಾರು ಪರರ ಯೋಗ್ಯತೆಯನ್ನು ಸ್ವೇಚ್ಛಾನುಸಾರವಾಗಿ ತೀರ್ಮಾನಿಸದೇ ನ್ಯಾಯವಾಗಿ, ನಿಷ್ಪಕ್ಷಪಾತವಾಗಿ ತೀರ್ಮಾನಿಸುವರೋ, ಅವರು ವಿವೇಚನಾಶಾಲಿಗಳಾಗಿದ್ದು, ಧರ್ಮರಕ್ಷಕರಾಗಿದ್ದು, ಧರ್ಮಶೀಲರೆಂದು ತಿಳಿಯಲ್ಪಡುವರು ಎಂದು ಬೌದ್ಧ ಧರ್ಮದಲ್ಲಿ ಹೇಳಿದೆ.

ಯಾವನೊಬ್ಬನೂ ಸದಾಚಾರ ಮಾರ್ಗದಲ್ಲಿ ದೃಢವಾಗಿಸಾಗಬೇಕು, ಧಾರ್ಮಿಕ ಜೀವನವನ್ನು ಪ್ರಾರಂಭಿಸಲು ವೃದ್ಧಾಪ್ಯದ ಹಾದಿಯನ್ನು ಕಾಯಬಾರದು ಎಂದು ಜೈನ ಧರ್ಮದಲ್ಲಿ ಹೇಳಿದೆ

ಸದ್ಧರ್ಮಿಗಳು ತಮ್ಮ ತಂದೆಯ ಸಮ್ರಾಜ್ಯವನ್ನು ಸೂರ್ಯನಂತೆ ಪ್ರಕಾಶಿಸುವರು ಎಂದು ಕ್ರೈಸ್ತ ಧರ್ಮದಲ್ಲಿ ಹೇಳಿದೆ.

ದಯಾಮಯನು ಅವರವರ ಕರ್ಮಗಳಂತೆ ಅವರವರನ್ನು ನಿರ್ಮಿಸುವನು. ಧರ್ಮಶೀಲ ಜಗತ್ತಿನಲ್ಲಿ ಇದು ಸಂಪ್ರದಾಯ ಎಂದು ಸಿಖ್ ಧರ್ಮದಲ್ಲಿ ಹೇಳಿದೆ.

ದೇವನು ಹೇಳುತ್ತಾನೆ ನ್ಯಾಯವನ್ನು ಅನುಸರಿಸಿ, ಧರ್ಮವನ್ನು ಆಚರಿಸಿ ಎಂದು ಯಹೂದಿ ಧರ್ಮದಲ್ಲಿ ಹೇಳಿದೆ.

## (3) ಶಾಂತಿ

ಡಾ||ಶೀಲ : ಶಾಂತಿ. ಈ ಮೌಲ್ಯದ ಮಹತ್ವವೇನು ?

ಡಾ||ರಾಮು : ಭಾವೋದ್ವೇಗಳಿಲ್ಲದ ಸಮಚಿತ್ತವೇ ಶಾಂತಿ.

ಅಂದರೆ ಚಿತ್ತ ಸಮತೆಯನ್ನು ಕಾಯ್ದುಕೊಳ್ಳುವುದರಿಂದ ಮನಶಾಂತಿ ಲಭ್ಯವಾಗುತ್ತದೆ.

ಅಂತಃಶಕ್ತಿಯಲ್ಲಿ ದೃಢನಂಬಿಕೆ ಬೆಳೆಸಿಕೊಳ್ಳವುದರಿಂದಲೂ ಮನಃಶಾಂತಿ ಲಭ್ಯವಾಗುತ್ತದೆ.

ಪ್ರಜ್ಞಾಪೂರ್ವಕ ಆಚಾರ–ವಿಚಾರಗಳಿಂದ ದೌರ್ಬಲ್ಯಗಳು ಬಹುಪಾಲು ನಿವಾರಣೆಯಾಗುತ್ತದೆ.

ಈ ಶಾಂತಿ ಮಂತ್ರವನ್ನು, ಇಡೀ ವಿಶ್ವವು ಸದಾ ಜಪಿಸುವುದು.

ಡಾ||ಶೀಲ : ಶಾಂತಿ ಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ||ರಾಮು : ಈ ಶಾಂತಿ ಮೌಲ್ಯ ತನ್ನ ಮಹತ್ವ ಹಾಗೂ ಪ್ರಭಾವದ ಆಧಾರದಲ್ಲಿ, ಈ ಉಪ–ಮೌಲ್ಯಗಳ ಅನುಸರಣೆ ಮತ್ತು ಆಚಾರ–ವಿಚಾರಗಳ ಸದ್ಬಳಕೆಯಿಂದಲೂ ಶಾಂತಿ ಮೌಲ್ಯದ ಸತ್ಫಲವನ್ನು ಪಡೆಯಬಹು ದಾಗಿದೆ.

ಶಾಂತಿಮೌಲ್ಯದ ಉಪಮೌಲ್ಯಗಳು ಅಂದರೆ

1. ಭೋಗವರ್ಜನೆ

2. ಆರು ಭಯಾನಕ ಪಾಪಗಳಿಂದ ಮುಕ್ತಿ–1 ಕಾಮ 2 ಕ್ರೋಧ 3 ಲೋಭ 4 ಮೋಹ 5 ಮದ 6 ಮತ್ಸರ.

3. ಆರು ಮಹಾಪಾಪಗಳ ವಿರುದ್ಧ ಉತ್ತಮ ಗುಣಗಳ ವರ್ಧನೆ–1 ನಿಷ್ಕಾಮ 2 ಶಾಂತಿ 3 ದಾನ 4 ನಿರ್ಮೋಹ 5 ವಿನಯ 6 ಪ್ರೇಮ.

4. ಶಿಸ್ತು

5. ಪರಿಶುದ್ಧತೆ

6. ಸಹನೆ

7. ಸ್ವ–ಸಹಾಯ

8. ಆತ್ಮ ಗೌರವ – ಸ್ವಾಭಿಮಾನ

9. ಆತ್ಮ ನಿಗ್ರಹ

10. ವ್ಯಕ್ತಿಯ ಘನತೆಯ ಅರಿವು

11. ಏಕಾಗ್ರತಾ ಶಕ್ತಿ

12. ತಪಸ್ಸು.

ಡಾ||ಶೀಲ : ಶಾಂತಿಮೌಲ್ಯಕ್ಕೆ ವಿಶ್ವದ ವಿವಿಧ ಧರ್ಮಗಳಲ್ಲಿ ಹೇಗೆ ಪೂಜ್ಯಸ್ಥಾನ ನೀಡಿ ಹೇಗೆ ಗೌರವಿಸಿದ್ದಾರೆ ?

ಡಾ||ರಾಮು : ದೇವರು ತಮ್ಮಲ್ಲಿಯೇ ಇರುವನೆಂದು ತಿಳಿದು ಜ್ಞಾನಿಗಳು ಮಾತ್ರ ನಿರಂತರ ಶಾಂತಿಯನ್ನು ಪಡೆಯುವರು.

ಹೇ ಪರಮಾತ್ಮ ; ಪೃಥ್ವಿಯಲ್ಲಿ ಶಾಂತಿ ನೆಲಸಲಿ, ಆಕಾಶದಲ್ಲಿ ಶಾಂತಿ ನೆಲಸಲಿ, ಸ್ವರ್ಗದಲ್ಲಿ ಶಾಂತಿ ನೆಲಸಲಿ ಎಂದು ಸನಾತನ ಹಿಂದೂ ಧರ್ಮದಲ್ಲಿ ಹೇಳಿದೆ.

ದೇವರು ಶಾಂತಿಯನ್ನು ಅರಸುತ್ತಾ, ಅದನ್ನು ಪಡೆಯುತ್ತಾ ಒಡಕುಗಳನ್ನು ಮುಚ್ಚುತ್ತಾನೆ, ಮೈತ್ರಿಯನ್ನು ಬೆಳೆಸುತ್ತಾನೆ. ಏಕೆಂದರೆ ಶಾಂತಿಯಲ್ಲಿಯೇ ಅವನ ಸಂತೋಷ ಅಡಕವಾಗಿದೆ, ಅಲ್ಲದೆ, ಆತನ ಮಾತುಗಳು ಸದಾಕಾಲ ಶಾಂತಿಕರ್ತನ ಮಾತುಗಳಾಗಿವೆ ಎಂದು ಬೌದ್ಧ ಧರ್ಮದಲ್ಲಿ ಹೇಳಿದೆ.

ಧರ್ಮಿಷ್ಠರು ಜೀವಿಗಳನ್ನು ಹಿಂಸಿಸುವುದನ್ನು ನಿಲ್ಲಿಸಬೇಕು. ಏಕೆಂದರೆ, ಇದೆ ಶಾಂತಿಯನ್ನು ಒಳಗೊಂಡ ಮುಕ್ತಿ ಎಂದು ಕರೆಯಲ್ಪಡುತ್ತಿದೆ ಎಂದು ಜೈನ ಧರ್ಮದಲ್ಲಿ ಹೇಳಿದೆ.

ಭಕ್ತರ ಇಬ್ಬಣಗಳು ಜಗಳವಾಡಿದರೇ ಅವರ ನಡುವೆ ಶಾಂತಿಯನ್ನು ಸ್ಥಾಪಿಸಿರಿ ಎಂದು ಇಸ್ಲಾಂ ಧರ್ಮದಲ್ಲಿ ಹೇಳಿದೆ.

ಶಾಂತಿಗಾಗಿ ಶ್ರಮಿಸುವವರು ಭಾಗ್ಯವಂತರು. ಅವರು ದೇವರ ಮಕ್ಕಳೆನಿಸುತ್ತಾರೆ ಎಂದು ಕ್ರೈಸ್ತ ಧರ್ಮದಲ್ಲಿ ಹೇಳಿದೆ.

ದೇವರನ್ನರಿತವರು ಶಾಂತಿ, ವಿರಾಮಗಳಲ್ಲಿ ಬಾಳುವರು ಎಂದು ಸಿಖ್ ಧರ್ಮದಲ್ಲಿ ಹೇಳಿದೆ.

ಭೂತಕಾಲದ ಯೋಚನೆಗಳೆಲ್ಲವನ್ನು ಬಿಟ್ಟುಬಿಡಿ. ಭವಿಷ್ಯದ ಬಗ್ಗೆ ಚಿಂತೆ ಬೇಡ. ವರ್ತಮಾನದ ಸ್ಥಿತಿಗತಿಗಳಿಗೆ ಅಂಟಬೇಡಿ. ಆಗ ಮಾತ್ರ ನೀವು ಶಾಂತಿಯನ್ನು ಪ್ರಾಪ್ತಿಗೊಳಿಸುವಿರಿ.

ಶಾಂತಿ ಸಿಗುವುದು ಆಂತರ್ಯದಲ್ಲಿ, ಬಾಹ್ಯದಲ್ಲಿ ಅದನ್ನು ಅರಸದಿರಿ

ಪರರ ಬಗ್ಗೆ ಮತ್ಸರ ಬೇಡ, ಯಾರು ಪರರಗಳಿಕೆಯ ಬಗ್ಗೆ ಅಸೂಯೆ ಪಡುವರೋ ಅವರು ಚಿತ್ತಶಾಂತಿ ಯನ್ನು ಪಡೆಯಲಾರರು.

ನಿನ್ನ ಆಹಾರ ಮಿತವಾಗಿರಲಿ, ನಿನ್ನ ಅವಶ್ಯಕತೆಗಳು ಅಲ್ಪವಾಗಿರಲಿ, ನೀನು ಸರಳಜೀವಿಯಾಗಿರು, ಹಾಗೆಯೇ ನಮ್ರನಾಗಿ ಜೀವಿಸುತ್ತಾ ಬಯಕೆ ರಹಿತನಾಗಿರು, ಆಗ ನೀನು ಶಾಂತಿ ಪಡೆವೆ.

ಆತನಿಗೆ ಲೋಕದಲ್ಲಿ ತನ್ನದು ಎನ್ನುವಂತಹುದು ಏನೂ ಇಲ್ಲ. ಯಾವ ಕೊರತೆಗಾಗಿಯು ಪಶ್ಚಾತ್ತಾಪ ಪಡು ವುದಿಲ್ಲ ಮತ್ತು ರಾಗಾದಿಗಳ ವಶಕ್ಕೆ ಬೀಳುವುದಿಲ್ಲ. ಆತನೇ ಶಾಂತನೆಂದು ಕರೆಯಲ್ಪಡುತ್ತಾನೆ.

## (4) ಪ್ರೇಮ

ಡಾ॥ಶೀಲ : ಪ್ರೇಮ. ಈ ಮೌಲ್ಯದ ಮಹತ್ವವೇನು ?

ಡಾ॥ರಾಮು : ಪ್ರೇಮಮೌಲ್ಯವು ವಸ್ತುವಿಷಯ, ಆಚಾರ-ವಿಚಾರಗಳು, ನಡೆ-ನುಡಿ, ಪ್ರಾಣಿ-ಪಕ್ಷಿ, ಜೀವಜಂತು ಗಳಿಗೆಲ್ಲದಕ್ಕೂ ಸಂಬಂಧಿತವಾದದ್ದು.

ಈ ಪ್ರೇಮ ಮೌಲ್ಯವು ಪ್ರತಿಕ್ಷಣದಲ್ಲಿಯೂ, ಪ್ರತಿಸನ್ನಿವೇಶದಲ್ಲಿಯೂ ಬಿತ್ತರಿಸುವ ಮತ್ತು ಸ್ವೀಕರಿಸುವ ಹೃದಯ ಹೃದಯಗಳ ಧೀ ಶಕ್ತಿ.

ಇಲ್ಲಿ ಪ್ರೇಮ ಎಂದಾಕ್ಷಣ ಹೆಣ್ಣು-ಗಂಡಿನ ಸಹ ಸಂಬಂಧಿತ ಅಂಶಗಳಿಗೆ ಮಾತ್ರ ಸೀಮಿತವಾಗಿ ಬಳಸುವುದಿಲ್ಲ.

ಭಾವನಾಲೋಕವೇ ಪ್ರೇಮದ ನೆಲೆ. ಭಾವನಾ ಲೋಕದ ಪರಿಪಕ್ವತೆಯು ಪ್ರೇಮವನ್ನು ನೆಲೆಗೊಳಿಸುತ್ತದೆ.

ಡಾ॥ಶೀಲ : ಪ್ರೇಮವು ಹೇಗೆ ಪೋಷಿತವಾಗುತ್ತದೆ ?

ಡಾ॥ರಾಮು : ಪ್ರೇಮವು **"Giving and forgetting"** ನಿಂದ ಪೋಷಿತವಾಗುತ್ತದೆ.

ಶೀಲ : ಪ್ರೇಮ ಮೌಲ್ಯದ ಉಪಮೌಲ್ಯಗಳು ಯಾವುವು ?

ಡಾ॥ರಾಮು : ಪ್ರೇಮದ ಪರಿಕಲ್ಪನೆಯುನ್ನು ಹಲವಾರು ಉಪಮೌಲ್ಯಗಳಿಂದ ಅರಿವು ಮೂಡಿಸ ಬಹುದು ಹಾಗೂ ಮನದಟ್ಟು ಮಾಡಿಕೊಳ್ಳಬಹುದು.

ಪ್ರೇಮ ಮೌಲ್ಯದ ಉಪಮೌಲ್ಯಗಳು ಅಂದರೆ

**1** ನಿಸ್ಪೃಹತೆ

**2** ಪ್ರಾಣಿದಯೆ

**3** ಸಹಾನುಭೂತಿ

**4** ಮೈತ್ರಿ

**5** ಭಕ್ತಿ

**6** ದೇಶಭಕ್ತಿ

**7** ವಿಶ್ವಮಾನವ ಪರಿಕಲ್ಪನೆಯ ಅರಿವು

**8** ಮಾನವಿಯತೆಯಲ್ಲಿ ದೃಢನಂಬಿಕೆ.

ಡಾ॥ಶೀಲ : ಪ್ರೇಮಮೌಲ್ಯಕ್ಕೆ ವಿಶ್ವದ ವಿವಿಧ ಧರ್ಮಗಳಲ್ಲಿ ಹೇಗೆ ಪೂಜ್ಯಸ್ಥಾನ ನೀಡಿ ಹೇಗೆ ಗೌರವಿಸಿದ್ದಾರೆ ?

ಡಾ॥ರಾಮು : ತಾನು ಜನ್ಮವಿತ್ತ ಎಳೆಗರುವನ್ನು ಹಸುವು ಪ್ರೀತಿಸುವಂತೆ ಎಲ್ಲರನ್ನೂ ಪ್ರೇಮದಿಂದ ನೋಡು.

ನಾನು ದೇವರುಗಳ ಪ್ರೀತಿಗೆ ಪಾತ್ರವಾಗಲೀ, ನಾನು ಜನಸಾಮಾನ್ಯರಿಗೆ ಪ್ರಿಯನಾಗಲೀ, ನಾನು ಸರಿಸಮಾನರಲ್ಲಿ ಪ್ರಿಯನಾಗಲೀ, ನಾನು ಪ್ರಾಣಿಗಳಿಗೆ ಪ್ರಿಯನಾಗಲಿ ಎಂದು ಸನಾತನ ಹಿಂದೂ ಧರ್ಮದಲ್ಲಿ ಹೇಳಿದೆ.

ನಾವು ಪ್ರೇಮದ ಮೂಲಕ ಮನೋಸಂಕಲ್ಪದ ಮುಕ್ತಿಯನ್ನು ಬೆಳೆಸುವೆವು. ಅದರ ಮೇಲೆ ನಮ್ಮ ಅಭಿಮತ ವನ್ನು ರೂಪಿಸುವೆವು ಎಂದು ಬೌದ್ಧ ಧರ್ಮದಲ್ಲಿ ಹೇಳಿದೆ.

ಧರ್ಮವನ್ನು ಅನುಸರಿಸಿ ಎಲ್ಲಾ ಉದಾತ್ತ ಕಾರ್ಯಗಳನ್ನು ಮಾಡು, ಎಲ್ಲಾ ಪ್ರಾಣಿ–ಪಕ್ಷಿಗಳ ಬಗ್ಗೆ ದಯೆ ಯಿಂದಿರು ಎಂದು ಜೈನ ಧರ್ಮದಲ್ಲಿ ಹೇಳಿದೆ.

ನಿನ್ನ ಮೇಲೆ ನನ್ನ ಪ್ರೇಮವನ್ನು ಬೀರಿದೆನು ಎಂದು ಇಸ್ಲಾಂ ಧರ್ಮದಲ್ಲಿ ಹೇಳಿದೆ.

ನಿಮ್ಮ ವೈರಿಗಳನ್ನು ಪ್ರೀತಿಸಿರಿ, ನಿಮ್ಮನ್ನು ಶಪಿಸಿದವರನ್ನು ಆಶೀರ್ವದಿಸಿರಿ, ನಿಮಗೆ ನಿಂದಿಸಿದವರಿಗೆ ಒಳ್ಳೆಯ ದನ್ನು ಮಾಡಿರಿ, ನಿಮಗೆ ಹಿಂಸಿಸಿದವರಿಗಾಗಿ ದೇವರನ್ನು ಪ್ರಾರ್ಥಿಸಿರಿ ಎಂದು ಕ್ರೈಸ್ತ ಧರ್ಮದಲ್ಲಿ ಹೇಳಿದೆ.

ಯಾರು ಮಾನವ ಜನಾಂಗವನ್ನು ಪ್ರೀತಿಸಿ ಸೇವೆಮಾಡುತ್ತಾರೋ, ದೇವರನ್ನು ಪೂಜಿಸಿದ ಮೇಲೂ ತನ್ನನ್ನು ಕಿರಿಯವನೆಂದು ಭಾವಿಸುತ್ತಾರೋ ಅವರು ಮಾತ್ರ ಸ್ವರ್ಗಕ್ಕೆ ಹೋಗಲು ಅರ್ಹರು ಎಂದು ಸಿಖ್ ಧರ್ಮದಲ್ಲಿ ಹೇಳಿದೆ.

# (5) ಅಹಿಂಸೆ

ಡಾ॥ಶೀಲ : ಅಹಿಂಸೆ. ಈ ಮೌಲ್ಯದ ಮಹತ್ವವೇನು ?

ಡಾ॥ರಾಮು : ಅಹಿಂಸೆ ಮಾನವನನ್ನು ವರಿಸಿದಾಗ ಅವನು ಮಾನವತಾ ಗುಣ ಸ್ವರೂಪಿಯಾಗುತ್ತಾನೆ. ತನ್ಮೂಲಕ ಆತನಲ್ಲಿ ಸೌಹಾರ್ದಯುತ ಗುಣ ವರ್ಧಿಸುತ್ತದೆ.

ಅಹಿಂಸೆ ಎಂದಾಕ್ಷಣ ಹಿಂಸೆ ರಹಿತವಾದದ್ದು ಮಾತ್ರ ಸೀಮಿತವಾದ ಮೌಲ್ಯ ಇದಲ್ಲ.

ಮಾನವನ ಮಾನವತೆ ಸಿದ್ದಿಯು ಮುಕುಟಮಣಿ ಈ ಅಹಿಂಸೆ ಮೌಲ್ಯವಾಗಿರುತ್ತದೆ.

ಮಾನವ ಪ್ರಾಣಿಯೂ ಸೇರಿದಂತೆ ಸಸ್ಯಾದಿ ಜೀವಜಂತುಗಳನ್ನು ಪ್ರೇಮ-ವಿಶ್ವಾಸದಿಂದ ನೋಡುವ ಮೂಲಕ ಅವುಗಳನ್ನು ಹಿಂಸಿಸುವ ಮೃಗೀಯ(ಸುಪ್ತ) ಗುಣ ಅಥವಾ ಪ್ರವೃತ್ತಿ ದೂರವಾಗುತ್ತದೆ.

ಅಹಿಂಸಾಚರಣೆಯಿಂದ ಲೌಕಿಕ ಪ್ರಪಂಚದಲ್ಲಿ ಪ್ರೀತಿ-ಪ್ರೇಮ ಮಿಡಿಯುತ್ತದೆ.

ತತ್ಫಲವಾಗಿ ಸಾಮರಸ್ಯ ಗುಣವು ಉದ್ದೀಪನಗೊಂಡು ಅನ್ಯರನ್ನು ಅಂದರೆ ಪ್ರಾಣಿ, ಪಕ್ಷಿ, ಸಸ್ಯ ಸಂಕುಲಾದಿಯಾಗಿ ಸರ್ವ ಜೀವಜಂತುವನ್ನು ಅರ್ಥಮಾಡಿಕೊಳ್ಳುವ ಹಾಗೂ ಅವುಗಳಲ್ಲಿ ಪರಸ್ಪರ ಸಹನೆ, ತಾಳ್ಮೆಯಿಂದ ವರ್ತಿಸುವ ಮನೋಭಿಲಾಷೆ ದೃಢವಾಗುತ್ತದೆ.

ಅಲ್ಲದೆ ಉದಾತ್ತ ಗುಣಗಳು ಮತ್ತು ಉದಾತ್ತ ಮನೋಭಾವನೆಗಳು ರೂಪುಗೊಳ್ಳುತ್ತವೆ.

ತನ್ಮೂಲಕ ಭಾವನೆಯಂತೆ ಮಾತು ಸ್ಫುರಿಸುತ್ತದೆ. ಆ ಮಾತೇ ಮುತ್ತು ಎಂಬ ನಾಣ್ಣುಡಿಯಂತೆ, ಮಾತು ಮುತ್ತಾದೊಡನೆಯೇ ಕೂಡ ಮಾಣಿಕ್ಯವಾಗುತ್ತದೆ.

ಹೀಗೆ ಆತನಲ್ಲಿ ಅಹಿಂಸಾ ಮೌಲ್ಯ ಅಂತರೀಕರಣಗೂಂಡು ನಡೆ-ನುಡಿಗಳಲ್ಲಿ ಅದನ್ನು ರೂಢಿಸಿ ಕೊಳ್ಳುತ್ತಾನೆ.

ತನ್ಮೂಲಕ ತನ್ನ ದಿನಚರಿಯಲ್ಲಿ ಯಾವುದೇ ಸಮಯ, ಸಂದರ್ಭಗಳಲ್ಲಿಯೂ ಪಾಲಿಸುವ ದೃಢವಿಶ್ವಾಸ, ನಂಬಿಕೆ ಪರಿಪಕ್ವಗೊಳ್ಳುತ್ತದೆ.

ತನ್ಮೂಲಕ ತನ್ನ ಒಳಿತನ ಅಭಿವೃದ್ಧಿ ಜೊತೆ ಜೊತೆಯಲ್ಲಿಯೆ ನೆರೆ ಹೊರೆ, ಬಂಧು, ಬಳಗ, ಸಮಾಜ ಮತ್ತು ಲೋಕಕಲ್ಯಾಣದಲ್ಲಿಯೂ ಭಾಗಿಯಾಗುವ ಪುಣ್ಯವು ಆತನದಾಗುತ್ತದೆ.

ಡಾ॥ಶೀಲ : ಅಹಿಂಸೆ ಮೌಲ್ಯದ ಉಪಮೌಲ್ಯಗಳು ಯಾವುವು ?

ರಾಮು : ಅಹಿಂಸಾ ಮೌಲ್ಯದ ಉಪಮೌಲ್ಯಗಳನ್ನು ಮಾನಸಿಕ ಹಾಗೂ ಸಾಮಾಜಿಕ ಎಂದು ಎರಡು ಮುಖ್ಯ ಪ್ರಕಾರಗಳಲ್ಲಿ ನೀಡಿದೆ.

**ಮಾನಸಿಕ ವಿಕಾಸಕ್ಕೆ ಪೂರಕವಾದ ಉಪಮೌಲ್ಯಗಳು:-**

1. ದಯೆ

2. ಸೌಜನ್ಯ

3. ಸಭ್ಯ ನಡತೆ

4. ಸಹಾಯ ಬುದ್ಧಿ

5. ಬಂಧು ಭಾವನೆ

6. ಶಿಷ್ಟತೆ

7. ಅನ್ಯರನ್ನು ಹಿಂಸಿಸಲು ಮನಸ್ಸಿಲ್ಲದಿರುವುದು

8. ಅನ್ಯರ ಸಾಂಸ್ಕೃತಿಕ ಮೌಲ್ಯಗಳ ಪ್ರಶಂಸೆ

9. ಅನ್ಯರ ಬಗ್ಗೆ ಕಳಕಳಿ ಇತ್ಯಾದಿ.

**ಸಾಮಾಜಿಕ ವಿಕಾಸಕ್ಕೆ ಪೂರಕವಾದ ಉಪಮೌಲ್ಯಗಳು:-**

1. ನಾಗರಿಕ ಜವಾಬ್ದಾರಿ

2. ಪ್ರಜಾಸತ್ತಾತ್ಮಕ ಕ್ರಮದಲ್ಲಿ ನಿರ್ಣಯ ಕೈಕೊಳ್ಳುವಿಕೆ

3. ಸಾಮೂಹಿಕ ಒಳಿತಿಗೆ ಪುರಸ್ಕಾರ

4. ಸರ್ವರ ಹಿತರಕ್ಷಣೆಗೆ ಕಂಕಣಬದ್ಧತೆ

5. ಸಚೇತನವಾದ ರಾಷ್ಟ್ರೀಯ ಪ್ರಜ್ಞೆ

6. ರಾಷ್ಟ್ರೀಯ ಒಗ್ಗಟ್ಟಿನ, ಭಾವೈಕ್ಯತೆ ಬಗ್ಗೆ ಪ್ರೇಮ

7. ಅಸ್ಪೃಶ್ಯತೆಯಿಂದ ವಿಮುಖತೆ

8. ರಾಷ್ಟ್ರೀಯ ಮತ್ತು ಸಾಮಾಜಿಕ ಸ್ವತ್ತಿನ ಅರಿವು

9. ಸಮಾಜ ಸೇವಾ ಭಾವನೆ

10. ಸಾಮಾಜಿಕ ನ್ಯಾಯದ ಭಾವನೆ

11. ಸಮಾಜದಲ್ಲಿ ಆಸಕ್ತಿ, ಶ್ರದ್ಧೆ

12. ಮಾನವಕುಲದ ಒಗ್ಗಟ್ಟಿನಲ್ಲಿ ದೃಢಭಾವನೆ.

ಡಾ॥ಶೀಲ : ಅಹಿಂಸೆ ಮೌಲ್ಯಕ್ಕೆ ವಿಶ್ವದ ವಿವಿಧ ಧರ್ಮಗಳಲ್ಲಿ ಹೇಗೆ ಪೂಜ್ಯಸ್ಥಾನ ನೀಡಿ ಹೇಗೆ ಗೌರವಿಸಿದ್ದಾರೆ?

ಡಾ॥ರಾಮು : ಎರಡನೇಯವನಿಂದ ಪ್ರಕೋಪಗೊಳಿಸಲ್ಪಟ್ಟರೂ ಅವನನ್ನು ಹಿಂಸಿಸಬೇಡ.

ಕಾಯಾ, ವಾಚಾ, ಮನಸಾ ಯಾರನ್ನೂ ಘಾಸಿಗೊಳಿಸಬೇಡ.

ನಿನ್ನ ಸಹಜೀವಿಗಳಿಗೆ ನೋವಾಗುವಂತೆ ಮಾತನಾಡಬೇಡ.

ದೇವರೇ, ನಾನು ಎರಡನೆಯವರ ಧನಕ್ಕೆ ಆಸೆಪಟ್ಟರೆ, ನಾನು ಯಾರನ್ನಾದರೂ ಹಿಂಸಿಸಿದರೆ, ನಾನು ಇಂದೇ ಮರಣ ಹೊಂದುವಂತಾಗಲಿ ಎಂದು ಸನಾತನ ಹಿಂದೂ ಧರ್ಮದಲ್ಲಿ ಹೇಳಿದೆ.

ದೂಷಿಸದಿರುವುದು, ಹೊಡೆಯದಿರುವುದು, ಧರ್ಮದಂತೆ ಸೀಮಿತದಲ್ಲಿರುವುದು, ಊಟದಲ್ಲಿ ಮಿತದಿಂದರುವುದು, ಉದಾತ್ತ ವಿಚಾರದಲ್ಲಿ ತೊಡಗಿರುವುದು, ಇದು ಎಚ್ಚತ್ತವನ ಬೋಧನೆ ಎಂದು ಬೌದ್ಧ ಧರ್ಮದಲ್ಲಿ ಹೇಳಿದೆ.

ಪಾಪಕೃತ್ಯಗಳಿಂದ ದೂರವಿರುವ, ಸನ್ಮಾರ್ಗದಲ್ಲಿ ಶ್ರಮಿಸಿ, ಕ್ರೋಧ, ಭಯ ಮುಂತಾದವುಗಳನ್ನು ಶಮನಗೊಳಿಸುವ ಕಲೆಗಳು ಜೀವಿಗಳನ್ನು ಎಂದೂ ಕೊಲ್ಲುವುದಿಲ್ಲ : ಅವರು ನಿತ್ಯ ಸುಖಿಗಳು ಎಂದು ಜೈನ ಧರ್ಮದಲ್ಲಿ ಹೇಳಿದೆ.

ಪುಣ್ಯದ ಮೂಲಕ ಪಾಪವನ್ನು ನಿವಾರಿಸು ಎಂದು ಇಸ್ಲಾಂ ಧರ್ಮದಲ್ಲಿ ಹೇಳಿದೆ.

ದೇವರು ಸಜ್ಜನರನ್ನು ಪರೀಕ್ಷಿಸುತ್ತಾನೆ, ಆದರೆ ದುಷ್ಟರನ್ನು, ಹಿಂಸಾಪ್ರಿಯರನ್ನು ದೇವರು ದ್ವೇಷಿಸುತ್ತಾನೆ ಎಂದು ಕ್ರೈಸ್ತ ಧರ್ಮದಲ್ಲಿ ಹೇಳಿದೆ.

# 4. ಪಂಚ ಮೌಲ್ಯಗಳ ಉಪಮೌಲ್ಯಗಳು

## (1) ಸತ್ಯಮೌಲ್ಯದ ಉಪ–ಮೌಲ್ಯಗಳು

ಡಾ॥ಶೀಲ : ಸತ್ಯಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ॥ರಾಮು : ಸತ್ಯಮೌಲ್ಯದ ಉಪ–ಮೌಲ್ಯಗಳು ಯಾವುವೆಂದರೆ

1. ಸತ್ಯಸಂದತೆ
2. ಸತ್ಯಾನ್ವೇಷಣೆಯ ತಾರತಮ್ಯಯ ಜ್ಞಾನ
3. ಜಾತ್ಯತೀತತೆ
4. ಸರ್ವಧರ್ಮಗಳಿಗೂ ಗೌರವ
5. ಸಾರ್ವತ್ರಿಕ ಸ್ವಯಂಭೂ ಸತ್ಯ
6. ಕುತೂಹಲ
7. ಜ್ಞಾನಾನ್ವೇಷಣೆ
8. ಅನ್ವೇಷಣಾ ಬುದ್ದಿ
9. ಆತ್ಮತೃಪ್ತಿಗಾಗಿ ಅಧ್ಯಯನ.

ಈ ಉಪ–ಮೌಲ್ಯಗಳ ಆಚರಣೆಯಿಂದಲೂ ಸತ್ಯದ ಮೌಲ್ಯದ ಫಲವನ್ನು ಪಡೆಯಬಹುದು.

## (2) ಧರ್ಮಮೌಲ್ಯದ ಉಪ–ಮೌಲ್ಯಗಳು

ಡಾ॥ಶೀಲ : ಧರ್ಮಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ॥ರಾಮು : ಧರ್ಮಮೌಲ್ಯದ ಉಪಮೌಲ್ಯಗಳು ಯಾವುವೆಂದರೆ

1. ಸ್ವಚ್ಛತೆ
2. ಆರೋಗ್ಯಕರ ಜೀವನ ನಿರ್ವಹಣೆ
3. ದೈಹಿಕ ದುಡಿಮೆಗೆ ಗೌರವ
4. ವೇಳೆಯ ಸದುಪಯೋಗ
5. ನಿಯಮಿತತೆ
6. ಕಾಲನಿಷ್ಠತೆ
7. ಸ್ವಸಹಾಯ
8. ಸ್ವಂತಾಧಾರ ಇತ್ಯಾದಿ.

ಧರ್ಮ ಮೌಲ್ಯದ ಸಹಮೌಲ್ಯಗಳು ಈ ರೀತಿ ಇವೆ. ಅವೇ

1. ವಿಧೇಯತೆ

2. ಸರಳ ಜೀವನ

3. ಕರ್ತವ್ಯ

4. ಕರ್ತವ್ಯ ನಿಷ್ಠೆ.

ಈ ಉಪ–ಮೌಲ್ಯಗಳ ಆಚರಣೆಯಿಂದಲೂ ಧರ್ಮ ಮೌಲ್ಯದ ಫಲವನ್ನು ಪಡೆಯಬಹುದು.

## (3) ಶಾಂತಿಮೌಲ್ಯದ ಉಪ–ಮೌಲ್ಯಗಳು

ಡಾ॥ಶೀಲ : ಶಾಂತಿಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ॥ರಾಮು : ಶಾಂತಿಮೌಲ್ಯದ ಉಪಮೌಲ್ಯಗಳು ಯಾವುವೆಂದರೆ

1. ಭೋಗವರ್ಜನೆ

2. ಆರು ಭಯಾನಕ ಪಾಪಗಳಿಂದ ಮುಕ್ತಿ – 1 ಕಾಮ 2 ಕ್ರೋಧ 3 ಲೋಭ 4 ಮೋಹ 5 ಮದ 6 ಮತ್ಸರ.

3. ಆರು ಮಹಾಪಾಪಗಳ ವಿರುದ್ಧ ಉತ್ತಮ ಗುಣಗಳ ವರ್ಧನೆ – 1 ನಿಷ್ಕಾಮ 2 ಶಾಂತಿ 3 ದಾನ 4 ನಿರ್ಮೋಹ 5 ವಿನಯ 6 ಪ್ರೇಮ.

4. ಶಿಸ್ತು

5. ಪರಿಶುದ್ಧತೆ

6. ಸಹನೆ

7. ಸ್ವ–ಸಹಾಯ

8. ಆತ್ಮ ಗೌರವ – ಸ್ವಾಭಿಮಾನ

9. ಆತ್ಮ ನಿಗ್ರಹ

10. ವ್ಯಕ್ತಿಯ ಘನತೆಯ ಅರಿವು

11. ಏಕಾಗ್ರತಾ ಶಕ್ತಿ

12. ತಪಸ್ಸು.

ಈ ಉಪ–ಮೌಲ್ಯಗಳ ಆಚರಣೆಯಿಂದಲೂ ಶಾಂತಿ ಮೌಲ್ಯದ ಫಲವನ್ನು ಪಡೆಯಬಹುದು.

## (4) ಪ್ರೇಮುಮೌಲ್ಯದ ಉಪ–ಮೌಲ್ಯಗಳು

ಡಾ॥ಶೀಲ : ಪ್ರೇಮುಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ॥ರಾಮು : ಪ್ರೇಮುವೌಲ್ಯದ ಉಪವೌಲ್ಯಗಳು ಯಾವುವೆಂದರೆ

1 ನಿಸ್ಪೃಹತೆ

2 ಪ್ರಾಣಿದಯೆ

3 ಸಹಾನುಭೂತಿ

4 ವೈತ್ರಿ

5 ಭಕ್ತಿ

6 ದೇಶಭಕ್ತಿ

7 ವಿಶ್ವಮಾನವ ಪರಿಕಲ್ಪನೆಯ ಅರಿವು

8 ಮಾನವಿಯತೆಯಲ್ಲಿ ದೃಢನಂಬಿಕೆ.

ಈ ಉಪ–ಮೌಲ್ಯಗಳ ಆಚರಣೆಯಿಂದಲೂ ಪ್ರೇಮು ಮೌಲ್ಯದ ಫಲವನ್ನು ಪಡೆಯಬಹುದು.

## (5) ಅಹಿಂಸಾಮೌಲ್ಯದ ಉಪ–ಮೌಲ್ಯಗಳು

ಡಾ॥ಶೀಲ : ಅಹಿಂಸಾಮೌಲ್ಯದ ಉಪ–ಮೌಲ್ಯಗಳು ಯಾವುವು ?

ಡಾ॥ರಾಮು : ಅಹಿಂಸಾ ವೌಲ್ಯದ ಉಪವೌಲ್ಯಗಳು ಯಾವುವೆಂದರೆ

ಮಾನಸಿಕ ವಿಕಾಸಕ್ಕೆ ಪೂರಕವಾದ ಉಪವೌಲ್ಯಗಳು:–

1.ದಯೆ

2.ಸೌಜನ್ಯ

3.ಸಭ್ಯ ನಡತೆ

4.ಸಹಾಯ ಬುದ್ಧಿ

5.ಬಂಧು ಭಾವನೆ

6.ಶಿಷ್ಟತೆ

7.ಅನ್ಯರನ್ನು ಹಿಂಸಿಸಲು ಮನಸ್ಸಿಲ್ಲದಿರುವುದು

8.ಅನ್ಯರ ಸಾಂಸ್ಕೃತಿಕ ವೌಲ್ಯಗಳ ಪ್ರಶಂಸೆ

9.ಅನ್ಯರ ಬಗ್ಗೆ ಕಳಕಳಿ ಇತ್ಯಾದಿ.

ಸಾಮಾಜಿಕ ವಿಕಾಸಕ್ಕೆ ಪೂರಕವಾದ ಉಪವೌಲ್ಯಗಳು:–

1.ನಾಗರಿಕ ಜವಾಬ್ದಾರಿ

2.ಪ್ರಜಾಸತ್ತಾತ್ಮಕ ಕ್ರಮದಲ್ಲಿ ನಿರ್ಣಯ ಕೈಕೊಳ್ಳುವಿಕೆ

3.ಸಾಮೂಹಿಕ ಒಳಿತಿಗೆ ಪುರಸ್ಕಾರ

4.ಸರ್ವರ ಹಿತರಕ್ಷಣೆಗೆ ಕಂಕಣಬದ್ಧತೆ

5.ಸಚೇತನವಾದ ರಾಷ್ಟ್ರೀಯ ಪ್ರಜ್ಞೆ

6.ರಾಷ್ಟ್ರೀಯ ಒಗ್ಗಟ್ಟಿನ, ಭಾವೈಕ್ಯತೆ ಬಗ್ಗೆ ಪ್ರೇಮ

7.ಅಸ್ಪೃಶ್ಯತೆಯಿಂದ ವಿಮುಖತೆ

8.ರಾಷ್ಟ್ರೀಯ ಮತ್ತು ಸಾಮಾಜಿಕ ಸ್ವತ್ತಿನ ಅರಿವು

9.ಸಮಾಜ ಸೇವಾ ಭಾವನೆ

10.ಸಾಮಾಜಿಕ ನ್ಯಾಯದ ಭಾವನೆ

11.ಸಮಾಜದಲ್ಲಿ ಆಸಕ್ತಿ,ಶ್ರದ್ಧೆ

12.ಮಾನವಕುಲದ ಒಗ್ಗಟ್ಟಿನಲ್ಲಿ ದೃಢಭಾವನೆ.

ಈ ಉಪ–ಮೌಲ್ಯಗಳ ಆಚರಣೆಯಿಂದಲೂ ಅಹಿಂಸಾ ಮೌಲ್ಯದ ಫಲವನ್ನು ಪಡೆಯಬಹುದು.

# 5. ಪಂಚ ಮಾನವ ಮೌಲ್ಯಗಳ ಪ್ರಮುಖ ಉಪಮೌಲ್ಯಗಳು

## 1. ಕ್ಷಮೆ (Forgiveness)

ಡಾ॥ಶೀಲ : " ಕ್ಷಮೆ " ಎಂದರೇನು ?

ಡಾ॥ರಾಮು: " ಕ್ಷಮೆ " ಪ್ರಾಣಿಪಕ್ಷಿಯಾದಿಯಾಗಿ ಸಕಲ ಜೀವರಾಶಿಗಳಲ್ಲಿಯೂ ಪ್ರಕೃತಿಯು ನೀಡಿರುವ ಅಮೂಲ್ಯವಾದ ಗುಣ. ಇದೇ ಸಕಲ ಜೀವಿಗಳ ಆಧಾರ ಸ್ತಂಭ.

" ನಡೆವವನಲ್ಲದೆ ಕುಳ್ಳಿರುವವನೆಡವಲಹುದೇ " ಎಂಬಂತೆ ನಡೆಯುವವರಲ್ಲದೆ ಕುಳಿತಿರುವವರು ಎಡವಲು ಸಾಧ್ಯವೇ? ಖಂಡಿತ ಇಲ್ಲ.

ಮಾನವ ತನ್ನ ಜೀವನದ ಗತಿಯಲ್ಲಿ ಪ್ರಗತಿಯ ಸೋಪಾನವೇರುವ ಆತುರದಲ್ಲಿ ತಿಳಿದೋ, ತಿಳಿಯದೆಯೋ ಉದ್ದೇಶಿತನಾಗಿ ಇಲ್ಲವೆ, ಅರಿವಿಲ್ಲದೆ ಏನಾದರೊಂದು ತಪ್ಪು ಮಾಡುತ್ತಿರುತ್ತಾನೆ.

ಪ್ರತಿ ಹೆಜ್ಜೆ ಹೆಜ್ಜೆಗೂ ದೋಷ, ತಪ್ಪುಗಳನ್ನೇ ಗುರುತಿಸಿ ದಂಡಿಸುವ, ನಿಂದಿಸುವ, ಹಿಂಸಿಸುವ ಕಾರ್ಯ ನಿರಂತರವಾದರೆ, ಯಾವುದೇ ಪ್ರಗತಿ ಆಗಲಾರದು. ಏನೂ ಸಾಧಿಸಲಾಗದು.

ಅಮೃತವನರಸಿದ ಕೈಂಕಾರ್ಯದಲ್ಲಿ ಹಾಲಾಹಲವು ಬರಲಿಲ್ಲವೇ?

ಹಾಲಾಹಲ ಬಂದಿತು ಎಂದು ದೂಷಿಸಿದ್ದರೆ, ಅಮೃತ ಪಡೆವ ಸೌಭಾಗ್ಯದ ಕಾರ್ಯ ವೇ ಸ್ಥಗಿತವಾಗುತ್ತಲಿತ್ತು ಅಲ್ಲವೇ?

ಯಾವುದೇ ವಿಜ್ಞಾನ, ತಂತ್ರ ಜ್ಞಾನ, ಕಲೆ, ಸಾಹಿತ್ಯ ಇತ್ಯಾದಿಯ ಒಂದು ಪೂರ್ಣ ಮೂರ್ತ ರೂಪ ದೊರೆಯುವವರೆಗೆ ಹತ್ತು ಹಲವಾರು ತಪ್ಪುಒಪ್ಪುಗಳಾಗಿಯೇ ಆಗುತ್ತವೆ.

ಹಾಗೆಯೇ ಜೀವನವೆಂಬ ಜಟಕಾ ಬಂಡಿಯು ಸಾಗುವಾಗ ಹಲವಾರು ತಪ್ಪುಒಪ್ಪು ಗಳು ಆಗುತ್ತಿರುತ್ತವೆ. ಅದರ ತೀವ್ರತೆ, ತೀಕ್ಷ್ಣತೆ ಆಧರಿಸಿ ಮಾರ್ಗ ದರ್ಶನ, ಅರಿವು ನೀಡುವ ಮೂಲಕ ಉತ್ತೇಜಿಸಿದರೆ ಮಾತ್ರ ಸನ್ಮಾರ್ಗ ಹಿಡಿಯುವುದು ಸಾಧ್ಯ.

ಪ್ರತಿ ಹೆಜ್ಜೆಗೂ ತಪ್ಪುಗಳನ್ನು ಹುಡುಕಿ ನಿಂದಿಸುವುದು, ಬೈಯ್ಯುವುದು, ಸ್ವಾಭೀ ಮಾನಕ್ಕೆ ಧಕ್ಕೆ ತರುವಂತಹ ಮಾತುಗಳನ್ನಾಡುವುದು ಕೂಡಾ ವ್ಯಕ್ತಿಯ ವ್ಯಕ್ತಿತ್ವದ ಪ್ರಗತಿಗೆ ಅಡ್ಡಿ ಉಂಟುಮಾಡುತ್ತದೆ.

ಮುಂದೆ ಆತನ ಬೌದ್ಧಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ತಪ್ಪು ಮಾಡಿರುವ ವ್ಯಕ್ತಿಗೆ ತಪ್ಪಿನ ಅರಿವನ್ನು ಸಮಾಧಾನ ಚಿತ್ತದಿಂದ ತಿಳಿಯುವಂತೆ ಸಕಾಲಿಕವಾಗಿ ಮೂಡಿಸುವುದು ಅತಿ ಮುಖ್ಯ ಅಂಶ.

ಒಂದು ವೇಳೆ ತಪ್ಪೇ ಮಾಡಿರದವರನ್ನು ಅಪಾರ್ಥ ಕಲ್ಪನೆಯಿಂದ ಮೊಸರಲ್ಲಿ ಕಲ್ಲು ಹುಡುಕಿದಂತೆ ತೆಗಳಲು ಪ್ರಾರಂಭಿಸಿದರೂ ಅವರಲ್ಲಿ ಬೌದ್ಧಿಕ ಮತ್ತು ಭೌತಿಕ ಕ್ಷೀಣತೆ ಉಂಟಾಗುತ್ತದೆ.

ಜಗತ್ತಿನಲ್ಲಿ ಎಲ್ಲರೂ ತಪ್ಪು ಮಾಡುವವರೇ. ಎಲ್ಲರೂ ದು:ಖಿಗಳೇ.

ತ್ರಿವಿಧ ಪಾಪಗಳಾದ ಆಧ್ಯಾತ್ಮಿಕ, ಭೌತಿಕ, ಆಧಿದೈವಿಕಗಳಿಂದ ಬೇಯುತ್ತಿರುತ್ತಾರೆ.

ಪರಸ್ಪರ ಎಲ್ಲರೂ ದು:ಖ ಪರಿಹರಿಸುವವರನ್ನೊ, ಕನಿಷ್ಠ ಸಹಾನೂಭೂತಿಯಿಂದ ನಾಲ್ಕಾರು ಹಿತನುಡಿ ನೀಡುವವರನ್ನೊ, ಪ್ರೀತಿಯಿಂದ ಮಾತನಾಡಿಸಿ ಸಾಂತ್ವನ ನೀಡುವವರನ್ನೊ ನಿರೀಕ್ಷಿಸಿರುತ್ತಾರೆ.

ಇದು ಯಾವ ಸಮಾಜದಲ್ಲಿ ಸಂವೃದ್ಧವಾಗಿರುತ್ತದೆಯೋ ಆ ಸಮಾಜದ ಬಹುಪಾಲು ಜನರು ಸುಖಿಯಾಗಿರುತ್ತಾರೆ.

ಇದನ್ನು ದೈನಂದಿನ ಒಂದು ನೈಜ ಅನುಭವದಿಂದ ಅರಿಯಲು ಪ್ರಯತ್ನಿಸಬಹುದು. ಅದೇನೆಂದರೆ ಹಪ್ಪಳವನ್ನು ಸುಡುವ ಒಂದು ಸಾಮಾನ್ಯ ಪ್ರಕ್ರಿಯೆ.

ಹಪ್ಪಳವನ್ನು ಆದಷ್ಟು ಕಡಿಮೆ ಶಾಖದಲ್ಲಿ ಅನತಿ ದೂರದಲ್ಲಿ ಒಂದು ಇಕ್ಕಳದಿಂದ ಹಿಡಿದು ಆಗಾಗ್ಗೆ ಹಿಂದೆಮುಂದೆಮಾಡುತ್ತಾ ಬೆಂಕಿಗೆ ಹತ್ತಿರವೂತಾರದೆ, ತುಂಬಾ ದೂರವೂ ಹಿಡಿಯದೆ ಸರಿಯಾದ ಶಾಖ ದೊರೆತು ಹಪ್ಪಳದಲ್ಲಿನ ಹಸಿತನ ಹೋಗಿ ಹದವಾಗಿ ಸುಡುವವರೆಗೆ ಶಾಖ ನೀಡುತ್ತೇವೆ. ಹಪ್ಪಳದಲ್ಲಿ ಅಲ್ಲೊಂದು ಇಲ್ಲೊಂದು ಕರಕಲಾದ ಕಪ್ಪು ಭಾಗ ಬಂದರೂ ಸಹಿಸಿಕೊಳ್ಳವಷ್ಟು ಜೋಪಾನವಾಗಿ ಸುಡು ತ್ತೇವೆ. ಇಲ್ಲಿ ಹಪ್ಪಳವನ್ನು ಎಷ್ಟು ಸಮಯದವರೆಗೆ ಸುಡುತ್ತೇವೆ? ಹಪ್ಪಳದ ಹಸಿತನ ಇರುವವರೆಗೆ, ಒಂದು ವೇಳೆ ಹಸಿತನ ಇಲ್ಲದಿದ್ದರೂ ಹೆಚ್ಚು ಸುಟ್ಟರೆ ಅದು ಸುಟ್ಟು ಕರಕಲಾಗುತ್ತದೆ ಅಲ್ಲವೆ? ಹಪ್ಪಳವನ್ನು ಒಂದೇ ಕಡೆ ಶಾಖ ನೀಡಿ ಸುಡುವುದಿಲ್ಲ. ಎರಡೂ ಮಗ್ಗುಲಗಳಲ್ಲಿ ವ್ಯಾಪಾಕವಾಗಿ ಮತ್ತು ನಿರಂತರವಾಗಿ ಶಾಖ ನೀಡುತ್ತೇವೆ. ಹಪ್ಪಳ ಸುಡುವ ಈ ಅನುಭವವನ್ನು ಜೀವನದಗತಿಯಲ್ಲಿ ನೋಡಿದಾಗ ಈ ಕೆಳ ಕಂಡ ಅಂಶಗಳು ಮನೋವೇದ್ಯವಾಗುತ್ತವೆ.

(1) ಯಾವುದೇ ವ್ಯಕ್ತಿಯಲ್ಲಿ ಆತನ ತಪ್ಪಿನ ಅರಿವು ಮೂಡಿಸಿ, ಅದಕ್ಕೆ ತಕ್ಕ ಮಾರ್ಗ ದರ್ಶನ ನೀಡಬೇಕು.

(2) ಯಾವುದೇ ವ್ಯಕ್ತಿ ತಪ್ಪು ಮಾಡಿದಾಕ್ಷಣ ಒಮ್ಮೆಲೇ ಮಾರ್ಗದರ್ಶನ, ಅರಿವನ್ನು ತುಂಬಿ ದರೆ, ಅವನು ಸ್ವೀಕರಿಸುತ್ತಾನೆ. ದಂಡಿಸಿದರೆ ಅವನು ಸ್ವೀಕರಿಸುವುದಿಲ್ಲ, ಪರಿಸ್ಥಿತಿ ಇನ್ನೂ ಹದಗೆಡುತ್ತದೆ.

(3) ತಪ್ಪಿನ ಅರಿವು ಮೂಡುವವರೆಗೆ ಆಗಾಗ್ಗೆ ಹಂತಹಂತವಾಗಿ ನಿರಂತರವಾಗಿ ಹದ ವರಿತು ಮಾರ್ಗದರ್ಶನ ನೀಡಬೇಕು. ದಂಡನೆ ಅಗತ್ಯವಿದ್ದರೆ ಹದವರಿತು ಹಸಿತನ ಹೋಗುವಷ್ಟು ನೀಡಬೇಕು. ಶಾಖ ಹೆಚ್ಚಾದರೆ ಹಪ್ಪಳ ಕರುಕಲಾಗುವ ರೀತಿ ದಂಡನೆ ಅಥವಾ ನಿಂದನೆ ಹೆಚ್ಚಾದರೆ ವ್ಯಕ್ತಿಯಲ್ಲಿನ ದೌರ್ಭಲ್ಯ, ತಪ್ಪುಗಳು ಮರೆಯಾಗುವ ಬದಲು ಆತನಲ್ಲಿ ಬೌದ್ಧಿಕ, ಭೌತಿಕ ಕ್ಷೀಣತೆ ಉಂಟಾಗ ತೊಡಗುತ್ತದೆ ಮತ್ತು ತಪ್ಪುಗಳು ಅಧಿಕವಾಗುವ ಅವಕಾಶವೇ ಹೆಚ್ಚು.

(4) ವ್ಯಕ್ತಿಗಳಲ್ಲಿ ದೌರ್ಬಲ್ಯದ, ದೇಷಪೂರಿತ ಗುಣಗಳ ವರ್ತನೆಗಳಿಗೆ ತಕ್ಕಷ್ಟು ಪ್ರಮಾಣ ದಲ್ಲಿ ಅರಿವು ನೀಡಬೇಕು. ಆಗತ್ಯವಿದ್ದಲ್ಲಿ ಲಘು ದಂಡನಾ ರೂಪದಲ್ಲಿ ತಿಳುವಳಿಕೆ ಮೂಡಿಸಬೇಕು. ಆದಷ್ಟು ಸಕಾರಾತ್ಮಕ ಮಾರ್ಗದರ್ಶನವೇ ಪ್ರಮುಖ ಅಸ್ತ್ರ.

ಈ ಅಂಶಗಳಿಂದ ತಿಳಿಯುವುದೇನೆಂದರೆ ಶಾಲೆಯಲ್ಲಿಯೂ ಮಕ್ಕಳು ಉತ್ಸಾಹದಿಂದ ಇಡುವ ಪ್ರತಿಯೊಂದು ಹೆಜ್ಜೆಯನ್ನು ವಿನಾಕಾರಣ ಬೈಯ್ಯುವುದು, ನಿಂದಿಸುವುದು,

ತೆಗಳುವುದು, ದಂಡಿಸುವುದನ್ನು ಮಾಡದೆ ಆತನ ಬೆನ್ನು ತಟ್ಟಿ ಆಗಿರುವ ತಪ್ಪಿನ ಅಥವಾ ದುರ್ವರ್ತನೆ ಬಗೆಗೆ ತಿಳಿದು ಹೇಳಬೇಕು.

ಅಂತಹ ಕೃತ್ಯಗಳು ಮರುಕಳಿಸುವ ಪ್ರತಿ ಸಂದರ್ಭದಲ್ಲಿಯೂ ತಾಳ್ಮೆ, ಸಹನೆ ಯಿಂದ ತಪ್ಪಿನ ಅರಿವು ಮೂಡಿಸುವ ಮೂಲಕ ತಿದ್ದಲು ಪ್ರಯತ್ನ ಮಾಡಬೇಕು.

ಇಂತಹ ತಾಳ್ಮೆ ಪೂರಕ ಚಟುವಟಿಕೆಗಳಿಂದ ಮಕ್ಕಳಲ್ಲಿಯೂ ಪರಸ್ಪರ ಕ್ಷಮೆ ಮತ್ತು ಅದಕ್ಕೆ ಪೂರಕವಾದ ತಾಳ್ಮೆ, ಸಹನೆ, ದಯೆ, ಹೃದಯ ವೈಶಾಲ್ಯತೆ ಗುಣಗಳು ಮೂಡತೊಡಗಿ, ಉನ್ನತ ಆದರ್ಶ ಮೌಲ್ಯಗಳನ್ನು ತಮ್ಮ ನಡೆನುಡಿ, ಸ್ವಭಾವಗಳಲ್ಲಿ ಬೆಳಸಿಕೊಳ್ಳಲು ಅನುವಾಗುತ್ತದೆ.

ಕ್ಷಮೆ ಅಂದಾಕ್ಷಣ ದೌರ್ಬಲ್ಯದಿಂದ ಎಲ್ಲವನ್ನೂ ಕ್ಷಮಿಸುವುದು ಎಂದು ಅರ್ಥವಲ್ಲ.

ಜ್ಞಾನಿ, ಬುದ್ಧಿಶಾಲಿ, ಸದ್ಗುಣಿಯಾದವರು ತಮ್ಮ ಅಜ್ಞಾನದಿಂದ, ಅಹಂಕಾರದಿಂದ, ಆವೇಶಭರಿತನಾಗಿ ಕೆಟ್ಟ ಕೆಲಸ ಮಾಡಬಹುದಾದ ಸಂದರ್ಭದಲ್ಲಿ ಬೌದ್ಧಿಕವಾಗಿ ಇಚ್ಛಾಶಕ್ತಿಯಲ್ಲಿ ಆತನಿಗಿಂತ ಬಲಿಷ್ಠನಾದವನು ಮಾತ್ರ ಸರಿ ದಾರಿಗೆ ತರಲು ಸಾಧ್ಯ.

ಸರಿದಾರಿಗೆ ತರಲು ಇರುವ ಏಕೈಕ ಉಪಾಯವೇ ಕ್ಷಮೆ ಮತ್ತು ಮಾರ್ಗದರ್ಶನ.

ಆದುದರಿಂದ ಮಕ್ಕಳನ್ನು ಈ ನಿಟ್ಟಿನಲ್ಲಿ ರೂಪಿಸಲು ಮೊದಲು ಗುರುವಿನಿಂದ ತಮ್ಮಲ್ಲಿ ಕ್ಷಮಾಗುಣ ಮತ್ತು ಅದಕ್ಕೆ ಪೂರಕ ಗುಣ ಸ್ವಭಾವಗಳನ್ನು ರೂಢಿಸಿಕೊಂಡು ಮಾದರಿಯಾಗಿ ವರ್ತಿಸಬೇಕಾಗಿರುವುದು ಅವಶ್ಯಕ.

ಕ್ಷಮಾಗುಣವೆಂಬ ಅದ್ಭುತ ಶಕ್ತಿ " ಸಾಗರತಳದಲ್ಲಿ ಅಡಗಿಲ್ಲ, ಪರ್ವತದ ಶಿಖರ ದಲ್ಲಿಯೂ ಇಲ್ಲ. ನಗುಮುಖದ, ಸವಿನುಡಿಯ ಉದ್ದೀಪಿತ ಹೃದಯ ಕಮಲದೊಳು ಅಡಗಿಹುದು" .

ಸೌಜನ್ಯಪೂರ್ಣ ನಡವಳಿಕೆಯಿಂದ ಪೋಷಕರು, ಗುರುವೃಂದ ತಾವೂ ಕ್ಷಮಾ ಗುಣಪ್ರದರ್ಶಿಸುವ ಮೂಲಕಮಕ್ಕಳಲ್ಲಿಯೂ ಕ್ಷಮಾಗುಣವನ್ನುಂಟು ಮಾಡಬಹುದು.

ಈ ಕಾರಣದಿಂದಾಗಿ ನಮ್ಮ ಮಕ್ಕಳನ್ನು ಸುಖೀ ಸಮಾಜದ ನಿರ್ಮಾತೃಗಳಾಗುವಷ್ಟು ಉತ್ತಮ ಮೌಲ್ಯಗಳ ನೆಲೆಗಟ್ಟಿನಲ್ಲಿ ರೂಪಿಸುವುದರ ಅವಶ್ಯಕತೆ ಇದೆ.

ಇದರ ಗುರುತರ ಹೊಣೆಯು ಪೋಷಕರ ಮತ್ತು ಗುರುವೃಂದದ್ದಾಗಿರುತ್ತದೆ.

## 2. ತ್ಯಾಗ (Sacrifice)

ಡಾ॥ಶೀಲ : “ ತ್ಯಾಗ ” ಎಂದರೇನು ?

ಡಾ॥ರಾಮು : ತ್ಯಜಿಸುವುದು ತ್ಯಾಗವಾಗುತ್ತದೆ. ಅಂದರೆ ಒಂದು ವಸ್ತುವಿನ ಒಡೆತನವನ್ನು ಬಿಡುವುದು ತ್ಯಾಗ ಎನಿಸುತ್ತದೆ.

ಡಾ॥ಶೀಲ : ತ್ಯಾಗವು ತನ್ನದೇ ಆದ ಯಾವ ರೀತಿಯ ಪ್ರಮುಖ ಗುಣ ಲಕ್ಷಣ ಹೊಂದಿದೆ ?

ಡಾ॥ರಾಮು : ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೀರ್ತಿ, ಪ್ರತಿಷ್ಠೆ, ಹೊಗಳಿಕೆ, ತೆಗಳಿಕೆಗಳ ಬಗೆಗೆ ಕಿಂಚಿತ್ ಕೂಡಾ ಚಿಂತಿಸದೆ, ಹಮ್ಮು ಬಿಮ್ಮುಗಳಿಲ್ಲದೆ, ಸತ್‌ಚಿತ್ತದಿಂದ ನೀಡಿದ ದಾನ ತ್ಯಾಗ ಎನಿಸುತ್ತದೆ.

ತ್ಯಜಿಸುವ ಎಲ್ಲಾ ಪ್ರಕ್ರಿಯೆ ತ್ಯಾಗ ಎನಿಸುವುದಿಲ್ಲ. ತ್ಯಾಗ ಎಂಬುದು ಒಂದು ಅಮೂಲ್ಯವಾದ ಗುಣ ಸಂಪತ್ತು, ಕೇವಲ ತನ್ನಲ್ಲಿ ಹೆಚ್ಚಾಗಿರುವ ಸಿರಿ-ಸಂಪತ್ತು, ಅನ್ನ- ಆಹಾರಾದಿಗಳನ್ನು ಮತ್ತೊಬ್ಬರಿಗೆ ದಾನ ಮಾಡುವುದಷ್ಟೇ ತ್ಯಾಗವಲ್ಲ.

ಬಲಗೈಯಲ್ಲಿ ನೀಡಿದ ದಾನ ಎಡಗೈಗೆ ತಿಳಿಯದಷ್ಟು ನಿಸ್ಸಂಗನಾಗಿರುವ ದೃಢ ಮನಸ್ಸಿನ ದಾನ ತ್ಯಾಗವೆನಿಸುತ್ತದೆ.

ಡಾ॥ಶೀಲ : ಒಂದು ವಸ್ತುವಿನ ಒಡೆತನ ಹೇಗೆ ಐದು ವಿಧಗಳಲ್ಲಿ ತ್ಯಜಿಸಲ್ಪಡುತ್ತದೆ ?

ಡಾ॥ರಾಮು : **1.ನಾಶ:** ಪ್ರಕೃತಿಯು ನಿಯಮದಂತೆ ನಾಶವಾಗುತ್ತದೆ. ಇಲ್ಲಿ ಮನಸ್ಸಿಗೆ ಬಹು ದು:ಖ ಉಂಟಾಗುತ್ತದೆ ಹಾಗೂ ಜೀವ ತುಂಬಾ ಸಂಕಟಪಡುತ್ತದೆ.

**2.ಅಪಹರಣ:** ತನ್ನಲ್ಲಿರುವ ವಸ್ತು, ಸಿರಿಸಂಪತ್ತು ಅಪಹರಣ ಆಗುವುದು. ಆವಾಗ ಲೂ ಮನಸ್ಸಿಗೆ ತುಂಬಾ ದು:ಖ ಉಂಟಾಗುತ್ತದೆ. ಪುನ: ಪಡೆಯಬೇಕು, ಪ್ರಾಪ್ತಿ ಮಾಡಿಕೊಳ್ಳಬೇಕು ಎಂಬ ಹೆಬ್ಬಯಕೆಯಿಂದ ತುಡಿಯುತ್ತದೆ ಮನಸ್ಸು. ತತ್ಫಲವಾಗಿ ಕ್ರೋಧ ಉಂಟಾಗತೊಡಗುತ್ತದೆ.

**3.ಮಾರಟ:** ತನ್ನ ಒಡತನದಲ್ಲಿರುವ ವಸ್ತುವನ್ನು ಮಾರಾಟ ಮಾಡುವುದರಿಂದಲೂ ತ್ಯಜಿಸಿದಂತಾಗುತ್ತದೆ. ಇಲ್ಲಿ ಮಾರಾಟಕ್ಕೆ ತಕ್ಕ ಬೆಲೆ ಬರುತ್ತದೆ. ದ್ರವ್ಯ ಇಲ್ಲವೇ ವಸ್ತು ರೂಪದಲ್ಲಿ ಬೆಲೆ ಸಿಗುತ್ತದೆ. ಇಲ್ಲಿಯೂ ಕೂಡಾ ತ್ಯಜಿಸುವಿಕೆ ಇದೆ. ಆದರೆ, ಇಲ್ಲಿ ತ್ಯಜಿಸಿದ ವಸ್ತುವಿಗೆ ದ್ರವ್ಯ ದೊರೆಯುತ್ತದೆಂಬ ಮೋಹ ಹೆಚ್ಚಾಗಿರುತ್ತದೆ. ಅದಕ್ಕಾಗಿ ಕಾತರಿಸುತ್ತಿರುತ್ತದೆ ಮನಸ್ಸು.

**4.ದಾನ:** ತನ್ನಲ್ಲಿ ಹೆಚ್ಚಾಗಿರಲಿ, ಇಲ್ಲದಿರಲಿ ಇರುವುದನ್ನೇ ಸಂಬಂಧವಿರಲಿ, ಇರದಿ ರಲಿ, ಬಂಧುಬಳಗವಿರಲಿ, ಇರದಿರಲಿ, ಮಾನವೀಯ ದೃಷ್ಟಿಯಿಂದ ತನ್ನಲ್ಲಿರುವು ದನ್ನು ಇತರರಿಗೆ ನೀಡುವುದೇ ದಾನ. ಕೊಟ್ಟು ಸಂತೋಷಪಡುವ ಹಾಗೂ ಇತರ ರನ್ನು ಸಂತೋಷಗೊಳಿಸುವ ಗುಣ ಇದಾಗಿದೆ. ಇದು ಮೊದಲ ಮೂರಕ್ಕಿಂತ ಶ್ರೇಷ್ಠ ವಾದದ್ದು ಎನಿಸಿದರೂ ಇದೂ ಕೂಡಾ ತ್ಯಾಗಎನಿಸಿಕೊಳ್ಳದು. ಏಕೆಂದರೆ, ಇಲ್ಲಿಯೂ ಕೂಡಾ ಕೀರ್ತಿ, ಪ್ರತಿಷ್ಠೆ ದೊರೆಯುವುದೆಂಬ ಹಂಬಲಿಕೆ ಇರುತ್ತದೆ. ಅಲ್ಲದೆ ಆಹಂ ಕಾರಕ್ಕೆ ಕೋಡು ಮೂಡುವ ಸಾಧ್ಯತೆ ಇದೆ. ಆದರೆ ಪ್ರತ್ತಿಫಲಾಪೇಕ್ಷೆಯಿಂದ ಮಾಡಿದ ದಾನ ತ್ಯಾಗದ ಸ್ಥಾನವನ್ನು ತುಂಬಲಾರದು.

ಒಮ್ಮೆ ಒಂದು ಮುಂಗುಸಿ ತನ್ನ ಮೈಯನ್ನು ವರ್ಣಮಯ ಮಾಡಿಕೊಳ್ಳಲು ಪುಣ್ಯ ಪುರುಷ ಇರುವ ಸ್ಥಳವನ್ನು ಹುಡುಕುತ್ತಾ ಹೊರಟಿತು.

ಧರ್ಮರಾಯನ ಸಾನಿಧ್ಯದಲ್ಲಿ ನಿನಗೆ ಮುಕ್ತಿ ದೊರೆಯುತ್ತದೆಂದು ದೊರೆತ ಜ್ಞಾನಿಗಳ ಮಾರ್ಗದರ್ಶನದ ಮೇರೆಗೆ ಮುಂಗುಸಿ ಅಲ್ಲಿ ಹೋಗಿ ಹೊರಳಾಡಿತು.

ಅದರ ಅರ್ಧಶರೀರ ಮಾತ್ರ ವರ್ಣಮಯವಾಯಿತು.ಉಳಿದರ್ಧ ಹಾಗೇ ಉಳಿಯಿತು.

ಇನ್ನೆಲ್ಲಿ ಹೋಗುವುದು? ಅಂತಹ ಪುಣ್ಯಪುರುಷನಿರುವ ಸ್ಥಳ ಯಾವುದೆಂದು ಮುಂಗುಸಿ ಚಿಂತಿಸುತ್ತ ಸಾಗುವಾಗ ಕಡು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಓರ್ವ ಕೌಟುಂಬಿಕನ ಮನೆ ಹತ್ತಿರ ಬಂದು ಸುಸ್ತಾಗಿ ಬಿದ್ದುಹೋಗುತ್ತದೆ.

ಆಗ ಅದರ ಉಳಿದರ್ಧ ಶರೀರ ವರ್ಣಮಯವಾಗುತ್ತದೆ.

ಮುಂಗುಸಿಗೆ ಆಶ್ಚರ್ಯವಾಗುತ್ತದೆ. ಕಾರಣ ಇಷ್ಟೆ, ತಾನು ಸುಸ್ತು ಬಿದ್ದ ಜಾಗ ಕಡು ಬಡತನ ಇರುವವನ ಮನೆ ಆವರಣ. ಕೌಟುಂಬಿಕನು ತಾನು ಕಷ್ಟಪಟ್ಟು ಸಂಪಾದಿಸಿ ತಂದಿದ್ದ ಆಹಾರವನ್ನು ಹಸಿವೆಂದು ಬೇಡಿದವರಿಗೆ ಮುಕ್ತ ಮನಸ್ಸಿನಿಂದ ದಾನ ನೀಡಿ ತನ್ನ ಮಾನವತಾ ಗುಣಧರ್ಮವನ್ನು ಪ್ರದರ್ಶಿಸುವ ಆದರ್ಶವ್ಯಕ್ತಿಯಾಗಿರುತ್ತಾನೆ.

ಆದುದರಿಂದ ಆತನು ಪಾಂಡವರಿಗಿಂತಲೂ ಮಿಗಿಲಾದವ್ಯಕ್ತಿಯೆಂದು ಅರಿವಾಗುತ್ತದೆ. ಅಂದರೆ, ಇಂದು ಕೀರ್ತಿ, ಪ್ರತಿಷ್ಟೆಗಳಿಗಾಗಿಯೇ ಏನೆಲ್ಲಾ ತ್ಯಾಗ, ಬಲಿದಾನದ ಸೋಗುಹಾಕುವ ಯುಗದಲ್ಲಿ ತ್ಯಾಗದ ನೈಜ ಮೌಲ್ಯವೇ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ.

ತ್ಯಾಗದ ಮೌಲ್ಯವನ್ನು ಮಕ್ಕಳಲ್ಲಿ ಪ್ರಾರಂಭಿಕ ಹಂತದಿಂದಲೇ ಸೂಕ್ತ ಪಠ್ಯ-ಸಹಪಠ್ಯ ಚಟುವಟಿಕೆಗಳ ಮೂಲಕ ಸೋದಾಹರಣವಾಗಿ ರೂಢಿಗತ ಮಾಡುವ ಮೂಲಕ ಅವರ ಗುಣ, ಸ್ವಭಾವ, ಚಾರಿತ್ರ್ಯದಲ್ಲಿ ಆಂತರೀಕರಣಗೊಳ್ಳುವಂತೆ ಮಾಡಬೇಕಿದೆ. ಈ ಗುರುತರ ಜವಾಬ್ದಾರಿ ಪೋಷಕರು, ಗುರುವೃಂದ ಮತ್ತು ಸಮಾಜದ್ದಾಗಿದೆ.

## 3. ವಾತ್ಸಲ್ಯ (Affection)

**ಡಾ||ಶೀಲ** : "ವಾತ್ಸಲ್ಯ" ಎಂದರೇನು ?

**ಡಾ||ರಾಮು** : ವಾತ್ಸಲ್ಯ ಎಂಬುದು ಒಂದು ಮನೋಭಾವ.

ಇದು ಅರಿವು ಹಾಗೂ ಸಂಕಲ್ಪನಾ ಕ್ರಿಯೆಗಳಿಗೆ ಭಿನ್ನವಾಗಿರುವ ಮನಸ್ಸಿನ ಭಾವನಾ ಕಾರ್ಯವಾಗಿರುತ್ತದೆ. ಇದನ್ನು ಇಂತಿಷ್ಟು ಪ್ರಮಾಣವೆಂದು ಅಳತೆ ಮಾಡಿ ತೋರಿಸಲು ಆಗದು ಹಾಗೂ ಸ್ವೀಕರಿಸಲೂ ಆಗದು.

ವಾತ್ಸಲ್ಯವು ವ್ಯಕ್ತಿ, ವಸ್ತು ಮತ್ತು ವಿಚಾರಗಳ ನಡುವಿನ ಸಂಬಂಧಿತ ಎನ್ನುವ ಬದಲು ಹೃದಯ-ಹೃದಯಗಳ ನಡುವಿನ ಸಂಬಂಧಿತ ಎಂದರೇ ಹೆಚ್ಚು ಸೂಕ್ತವಾದೀತು.

ವಾತ್ಸಲ್ಯವು ಯಾವ ಲೈಂಗಿಕ ಅರ್ಥ, ಆಸಕ್ತಿಗಳೂ ಇಲ್ಲದೆ ವ್ಯಕ್ತ ಪಡಿಸುವ ಆಸಕ್ತಿ, ಪ್ರೇಮ ಮತ್ತು ವಿಶ್ವಾಸ.

ಅದು ಮನೋವಿಕಾರವೆನಿಸುವಷ್ಟು ತೀವ್ರವಾಗಿರದೇ ಹಿತಕರ ಮನೋಭಾವವಾಗಿ ರುತ್ತದೆ.

ಅದು ವ್ಯಕ್ತಿ, ಸನ್ನಿವೇಶ, ವಸ್ತು ಇವುಗಳ ಬಗೆಗೆ ಇರುವುದಾದರೂ ಇದನ್ನು ಕಿರಿಯರ ಬಗೆಗೆ ಹಿರಿಯರು ತೋರುವ ಪ್ರೀತಿ ವಿಶ್ವಾಸಗಳಿಗೆ ಹೆಚ್ಚಾಗಿ ಬಳಸುವರು ಎಂದು ಅರ್ಥೈಸಿದ್ದಾರೆ.

"ವಾತ್ಸಲ್ಯ"-ಮನೋಭಾವಕ್ಕೂ ಮತ್ತು ಶಿಕ್ಷಣಕ್ಕೂ ಒಂದು ಅವಿನಾಭಾವ ಸಂಬಂಧ ಇದೆ.

ಮಕ್ಕಳು ಹುಟ್ಟಿದಾಗಿನಿಂದ ಶಾಲೆಗೆ ಪಾದಾರ್ಪಣೆ ಮಾಡುವವರೆಗೂ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿಯರ, ಬಂಧು-ಬಳಗದ ಕಣ್ಮಣಿಯಾಗಿ ಪ್ರೀತಿ ವಾತ್ಸಲ್ಯ ಗಳಿಂದ, ಆದರ ಪೂರ್ವಕ ಹಾರೈಕೆಯಲ್ಲಿ ನಕ್ಕು-ನಲಿದು ಬೆಳೆದಿರುತ್ತಾರೆ.

" ಹೆತ್ತವರಿಗೆ ಹೆಗ್ಗಣ ಮುದ್ದು " ಎಂಬ ಗಾದೆಯಂತೆ ಅದು ಸ್ಫುರದ್ರೂಪಿ ಇರಲಿ, ಕುರೂಪಿ ಇರಲಿ, ಹೆಣ್ಣಿರಲಿ-ಗಂಡಿರಲಿ, ಬಡತನವಿರಲಿ-ಸಿರಿತನವಿರಲಿ ಇವೆಲ್ಲದರ ಎಲ್ಲೆ ಮೀರಿ ದೊರೆಯುವಂತಹದು ವಾತ್ಸಲ್ಯ, ಹೃದಯವಾತ್ಸಲ್ಯ ಮತ್ತು ಮಾತೃ ವಾತ್ಸಲ್ಯ.

ಅಂತಹ ನೆಮ್ಮದಿಯ ಸಾಮ್ರಾಜ್ಯದಲ್ಲಿ ಸಮ್ರಾಟರಾಗಿ ಮೆರೆಯುತ್ತಿದ್ದ ಮಕ್ಕಳು ಶಾಲೆಗೆ ಅಡಿಯಿಡುತ್ತಿದ್ದಂತೆಯೇ ಭ್ರಮನಿರಸನರಾಗುವ ಸನ್ನಿವೇಶಗಳು ಹತ್ತು-ಹಲವಾರು.

ಮನೆಯಲ್ಲಿ ದೊರೆಯುತ್ತಿದ್ದ ಪ್ರೀತಿ ವಾತ್ಸಲ್ಯ ಆದರಗಳು ನಿರೀಕ್ಷಿತ ಮಟ್ಟದಲ್ಲಿ ಎಲ್ಲೆಡೆ ಯೂ ದೊರೆಯುತ್ತಿದೆ ಅಂದುಕೊಳ್ಳುವುದಾದರು ವಾಸ್ತವವಾಗಿ ದೊರೆಯುತ್ತಿಲ್ಲ.

ಬಾಯಿತೆರೆದರೇ ದಂಡ, ಬೈಗುಳ. ಅಲ್ಲದೇ ಚಟುವಟಿಕೆಯ ಒಲುಮೆಯಾಗಿ ನಕ್ಕು ನಲಿದಾಡಿಕೊಂಡಿದ್ದ ಮುಗ್ಧ ಮಗುವಿಗೆ ಶಿಕ್ಷೆ ಎಂಬಂತೆ ಹಲವು ವಿಷಯಗಳ ಕಲಿಕೆ ಯ ಹೊರೆ. ಬಹುಶ: ಮಗುವಿಗೆ ಅದರ ಅವಶ್ಯಕತೆ ಮತ್ತು ಪ್ರಯೋಜನದ ಅರಿವೇ ಮೂಡಿರ ಲಾರದು.

ಅಂತಹದರಲ್ಲಿ ಮಣಭಾರ ಪುಸ್ತಕಗಳನ್ನು ಹೊತ್ತು ಬೆನ್ನು ಭಾಗಿಸಿಕೊಳ್ಳುವ ಶಿಕ್ಷೆ ಮತ್ತು ಆಟೋಟಗಳಿಗೆ ಕಡಿವಾಣ. ಇದರಿಂದಾಗಿ ಮನೆರಂಜನೆಯೇ ಇಲ್ಲದೇ **" Student Life is Golden Life "** ಎಂಬ ಅನುಭವವಾಣಿ ತನ್ನ ಅಸ್ತಿತ್ವ ಕಳೆದು ಕೊಳ್ಳುತ್ತಿದೆ ಎನ್ನಬಹುದು. ಇಂತಹ ಸನ್ನಿವೇಶದಲ್ಲಿ ಮಕ್ಕಳು ಅನಿವಾರ್ಯವಾಗಿ ಮತ್ತು ಯಾಂತ್ರಿಕವಾಗಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

ಎಲ್ಲಿ ಗುರುವೃಂದದ ಪ್ರೀತಿ, ವಿಶ್ವಾಸಗಳು ವಾತ್ಸಲ್ಯ ಪೂರಕವಾಗಿದ್ದು, ಪೂರ್ವಗ್ರಹ ರಿಲ್ಲದೇ ಮಕ್ಕಳೊಡನೆ ಮಕ್ಕಳಾಗಿ ಸಂಯಮ, ತಾಳ್ಮೆಯಿಂದ ಸ್ಪಂಧಿಸುವ ಗುಣ ಸ್ವಭಾವ ಪೂರಕ ಚಟುವಟಿಕೆಗಳು ದೊರೆಯುತ್ತವೆಯೋ ಅಲ್ಲಿ ಬಹುಶ: ಮಕ್ಕಳು ನಕ್ಕುನಲಿಯುತ್ತಾ ಕಲಿಯುತ್ತಾರೆ.

ಅಂತಹ ಕಡೆ ಶಾಲೆಯು ಆಕರ್ಷಿತವಾಗಿದ್ದು ಮಕ್ಕಳು ಆಸಕ್ತಿಯಿಂದ ಶಾಲೆಗೆ ಬರು ತ್ತಾರೆ. ಉಳಿದೆಡೆ ಶಾಲೆಯ ಗಂಟೆ ಭಾರಿಸಿದಾಗ ಶಾಲೆಯ ಒಳಗೆ ಹೆಬ್ಬಾವಿನಂತೆ ಚಲಿಸುತ್ತಾ, ಹೋಗುವುದೇ ಬೇಡವ್ವೋ ಎಂಬ ಚಿಂತನೆಯಿಂದಲೇ ನಿಧಾನಕ್ಕೆ ಬರುತ್ತಾರೆ.ಅದೇ ಶಾಲೆ ಮುಗಿದ ಕ್ಷಣ ಢಣ ಢಣ ಗಂಟೆಯ ಶಬ್ಧ ಕಿವಿಗೆ ಬೀಳುತ್ತಿದ್ದಂತೆ ಯಾರನ್ನೂ ಹೇಳದೇ ಕೇಳದೇ ಬೀಳುವುದನ್ನೂ, ಲೆಕ್ಕಿಸದೇ ಜೈಲಿನಿಂದ ತಪ್ಪಿಸಿ ಕೊಂಡವರಂತೆ, ಹಿಂದಿರುಗಿಯೂ ನೋಡದೆ ಓಡೋಡಿ ಬರುತ್ತಾರೆ.ಅಲ್ಲದೇ ಪ್ರೇರಣೆ, ಒತ್ತಡ, ಒತ್ತಾಸೆ ಇಲ್ಲದಿದ್ದಾಗ ಶಾಲೆಯನ್ನು ಅರ್ಧಕ್ಕೆ ಬಿಡುವ ನಿದರ್ಶನಗಳೂ ಹೆಚ್ಚಿವೆ.

ಇಲ್ಲಿ ಗಮನಿಸತಕ್ಕ ಅಂಶ ಏನೆಂದರೆ ಮುಗ್ಧ ಮಕ್ಕಳಿಗೆ "ಶಾಲೆ ಭೌತಿಕ ಆಕರ್ಷಣೀಯ ಕೇಂದ್ರ ಆಗಿರುವುದಷ್ಟೇ ಅಲ್ಲದೆ ಪ್ರೀತಿ ವಾತ್ಸಲ್ಯ ತುಂಬಿದ ಹೃದಯ ಸಿರಿವಂತಿಕೆಯ ಆಕರ್ಷಣೆಯಿಂದಲೂ ತುಂಬಿರಬೇಕು" ಎಂಬುದು ಮುಖ್ಯವಾದ ವಿಚಾರ.

ಮಕ್ಕಳು ಒಳ್ಳೆಯವರು, ಚೊಕ್ಕಟವಾಗಿದ್ದು ಆಕರ್ಷಿತರಾಗಿದ್ದಾರೆ. ತುಂಬಾ ಚೂಟಿ ಬುದ್ಧಿವಂತ ಎಂಬ ಕಾರಣಗಳಿಗಷ್ಟೆ ಪ್ರೀತಿ ವಾತ್ಸಲ್ಯದಿಂದ ನೋಡುವುದಲ್ಲ.

ಇದಾವುದರ ಕಾರಣಗಳಿಲ್ಲದೇ ಪ್ರೀತಿ ವಾತ್ಸಲ್ಯದ ಸವಿಯುಣ್ಣುವುದು ಪ್ರತಿಯೊಬ್ಬರ ಹಕ್ಕಾಗಿರುತ್ತದೆ.

ಪೋಷಕರು ಎಷ್ಟು ಉತ್ತಮವಾಗಿ ತಮ್ಮ ಮಕ್ಕಳನ್ನು ಪ್ರೀತಿ-ವಾತ್ಸಲ್ಯದಿಂದ ಕಂಡಿ ರುತ್ತಾರೋ, ವರ್ತಿಸಿರುತ್ತಾರೋ ಅಷ್ಟಷ್ಟು ಪರಿಯಲ್ಲಿಯೇ ಮಕ್ಕಳು ಇತರರೊಡನೆ ಪ್ರೀತಿ ವಾತ್ಸಲ್ಯದಿಂದ ಸ್ಪಂದಿಸುತ್ತಾರೆ.

ತನ್ನ ಮನೋಧೋರಣೆ, ಮನೋಭಾವಗಳನ್ನು ಮುಕ್ತವಾಗಿ ಅಭಿವ್ಯಕ್ತಪಡಿಸಲು ಎಲ್ಲಿ ಅವಕಾಶಇರುತ್ತದೆಯೋ? ಎಲ್ಲಿ ಪರಸ್ಪರ ಅರ್ಥಮಾಡಿಕೊಳ್ಳುವ ಅವಕಾಶ ಇರುತ್ತ ದೆಯೋ? ಅಲ್ಲಿ ಒರಟಾದ ಹಾಗೂ ತುಂಟ ಮಕ್ಕಳನ್ನು ಕೂಡಾ ಅರ್ಥಮಾಡಿಕೊಂಡು ಪ್ರೀತಿವಾತ್ಸಲ್ಯದಿಂದ ಸನ್ಮಾರ್ಗಕ್ಕೆ ತರಬಹುದು.

ಈ ಮಾತು ಮನೆಗಷ್ಟೆ ಸೀಮಿತವಲ್ಲ, ಶಾಲೆಯಲ್ಲಿಯೂ ತಪ್ಪದೇ ಅನುಷ್ಠಾನಿತವಾಗ ಬೇಕಾದ ಅಂಶವಾಗಿರುತ್ತದೆ. ಈ ಕಾರಣದಿಂದಲೇ "ವಾತ್ಸಲ್ಯ"ಮತ್ತು"ಶಾಲೆಗೆ" ಅವಿನಾಭಾವ ಸಂಬಂಧವಿದೆ ಎಂದು ಹೇಳಿದ್ದು.

ಒಮ್ಮೊಮ್ಮೆ ಎದುರಾಗುವ ಗಂಭೀರ ಪರಿಸ್ಥಿತಿಗಳನ್ನು ಹೊರತು ಪಡಿಸಿ ಉಳಿದ ಸಂದರ್ಭಗಳಲ್ಲಿ ಪೋಷಕರು ಕೈಕೊಳ್ಳುವಂತಹ ಕಠಿಣ ಕ್ರಮಗಳನ್ನು ಗುರುವೃಂದ

ತಮ್ಮ ಹಂತದಲ್ಲಿ ಕೈಗೆ ತೆಗೆದುಕೊಳ್ಳಬಾರದು. ಇದರಿಂದ ಬಹುಪಾಲು ಅಪಾಯವೇ ಎದುರಾಗುತ್ತದೆ.

ವ್ಯಕ್ತಿಗತ ಭಾವನೆಗಳ ಬೆಳವಣಿಗೆಯಲ್ಲಿ ವಾತ್ಸಲ್ಯವು ಪರಿಣಾಮಕಾರಿ ಪಾತ್ರ ವಹಿಸುತ್ತದೆ.

ಅಲ್ಲದೇ ಪ್ರತಿಯೊಬ್ಬ ವ್ಯಕ್ತಿಯು ಮತ್ತೊಬ್ಬರಿಗೆ ಬೇಕಾದವನಾಗಬೇಕು, ಅವರ ಪ್ರೀತಿಗೆ, ವಾತ್ಸಲ್ಯಕ್ಕೆ ಪಾತ್ರನಾಗಬೇಕು, ಅಂತಹ ಮೌಲ್ಯಗಳನ್ನು ನನ್ನಲ್ಲಿ ಬೆಳಸಿ ಕೊಳ್ಳಬೇಕು ಎಂದು ಹಾತೊರೆಯುತ್ತಿರುತ್ತಾನೆ.

ಅದಕ್ಕಾಗಿ ಬೆಳೆಯುತ್ತಿರುವ ಮಕ್ಕಳು ಮತ್ತು ತರುಣರು ತಟಸ್ಥರಾಗಿ ಒಂದೆಡೆ ಕುಳಿತು ಇತರರಿಂದ ನನಗೆ ಪ್ರೀತಿ ವಾತ್ಸಲ್ಯ ದೊರೆಯುತ್ತದೆಂದು ನಿರೀಕ್ಷಿಸುವುದು ಸೂಕ್ತ ವಲ್ಲ.

ಇತರರು ತನಗೆ ಏನು ಮಾಡಬೇಕೆಂದು ನಿರೀಕ್ಷಿಸುತ್ತಾನೆಯೋ ಅದನ್ನು ಇತರರಿಗೆ ತಾನು ಮಾಡಬೇಕು.

ಹಾಗೆಯೇ ಇತರರು ತನಗೆ ಏನು ಮಾಡಬಾರದೆಂದು ಆಲೋಚಿಸುತ್ತಾನೋ ಅದನ್ನು ಆತ ಇತರರಿಗೆ ಮಾಡಬಾರದು.

ಇದಕ್ಕೆ ಬೇಕಾದದ್ದು ಮನೋದೃಢತೆ ಹಾಗೂ ಅರಿವು.

ಅದನ್ನು ಮೂಡಿಸುವುದಕ್ಕೆ ಅಗತ್ಯವಾದ ಎಲ್ಲಾ ಚಟುವಟಿಕೆಗಳು ಹಾಗೂ ಸನ್ನಿವೇಶ ಗಳನ್ನು ರೂಪಿಸುವುದು ಪೋಷಕರ ವಿಶೇಷವಾಗಿ ಗುರುವೃಂದದ ಆದ್ಯ ಕರ್ತವ್ಯ ವಾಗಿರುತ್ತದೆ.

ಇದೆಲ್ಲಕ್ಕಿಂತ ಮಿಗಿಲಾಗಿ ತಂದೆ ತಾಯಂದಿರು ಮತ್ತು ಗುರುವೃಂದ ಕೂಡಾ ವಾತ್ಸಲ್ಯ ಪೂರಿತ ಹೃದಯ ಸಿರಿವಂತಿಕೆ ಉಳ್ಳವರಾಗಿದ್ದು ಮಕ್ಕಳಿಗೆ ಮಾದರಿಯಾಗಿ ನಡೆದು ಕೊಳ್ಳುವುದು ಅತ್ಯಂತ ಮುಖ್ಯ ಅಂಶವಾಗಿರುತ್ತದೆ.

ಮಕ್ಕಳ ಬುದ್ಧಿಮಟ್ಟ ಕಡಿಮೆ ಇದ್ದರೂ ವಾತ್ಸಲ್ಯಪೂರಿತ ಹೃದಯ ಸಿರಿವಂತಿಕೆವುಳ್ಳ ಪೋಷಕ ಮಿಗಿಲಾಗಿ ಗುರುವೃಂದವನ್ನು ಪಡೆದ ಮಕ್ಕಳು ಉತ್ತಮ ಕಲಿಕೆ, ಉತ್ತಮ ನಡವಳಿಕೆ ರೂಢಿಸಿಕೊಂಡು ಉತ್ತಮ ಭವಿಷ್ಯ ಉಳ್ಳವರಾಗುವುದರಲ್ಲಿ ಸಂಶಯ ವಿಲ್ಲ.

ಒಂದು ವೇಳೆ ಮನೆಯಲ್ಲಿ ಇಂತಹ ವಾತಾವರಣ ದೊರೆತು, ಶಾಲೆಯಲ್ಲಿ ದೊರೆಯ ದಿದ್ದರೆ ಉತ್ತಮ ಹಿನ್ನೆಲೆಯಲ್ಲಿ ಬೆಳೆದ ಬುದ್ಧಿವಂತ ಮಕ್ಕಳೂ ಕೂಡಾ ಹಿಂದೆ ಬೀಳು ವುದಲ್ಲದೇ ನಡವಳಿಕೆಯಲ್ಲೂ ನಿರೀಕ್ಷಿತ ಮಟ್ಟ ಮುಟ್ಟಲಾರರು.

ಆದ ಕಾರಣ ಗುರು ವೃಂದ ಪಠ್ಯ ವಿಷಯಗಳಿಗೆ ನೀಡುವ ಪ್ರಾಮುಖ್ಯತೆಯನ್ನು ಉತ್ತಮ ನಡವಳಿಕೆಗೆ ಪೂರಕವಾದ ವಾತ್ಸಲ್ಯ ಮುಂತಾದ ಭಾವನೆ ಮತ್ತು ಮೌಲ್ಯ ಗಳನ್ನು ರೂಪಿಸುವ ಕಡೆಗೆ ಗಮನಹರಿಸಬೇಕು.

# 4. ಸಹನೆ (patience)

ಡಾ॥ಶೀಲ : "ಸಹನೆ" ಎಂದರೇನು ?

ಡಾ॥ರಾಮು : ಮನಸ್ಸಿಗೆ ಉಂಟಾದ ನೋವನ್ನಾಗಲಿ, ಕೋಪವನ್ನಾಗಲಿ ಶಾಂತಿಯಿಂದ ಸಹಿಸುವುದು ಸಹನೆ.

ಇದನ್ನು ಸ್ಥೈರಣೆ, ತಾಳ್ಮೆಯೆಂದು ಕರೆಯಬಹುದು.

ಇದು ವ್ಯಕ್ತಿಯು ಹೊಂದಲೇಬೇಕಾದ ಪ್ರಮುಖ ಮೌಲ್ಯಗಳಲ್ಲಿ ಮಹತ್ವಪೂರ್ಣ ವಾದುದು.

ವ್ಯಕ್ತಿ ಚಾರಿತ್ರ್ಯದ ಮುಕುಟದ ಮಣಿ ಸಹನೆ.

ಯಾರೇ ಆಗಲಿ ಉತ್ತಮ ಚಾರಿತ್ರ್ಯ ಉಳ್ಳವರೆಂದು, ಗುಣಶೀಲರೆಂದು, ಉತ್ತಮ ನಡತೆಯುಳ್ಳವರೆಂದು ಹೇಳಿದರೆ ಅವರು ಸಹನಾ ಮೌಲ್ಯದಲ್ಲಿ ಕೊರತೆ ಇದ್ದಲ್ಲಿ ಖಂಡಿತ ಅವರು ಪರಿಪೂರ್ಣರಾಗುವುದಿಲ್ಲ.

ಸಹನೆ, ತಾಳ್ಮೆ, ಎಂದಾಕ್ಷಣ ಏನೇ ಬರಲಿ, ಏನೇ ಆಗಲಿ ಮಿಸುಕಾಡದೇ ಮೌನವ್ರತ ಮಾಡಬೇಕು.

ಭಾವೋದ್ವೇಗಗಳಿಗೆ ಒಳಗಾಗಲೇಬಾರದೆಂಬ ಅರ್ಥವಲ್ಲ ಎಷ್ಟೇ ನಿಂದಿಸಿ, ಜರಿ ದರೂ ಕಿವುಡನಂತೆ ಜಢವಾಗಿರುವುದು, ಆತ್ಮಾಭಿಮಾನಕ್ಕೆ ಕುಂದಾದರೂ ಅನೀತಿ, ಅಕ್ರಮಗಳು ನಡೆಯುತ್ತಿದ್ದರೂ ಸಮಾಧಾನದಿಂದ ಸಹನಾ ಶೀಲತೆ ಯಿಂದ ಕೈಕಟ್ಟಿ ಕುಳಿತರೆ ಕಾರ್ಗಿಲ್‌ನಂತಹ ಯುದ್ಧ ಪ್ರಸಂಗಗಳು ಜೀವನದಲ್ಲಿಯೂ ಎದುರಾಗು ತ್ತಿರುತ್ತವೆ.

ಅಲ್ಲದೇ ಹಾವಿನ ಕಥೆಯಂತೆ ಆಗುತ್ತದೆ.

ಯಾರನ್ನು ಕಚ್ಚಬಾರದೆಂದು ನಿರ್ಧರಿಸಿದ ಹಾವಿಗೆ ಎಲ್ಲರೂ ಹಿಂಸಿಸುವಾಗಲೂ ಏನೂ ಮಾಡದೇ ಇದ್ದ ಪ್ರತಿಫಲವಾಗಿ ಹಿಂಸೆ, ನೋವು ಮತ್ತು ಪ್ರಾಣಕ್ಕೆ ಕುತ್ತು ಬಂದೊದಗಿತು.

ಕಚ್ಚಬಾರದಾದರೂ ಪ್ರಾಣಹಾನಿ ಉಂಟಾಗುವಾಗ ರಕ್ಷಣೆಗಾಗಿ ಬುಸುಗುಟ್ಟಬೇಕೆಂಬ ವಿವೇಚನೆಯ ಔಚಿತ್ಯ ಅರಿತುಕೊಂಡು ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿ ಯಾಗುತ್ತದೆ.

ಹಾಗೆಯೇ ಮನುಷ್ಯ ಜೀವನದುದ್ದಕ್ಕೂ ಸಹನಾಶೀಲನಾಗಿ ಇರಬೇಕಾದುದು ಅತ್ಯಂತ ಅವಶ್ಯವೆನಿಸಿದರೂ, ಸಮಸ್ಯೆಗಳು ಎದುರಾದಾಗ ಸಹನಾ ಸೀಮೆಯೊಳಗೇ ರಕ್ಷಣೆಗೆ ಜಾಗೃತರಾಗುವುದು ಅವಶ್ಯ ಎಂಬುದು ಮನಗಾಣಬೇಕಾದ ಅಂಶ.

ಡಾ॥ಶೀಲ : "ಸಹನೆ" ಈ ಮೌಲ್ಯವನ್ನು ತನ್ನ ನಡೆ-ನುಡಿ ಮತ್ತು ಚಾರಿತ್ರ್ಯದಲ್ಲಿ ಭೂಷಣವಾಗಿ ಉಳ್ಳವರಲ್ಲಿ ಯಾವ ಯಾವ ಈ ಕೆಳಕಂಡ ನಡವಳಿಕೆಗಳನ್ನು, ಗುಣಗಳನ್ನು ಕಾಣ ಬಹುದು.

ಡಾ||ರಾಮು : (1) ಸಹನೆಯ ಮೌಲ್ಯಕ್ಕೆ ದು:ಖ ದುಮ್ಮಾನ, ಸುಖ-ದು:ಖ, ನೋವು-ನಲಿವು, ಕಷ್ಟ-ನಷ್ಟ, ಶ್ರಮ-ವಿರಾಮಗಳನ್ನು ತಾಳ್ಮೆಯಿಂದ ಶಾಂತ ಚಿತ್ತದಿಂದ ತಡೆದು ಕೊಳ್ಳುವ ಮತ್ತು ಸಹಿಸಿಕೊಳ್ಳುವ ಶಕ್ತಿ ಇರುತ್ತದೆ.

(2) ಚಾರಿತ್ರ್ಯದಲ್ಲಿ ಆಂತರೀಕರಣಗೊಳಿಸಿಕೊಂಡಿರುವ ಯಾವುದೇ ಮೌಲ್ಯಗಳನ್ನು ಗುರುತಿಸುವುದಕ್ಕಿಂತ ಸುಲಭವಾಗಿ ಅರಿವಿಗೆ ವೇದ್ಯವಾಗುವುದು ಎಂದರೇ ಸಹನಾ ಮೌಲ್ಯ.

(3) ಯಾವುದೇ ತೊಂದರೆಯನ್ನು ಶಾಂತಚಿತ್ತದಿಂದ ಕ್ಷೋಭೆಗೆ ಒಳಗಾಗದೇ ಸ್ವೀಕರಿಸುವ ತಾಳ್ಮೆಯು ಸಹನಾ ಮೌಲ್ಯಕ್ಕೆ ಇರುತ್ತದೆ.

(4) ಕ್ಷುದ್ರ, ತುಚ್ಛ ಮಾನಸಿಕ ಮತ್ತು ಸಂವೇಗಾತ್ಮಕ ಮನೋಭಾವಗಳನ್ನು ನಿಯಂತ್ರಿಸುವ ಆತ್ಮಸ್ಥೈರ್ಯ ಉಳ್ಳವರಾಗಿದ್ದು ಅದು ಅವರಿಗೆ ಶ್ರೀರಕ್ಷೆಯಾಗಿರು ತ್ತದೆ.

(5)ಯಾವುದೇ ಸನ್ನಿವೇಶವನ್ನು ಶಾಂತತೆಯಿಂದ ಸ್ವೀಕರಿಸುವ, ವಿವೇಚನಾಪೂರಕ ವಾಗಿ ತೀರ್ಮಾನ ಮಾಡುವ ಹಾಗೂ ತೀರ್ಮಾನ ಮಾಡಿದ ವಿಚಾರವನ್ನುಮಾನಸಿಕ ಮತ್ತು ಸಂವೇಗಾತ್ಮಕ ಕ್ಷೋಭೆಗೆ ಒಳಗಾಗದೇ ಅನುಷ್ಠಾನಗೊಳಿಸುವ ಸಮಸಿಥಿ ತಿಯನ್ನು ಹೊಂದಿದವರಾಗಿರುತ್ತಾರೆ.

(6) ಸಹನೆಯುಳ್ಳವರು ತಮ್ಮ ಭೌತಿಕ ಶರೀರವು ದೌರ್ಬಲ್ಯಗಳು ಮತ್ತು ಛಿನ್ನತೆ ಗಳನ್ನು ಹೊಂದಿದ್ದರೂ ಸಹಜ ಸ್ಥಿತಿಯನ್ನು ಹಮ್ಮು-ಬಿಮ್ಮು ಇಲ್ಲದೇ ಸ್ವೀಕರಿಸಿ ಮೆಚ್ಚುವ ಹಾಗೂ ಇತರರ ಬಗೆಗೂ ಇದೇ ಧೋರಣೆಯನ್ನು ಹೊಂದಿರುವ ಹೃದಯ ವೈಶಾಲ್ಯತೆ ಹೊಂದಿರುತ್ತಾರೆ.

(7) ಸಹನೆ ಮೌಲ್ಯವು ನಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದಿರುವ ಆಸ್ತಿ ಯಾಗಿದೆಯಲ್ಲದೆ ಇದು ಒಂದು ಬಲಿಷ್ಠ ಶಕ್ತಿಯಾಗಿದೆ.

ಡಾ||ಶೀಲ : ಸಹನೆ ಈ ಮೌಲ್ಯವನ್ನು ರೂಢಿಸಿಕೊಳ್ಳದ ವ್ಯಕ್ತಿಗಳ ನಡವಳಿಕೆ ಹೇಗಿರುತ್ತದೆ ?

ಡಾ||ರಾಮು :(1) ಯಾವುದೇ ವ್ಯಕ್ತಿಯ ವಿಚಾರ ಮತ್ತು ವ್ಯಕ್ತಿಗಳ ಬಗೆಗೆ ಸಹಿಷ್ಣುತೆ ಹೊಂದಿ ರುವುದಿಲ್ಲವೋ ಆತ ಸ್ವಲ್ಪವೂ ವಿಳಂಬವನ್ನು ಸಹಿಸಿಕೊಳ್ಳದ ಆತುರ ಸ್ವಭಾವ ಉಳ್ಳ ವನಾಗಿರುತ್ತಾನೆ.

(2) ಕ್ಷುಲ್ಲಕ ವಿಚಾರಗಳಿಗೆ ಸುಲಭವಾಗಿ ಕ್ಷೋಭೆಗೊಳ್ಳುವ, ಬೇಗ ಮುಂಗೋಪ ಗೊಳ್ಳುವ, ಕಿರುಕುಳ ನೀಡುವ ಸ್ವಭಾವದ ವ್ಯಕ್ತಿಯಾಗಿರುತ್ತಾನೆ. ಒಳಿತು ಕೆಡುಕು ಗಳ ವ್ಯತ್ಯಾಸ ಅರಿಯುವ ಸೂಕ್ಷ್ಮಗ್ರಹಣ ಶಕ್ತಿ ಇಲ್ಲದ ನಡತೆ ಮತ್ತು ವರ್ತನೆವುಳ್ಳವ ನಾಗಿರುತ್ತಾನೆ.

(3) ಸಹನೆ ರಹಿತ ವ್ಯಕ್ತಿ ಆತುರದ ಮತ್ತು ಕೆಟ್ಟ ತೀರ್ಮಾನಗಳನ್ನೂ ಕೈಕೊಳ್ಳು ತ್ತಾನೆ. ಇದರಿಂದಾಗಿ ಅವನ ಮನಸ್ಸಿಗೆ ಮಂಕು ಕವಿಯುತ್ತದೆ. ಚಿಂತನಾಶಕ್ತಿಗೆ ಗ್ರಹಣ ಹಿಡಿಯುತ್ತದೆ. ತತ್ಫಲವಾಗಿ ಅಪಕ್ವ ಮತ್ತು ಆತುರದ ತೀರ್ಮಾನಗಳನ್ನು ಕೈಕೊಳ್ಳುವುದಕ್ಕೆ ತುತ್ತಾಗುತ್ತಾನೆ. ಆರೆಹುಚ್ಚನಂತೆ ವರ್ತಿಸತೊಡಗುತ್ತಾನೆ. ಎದುರಿ

ಗಿರುವ ವ್ಯಕ್ತಿ, ವಸ್ತುಗಳ ಮೇಲೆ ತಮ್ಮ ಕೋಪತಾಪವನ್ನು ತೀರಿಸಿಕೊಳ್ಳುವ ಮೃಗೀಯ ವರ್ತನೆಗೆ ಗುರಿಯಾಗುತ್ತಾನೆ.

ಒಟ್ಟಾರೆ ಸಹನಾ ಮೌಲ್ಯವನ್ನು ಯಾವ ಪ್ರಮಾಣದಲ್ಲಿ ಹೊಂದಿದ್ದಾನೆಂಬುದರ ಆಧಾರದ ಮೇಲೆ ಇತರರ ಜೊತೆ ಅವನ ಪ್ರತಿಕ್ರಿಯೆ ಮಟ್ಟ ನಿರ್ಧಾರವಾಗುತ್ತದೆ.

ಸಹನಾ ಮೌಲ್ಯವನ್ನು ರೂಢಿಸಿಕೊಂಡ ಹಾಗೂ ರೂಢಿಸಿಕೊಳ್ಳದ ವ್ಯಕ್ತಿಗಳ ನಡೆವಳಿಕೆಗಳನ್ನು ಹಾಗೂ ಸಹನಾ ಮೌಲ್ಯದ ಉತ್ತಮತೆಗಳನ್ನು ಅಸಹನಾ ಸ್ವಭಾವದವರ ದೌರ್ಬಲ್ಯ ಹಾಗೂ ದುರ್ನಡತೆಗಳನ್ನು ಗಂಭೀರವಾಗಿ ಅವಲೋಕಿಸಿ ಚಿಂತಿಸಿದಾಗ ಸಹನಾ ಮೌಲ್ಯವರ್ಧನೆ ಇಂದಿನ ಸಂಕೀರ್ಣ ಸಮಾಜದಲ್ಲಿ ಎಷ್ಟೊಂದು ಅವಶ್ಯಕವಾಗಿರುತ್ತದೆಂದು ಮನಗಾಣಬಹುದು.

ಆದರೇ ಇಂದು ಬಹುಪಾಲು ಮಕ್ಕಳಲ್ಲಿ ಈ ಮೌಲ್ಯದ ದೌರ್ಬಲ್ಯವು ಎದ್ದು ಕಾಣುತ್ತಿದೆ. ಪ್ರತಿಯೊಂದು ಆಚಾರ, ವಿಚಾರ, ನಡೆ-ನುಡಿಗಳಲ್ಲಿ ತಾಳ್ಮೆ ರಹಿತ, ಆತುರಾತುರದ ಕಾತುರತೆಯನ್ನು ಕಾಣುತ್ತೇವೆ. ಸಹನಾ ಮೌಲ್ಯ ಇಲ್ಲದ ಹಿರಿಯರ ಸ್ವಭಾವಗಳು ಬಹುಪಾಲು ಅವರ ಮಕ್ಕಳಲ್ಲಿಯೂ ಇಣುಕುತ್ತಲಿವೆ. ಇದೇ ಪ್ರವೃತ್ತಿ ಮುಂದುವರೆದರೇ ಪ್ರಜಾಪ್ರಭುತ್ವದಂತಹ ಭಾರತದಲ್ಲಿ ಬದುಕು ಹಸನುಗೊಳಿಸಿಕೊಂಡು ಇತರರ ಬದುಕಿನ ಹಸನಿಗೂ ಅವಕಾಶ ಕಲ್ಪಿಸುವ ಸಹನಾ ಮೌಲ್ಯ ವರ್ಧನೆಗೆ ಖಂಡಿತವಾಗಿ ಕೊಡಲಿ ಪೆಟ್ಟು ಬೀಳಲಿದೆ.

ತಂದೆ ತಾಯಂದಿರು ಮತ್ತು ಗುರುವೃಂದ ಮಾದರಿ ನಡವಲಿಕೆ ರೂಪಿಸುವುದಕ್ಕೆ ಗಂಭೀರವಾಗಿ ಚಿಂತಿಸಬೇಕಿದೆ. ಆತುರಗಾರನಿಗೆ ಬುದ್ಧಿಮಂದ ಎಂಬ ಗಾಧೆಯಂತೆ ಮಕ್ಕಳೆದುರಿಗೆ ಕೂಗಾಡಿ, ಚೀರಾಡಿ, ಬೀದಿರಂಪ ಮಾಡುತ್ತಿರುವ, ಕೈ ಕೈ ಮಿಲಾಯಿಸುತ್ತಿರುವ ಪೋಷಕರ, ಸಮಾಜದ ಪ್ರತಿಷ್ಠಿತರ, ಮಿಗಿಲಾಗಿ ಗುರುವೃಂದದ ಬಗೆಗೆ ಮಕ್ಕಳು ನಾಚಿಕೆ ಪಡುವಂತಾಗಿದೆ.

ಇಂದು ಪರಮ ಪವಿತ್ರವಾದ ನ್ಯಾಯಾಲಯ, ಶಾಸನ ಸಭೆಗಳು, ಸಂಸತ್ತುಗಳಲ್ಲಿಯೂ ಸಹನೆ ಮೀರಿ ವರ್ತಿಸುತ್ತಿರುವ ಜವಾಬ್ದಾರಿಯುತ ಪ್ರತಿಷ್ಠಿತರ ಬಗೆಗೆ ಚಿಂಸಿಸಿದಾಗ ಅದು ಅವರ ತಪ್ಪಲ್ಲ. ಅವರಿಗೆ ಚಾರಿತ್ರ್ಯದ ಬೆಳವಣಿಗೆಯ ಹಂತದಲ್ಲಿ ಸಹನಾ ಮೌಲ್ಯದ ಬೆಳವಣಿಗೆಯು ನಿರೀಕ್ಷಿತಮಟ್ಟದಲ್ಲಿ ಆಗದಿರುವುದು, ಆಗಿದ್ದರೂ ಅದು ಆಂತರೀಕರಣ ಆಗದಿರುವುದೇ ಪ್ರಮುಖವಾದ ಕಾರಣ ಎಂದು ಭಾವಿಸಬೇಕಾಗಿದೆ.

ಇದೇ ಪ್ರವೃತ್ತಿ ಮುಂದುವರೆಯದಂತೆ ಎಚ್ಚರಿಕೆ ವಹಿಸಿ ನಮ್ಮ ಮಕ್ಕಳಲ್ಲಿ ವ್ಯಕ್ತಿಗತವಾಗಿ, ಕೌಟುಂಬಿಕವಾಗಿ, ನೆರೆಹೊರೆ ಮತ್ತು ಸಮಾಜಿಕವಾಗಿ ಪೂರಕವಾದ ಸಹನಾ ಮೌಲ್ಯವನ್ನು ಸಕ್ರಮವಾಗಿ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳ ಮೂಲಕ ರೂಢಿಸಬೇಕಾದದು ಅತ್ಯಗ್ಯವಾದದು. ಅಲ್ಲದೇ ಅಸಹನಾ ನಡವಳಿಕೆ ಮತ್ತು ಆ ಸ್ವಭಾವದ ಕೆಟ್ಟಪರಿಣಾವ ಬಗೆಗೂ ಅರಿವು ಮೂಡಿಸುವ ಮೂಲಕ ಸಹನಾ ಮೌಲ್ಯದ ಬಲವರ್ಧನೆ ಮಾಡುವುದು ಅತಿ ಅಗತ್ಯವಿದೆ.

**ಯಾರು ಹಗೆತನದ ಸುಳಿವಿಲ್ಲದೆ, ಕೆಟ್ಟ ಮಾತುಗಳನ್ನು, ಪೆಟ್ಟುಗಳನ್ನು ಮತ್ತು ಶಿಕ್ಷೆಯನ್ನು ಸಹಿಸುವನೋ, ಯಾರ ನಿಜವಾದ ಶಕ್ತಿಯು ಸಹನೆಯೇ ಆಗಿದೆಯೋ ಅವರನ್ನು ನಾನು ಬ್ರಾಹ್ಮಣ ಎನ್ನುತ್ತೇನೆ. "ಸಹನೆಯೇ ತಪಸ್ಸುಗಳಲ್ಲೆಲ್ಲಾ ಉತ್ತಮವಾದುದು".**

## 5. ಸ್ವಾಭಿಮಾನ (Self-respect)

ಡಾ॥ಶೀಲ : " ಸ್ವಾಭಿಮಾನ " ಎಂದರೇನು ?

ಡಾ॥ರಾಮು: ತಮ್ಮ ಕಠಿಣ, ಪ್ರಾಮಾಣಿಕ ಪರಿಶ್ರಮದಿಂದ ಅರ್ಹತೆ ಹೆಚ್ಚಿಸಿಕೊಂಡು ಹಣ, ಅಂತಸ್ತು, ಪದವಿ, ಗೌರವ, ಘನತೆಗಳನ್ನು ತಾನಾಗಿ ಪಡೆಯುತ್ತೇನೆ ಎಂಬ ಉತ್ತಮ ಗುಣದ ಬಗೆಗೆ ದೃಢ ಆತ್ಮ ವಿಶ್ವಸ ಆಧರಿತ ಅತ್ಯಧಿಕ ಪ್ರೇಮ, ಒಲವು, ಆಸಕ್ತಿ, ಶ್ರದ್ಧೆ ಮತ್ತು ನಿಷ್ಠೆಯಿಂದ ಇರುವುದು ಸ್ವಾಭಿಮಾನ ಎನಿಸುತ್ತದೆ.

ಡಾ॥ಶೀಲ : ಇಂದಿನ ಈ ಸಮಾಜದಲ್ಲಿ ಸ್ವಾಭಿಮಾನವುಳ್ಳ ಶ್ರೇಷ್ಠರು ಇದ್ದಾರೆಯೇ ?

ಡಾ॥ರಾಮು: ಇಂದಿನ ಈ ಸಮಾಜದಲ್ಲಿ ಸ್ವಾಭಿಮಾನವುಳ್ಳ ಶ್ರೇಷ್ಠರು ಕಾಣಸಿಗುವುದೇ ದುರ್ಲಭವಾಗುತ್ತಿದೆ.

"ಸ್ವಾಭಿಮಾನ" ಎಂಬ ಮೌಲ್ಯವು ಇಂದು ತುಂಬಾ ಸಂಕುಚಿತವಾಗಿ, ಅರ್ಥಶೂನ್ಯ ವಾಗಿ ಹಟಮಾರಿತನಕ್ಕೆ, ಸ್ವಾರ್ಥ ಸ್ವಭಾವಕ್ಕೆ ಪೂರಕವಾಗಿ ಬಳಕೆಯಾಗತೊಡಗಿ ಆತಂಕ ಉಂಟುಮಾಡಿದೆ.

ಅರ್ಹತೆಗಳು ಇಲ್ಲದಿದ್ದರೂ ಅನಾಯಾಸವಾಗಿ, ಆಯಾಚಿತವಾಗಿ (ಅವಕಾಶಗಳು ಪರವಾಗಿ ಇಲ್ಲದಿದ್ದರೂ) ದಿಢೀರ್ ಹಣ, ಅಂತಸ್ತು, ಅಧಿಕಾರ, ಗೌರವ-ಘನತೆಗಳು ಬೇಕೆಂದು ಹಂಬಲಿಸುತ್ತಾ ಏನೆಲ್ಲಾ ಅನೀತಿ, ಅಧರ್ಮಗಳನ್ನು ಮಾಡುತ್ತಾ ಭವ್ಯ ಮೌಲ್ಯಗಳನ್ನೇ ಬದಿಗೊತ್ತಿ, ಮಾನವತಾ ಧರ್ಮವನ್ನೇ ಬಲಿಕೊಟ್ಟು ಸ್ವಾರ್ಥ ಸಾಧಿಸಲು ಹೊರಟಿರುವವರ ಸಂಖ್ಯೆಯೇ ಹೆಚ್ಚಾಗುತ್ತಿರುವ ಈ ಸಮಾಜದಲ್ಲಿ ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯವೇ ಇಲ್ಲವೆನ್ನುವಷ್ಟು ಗಂಭೀರ ಪರಿಸ್ಥಿತಿಯುಂಟಾಗಿದೆ.

ಒಂದೇ ಒಂದು ಕ್ಷಣ ಶಾಂತಚಿತ್ತರಾಗಿ ಪ್ರಶಾಂತ ವಾತಾವರಣದಲ್ಲಿ ಕುಳಿತು ಏಕಾಂತವಾಗಿ ಕತ್ತಲಲ್ಲಿ ಚಿಂತಿಸಿದರೆ ಅವರವರಿಗೆ ಜಿಗುಪ್ಸೆಪಡುವಂತಹ ದುಷ್ಕೃತ್ಯ, ದುರ್ನಡತೆಗಳಲ್ಲಿ ತೊಡಗಿರುವವರು ಅಪಾರ. ನಮ್ಮ ಭಾವಿ ಪ್ರಜೆಗಳು ಮೂಕ ವಿಸ್ಮಿತರಾಗಿ ಅಂತಹವರನ್ನು ನೋಡುವಂತಾಗಿದೆ. ಇವೇ ಬದುಕಿನ ಮೌಲ್ಯಗಳೇನೋ ಎಂದು ತಿಳಿದುಕೊಂಡು ರೂಢಿಸಿ ಕೊಳ್ಳುವಂತಾಗಿರುವುದು ನಮ್ಮ ದೌರ್ಬಲ್ಯವೇ ಸರಿ.

ಡಾ॥ಶೀಲ : ಸ್ವಾಭಿಮಾನ ಇದ್ದೆಡೆ ಏನು ಸುಳಿಯುವುದೇ ಇಲ್ಲ ?

ಡಾ॥ರಾಮು: ಸ್ವಾಭಿಮಾನ ಇದ್ದೆಡೆ ಅಹಂಕಾರ, ಜಂಭ, ಬೀಗುವಿಕೆ, ದುರಭಿಮಾನ, ಸ್ವಾರ್ಥಗಳು, ಸೋಮಾರಿತನ ಸುಳಿಯುವುದೇ ಇಲ್ಲ.

ಮಕ್ಕಳಿಗೆ ಅವರ ಭವ್ಯ ಭವಿಷ್ಯತ್ತಿಗೆ ಯಾವುದೇ ಆತಂಕಗಳು ಎದುರಾಗದಂತೆ ಪ್ರಾರಂಭದ ಹಂತದಿಂದಲೇ ಇತರ ಮೌಲ್ಯಗಳ ಜೊತೆ ಜೊತೆಯೇ ಸಹಚಾರ್ಥದಲ್ಲಿ ಸ್ವಾಭಿಮಾನ ಮೌಲ್ಯವನ್ನು ಹಾಗೂ ಅದಕ್ಕೆ ಪೂರಕವಾದ ಸಹ ಮೌಲ್ಯಗಳನ್ನು ರೂಢಿಸಲು ಅಗತ್ಯವಾದ ಎಲ್ಲಾ ಮುನ್ನೆಚ್ಚರಿಕೆಗಳನ್ನು ಪಾಲಕರು ಮತ್ತು ಗುರುವೃಂದ ಮನೆ ಮತ್ತು ಶಾಲೆಗಳಲ್ಲಿ ಮಾದರಿಯಾಗಿ ರೂಪಿಸುವುದು ಅತ್ಯಾವಶ್ಯಕವಾಗಿದೆ.

# 6. ಏಕಾಗ್ರತೆ (ದೃಢತೆ) (Concentration)

**ಡಾ॥ಶೀಲ :** " ಏಕಾಗ್ರತೆ " ಎಂದರೇನು ?

**ಡಾ॥ರಾಮು:** " ಒಂದು ವಸ್ತು, ವಿಚಾರ ಇಲ್ಲವೆ ಕಾರ್ಯ ಇತ್ಯಾದಿ ಬಗೆಗೆ ಶರೀರ ಮತ್ತು ಮನಸ್ಸುಗಳ ದೃಢತೆಯೇ ಏಕಾಗ್ರತೆ" ಎಂದು ಹೇಳಬಹುದು.

"ಏಕಾಗ್ರತೆ" ಇಂದು ಶಿಕ್ಷಣಾರ್ಥಿಗಳಿಗೆ ಕಡ್ಡಾಯವಾಗಿ ಇರಲೇಬೇಕಾದ ಪ್ರಮುಖ ವಾದ ಒಂದು ಗುಣ ಇದಾಗಿದೆ.

ಶರವೇಗದಲ್ಲಿ ಸಾಗುತ್ತಿರುವ ವಿಜ್ಞಾನ-ತಂತ್ರ ಜ್ಞಾನದ ಈ ಯುಗದಲ್ಲಿ ವಿದ್ಯಾರ್ಥಿ ಗಳು ದೃಢ ಮನಸ್ಸಿನಿಂದ, ಏಕಚಿತ್ತದಿಂದ ತಾದಾತ್ಮಕತೆಯಿಂದ ಕಲಿಕೆಮಾಡ ದಿದ್ದರೇ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಸ್ಥಾನಮಾನ ದೊರೆಯದೆ ಪ್ರಗತಿ ಶೂನ್ಯವಾಗ ಬೇಕಾಗುತ್ತದೆ.

ಅಲ್ಲದೆ, ಯಾವುದೇ ಆಚಾರ ವಿಚಾರಗಳಲ್ಲಿಯಾಗಲಿ, ಕಾರ್ಯಗಳಲ್ಲೇ, ಆಗಲಿ, ಏಕಾಗ್ರತೆ ಅಥವಾ ದೃಢತೆ ಯಿಂದ ಮಾಡಿದರೆ ಮಾತ್ರ ಉತ್ತಮ ಸಾಫಲ್ಯತೆ ಸಾಧ್ಯ.

ಏಕಲವ್ಯ ದ್ರೋಣರಿಂದ ಜ್ಞಾನಾರ್ಜನೆ ಪಡೆಯಲು ವಂಚಿತನಾದಾಗ ದೃತಿಗೆಡದೇ, ದ್ರೋಣಾಚಾರ್ಯರನ್ನೇ ತನ್ನ ಗುರುವೆಂದು ತನ್ನ ಮನಸ್ಸಿನಲ್ಲಿ ದೃಢ ಸಂಕಲ್ಪ ಮಾಡಿಕೊಂಡು ಆ ಗುರುವಿನ ಒಂದು ಮಣ್ಣಿನ, ಮಾದರಿ ವಿಗ್ರಹ ಮಾಡಿ ಅದನ್ನೇ ಗುರುವೆಂದು ಪೂಜಿಸುತ್ತ ಸಾಧನೆಗೈದು ಗುರುವನ್ನೇ ಮೀರಿಸುವ ಶಿಷ್ಯನಾಗಿ ಬೆಳೆಯುತ್ತಾನೆ.

ಇದಕ್ಕೆ ಕಾರಣ ಆತನಲ್ಲಿದ್ದ ಮನಸ್ಸಿನ ಏಕಾಗ್ರತೆ ಮುಖ್ಯವಾಗಿತ್ತು ಜೊತೆಗೆ ಅಪರಿಮಿತ ಶ್ರದ್ಧೆ, ಆಸಕ್ತಿ ಮತ್ತು ಪರಿಶ್ರಮ ಪೂರಕವಾಗಿದ್ದವು.

" ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಉನ್ನತಿಗೆ ಏರಲು ಪರಿಶ್ರಮ, ಸಹನೆ ಜೊತೆಗೆ ದೃಢಮನಸ್ಸು ನರನಾಡಿಗಳಲ್ಲಿ ತುಂಬಿರಬೇಕು.

ಮೈಮನಗಳೆರಡೂ ಬಲಿಷ್ಠವಾಗಿರ ಬೇಕು. ಆಗಲೇ ಉನ್ನತಿ ಸಾಧಿಸಲು ಸಾಧ್ಯ."

ಮನುಷ್ಯನ ಮನಸ್ಸು ಚಂಚಲವಾದದು. ಸದಾ ತಳಮಳಗೊಂಡು ಮರ್ಕಟನಂತೆ ಆಡುತ್ತಿರುತ್ತದೆ.

ಮನಸ್ಸಿನ ಚಂಚಲತೆ ಬಗೆಗೆ ಪುರಾಣಾದಿಕಾಲದಿಂದಲೂ ಅರಿವುಳ್ಳವರಾಗಿ ಚಿಂತನಾ ಮಗ್ನರಾಗಿರುವುದು ವೇದ್ಯವಾಗುತ್ತದೆ. ಪಾಂಡವರು ವನವಾಸದಲ್ಲಿರುವಾಗ ಯುಧಿಷ್ಟಿರನು ನೀರು ತರಲು ಕೊಳಕ್ಕೆ ಹೋದಾಗ ಅಲ್ಲಿ ನೀರು ತೆಗೆದುಕೊಳ್ಳುವ ಮುನ್ನ ಯಕ್ಷನ ಪ್ರಶ್ನೆಗೆ ಉತ್ತರಿಸಿ ನೀರು ತೆಗೆದುಕೊಳ್ಳಬೇಕಾಯಿತು.

ಯಕ್ಷ ಕೇಳಿದ ಪ್ರಶ್ನೆಗಳಲ್ಲಿ ಮುಖ್ಯವಾದದು ಯಾವುದೆಂದರೆ:-

ಗಾಳಿಗಿಂತ ಚಂಚಲವಾದದು ಯಾವುದು ?

ಯುಧಿಷ್ಟಿರ ಅದಕ್ಕೆ ಕೊಟ್ಟ ಉತ್ತರ " ಮನಸ್ಸು" ಎಂದು. ಅದಕ್ಕೆ ಯಕ್ಷ ಸಂತುಷ್ಟ ನಾಗುತ್ತಾನೆ. ಯಕ್ಷಾದಿ ದೇವತೆಗಳಿಗೂ ಮನಸ್ಸಿನ ಚಾಂಚಲ್ಯದ ಅರಿವು ಇದ್ದಿತು.

ಎಂಬುವುದಾದರೆ ಮನುಷ್ಯನ ಮನಸ್ಸು ಎಷ್ಟೊಂದು ಚಂಚಲವಾದದು ಎಂಬುದು ಇದರಿಂದ ಮನದಟ್ಟಾಗುತ್ತದೆ.

ಅಂತಹ ಚಾಂಚಲ್ಯದಿಂದ ಕೂಡಿದ ಮನಸ್ಸನ್ನು ಇಂದ್ರಿಯಾದಿ ಸುಖಭೋಗಗಳಿಂದ ವಿಮುಖಗೊಳಿಸಿ ತನ್ನ ಕಲಿಕೆಯಲ್ಲಿ ಉನ್ನತಿ ಸಾಧಿಸುವ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ದೃಢಮನಸ್ಕನಾಗಿ ಏಕಚಿತ್ತದಿಂದಸಾಧನೆಯಲ್ಲಿತೊಡಗಬೇಕಿದೆ. ಅಲ್ಲದೆ ತನ್ನ ಭವಿಷ್ಯತ್ತಿನ ಜೀವನ ದಲ್ಲಿಯೂ ಆಸೆ, ಆಮಿಷಗಳಿಗೆ ಮತ್ತು ಇಂದ್ರಿಯಾದಿ ಅರಿಷಡ್ವರ್ಗಗಳಿಗೆ ಬಲಿಯಾಗದೆ, ತನ್ನ ಮತು ರಾಷ್ಟ್ರದ ಉನ್ನತಿಗೆ ಸದೃಢತೆಯಿಂದ ಶ್ರಮಿಸುವವನಾಗಬೇಕು.

ಪ್ರತಿಯೊಬ್ಬರಿಗೂ ಮತ್ತೊಬ್ಬರ ಆಚಾರವಿಚಾರಗಳು, ಸಿರಿಸಂಪತ್ತುಗಳು ಪ್ರಿಯವಾಗಿ ಕಾಣುತ್ತವೆ.

ಹಾಗೆಯೇ ಅದನ್ನೇ ಆಲೋಚಿಸುತ್ತಾ ತನ್ನಲ್ಲಿರುವ ಆಚಾರವಿಚಾರಗಳ ಉತ್ತಮಿಕೆ ಮತ್ತು ಸಿರಿಸಂಪತ್ತನ್ನು ಕಡೆಗಣಿಸಿ ತನ್ನ ಜೀವನವನ್ನು ಹಾಳುಮಾಡಿ ಕೊಳ್ಳುತ್ತಾರೆ.

ಇದಕ್ಕೆ ಮುಖ್ಯ ಕಾರಣ ಮನಸ್ಸಿನ ಚಂಚಲತೆ, ದೃಢಮನಸ್ಸು ಮತ್ತು  ಏಕಾಗ್ರತೆ ಇಲ್ಲದಿದ್ದರೆ ಅವನತಿ ಖಂಡಿತ.

ಪ್ರತಿಯೊಬ್ಬ ವ್ಯಕ್ತಿಯೂ ತ್ರಿವಿಧ ಪಾಪಗಳಿಗೆ ಬಲಿಯಾಗಿ ಬಳಲುತ್ತಿರುತ್ತಾನೆ.

ದು:ಖದಲ್ಲಿ ಉದ್ವಿಗ್ನಗೊಳ್ಳದೆ, ಸುಖದಲ್ಲಿ ನಿಸ್ಪೃಹ  ನಿರ್ಲಿಪ್ತನಾಗಿದ್ದು, ಮೋಹ, ಕ್ರೋಧ, ಭಯಗಳಿಲ್ಲದ ಜೀವನ ಸಾಗಿಸಬೇಕು.

ಇದಕ್ಕೆ ದೃಢ ಮನಸ್ಸು ಮುಖ್ಯ. ಅಂಥವರನ್ನು "ಸ್ಥಿತಪ್ರಜ್ಞ" ಎಂದು "ಗೀತೆ" ಯಲ್ಲಿ ಯೂ  ಕರೆಯಲಾಗಿದೆ. ಅಂತಹ ದೃಢಮನಸ್ಕ ಉಳ್ಳ ಸ್ವಭಾವವನ್ನು ಮಕ್ಕಳಲ್ಲಿ ರೂಪಿಸುವುದು ಅತಿ ಅಗತ್ಯವಿದೆ.

ಮನೋದೃಢತೆ ಇಲ್ಲದಿದ್ದರೆ ಜೀವನದಲ್ಲಿ ಪ್ರತಿ ಹೆಜ್ಜೆಗೂ ಎದುರಾಗುವ ದ್ವಂದ್ವಗಳ ಆಯ್ಕೆಯಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿಕೊಳ್ಳಲು ಕಷ್ಟವಾಗುತ್ತದೆ.

ಮನಸ್ಸು ಇಂದ್ರಿಯ ಚಾಪಲ್ಯಗಳಿಗೆ, ಒತ್ತಡ, ಆಸೆ-ಆಮಿಷಗಳ ಪ್ರಭಾವಗಳಿಗೆ ಬಲಿಯಾಗಿ ಚಂಚಲಗೊಂಡು ದೌರ್ಬಲ್ಯಗಳಿಗೆ ತುತ್ತಾಗಿ ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಕುಂಠಿತವಾಗುತ್ತದೆ.

ಅಲ್ಲದೆ ದುಷ್ಟಸ್ವಭಾವಗಳು ಮತ್ತು ವರ್ತನೆಗಳು  ಕೂಡಾ ಜಾಗೃತವಾಗುತ್ತವೆ. ಇವು ಭವಿಷ್ಯತ್ತಿನ ಜೀವನದ ಮೇಲೂ ಪ್ರಭಾವ  ಬೀರುತ್ತವೆ.

ಆದುದರಿಂದ ಪ್ರಾರಂಭ ಹಂತದಿಂದಲೇ ಮಕ್ಕಳಲ್ಲಿ ತಮ್ಮ ಕಲಿಕೆಯಲ್ಲಿ, ಮಿಗಿಲಾಗಿ ನಡೆನುಡಿ,ಸ್ವಭಾವಗಳಲ್ಲಿ ಉತ್ತಮ ಸಾಧನೆಯತ್ತ ದೃಢ ಮನಸ್ಸು ನೆಲೆಗೊಳ್ಳು ವಂತೆ ಗಮನ ಹರಿಸುವುದು ಹಾಗೂ ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ರೂಪಿಸುವುದು ಅಗತ್ಯವಿದೆ.

ಪಾಲಕರೂ ಕೂಡಾ, ಮಕ್ಕಳಿಗಾಗಿಯೇ ದುಡಿಯುತ್ತಿದ್ದೇವೆ, ಅವರಿಗಾಗಿ ಹಗಲಿರುಳೆ ನ್ನದೆ, ಶ್ರಮಿಸುತ್ತಿದ್ದೇವೆ, ಅವರಿಗೆ ಭೌತಿಕ ಸೌಕರ್ಯಗಳಿಗೆ ಕೊರತೆ ಇಲ್ಲದ ಹಾಗೆ

ಹಣ ಕೊಡುತ್ತೇವೆಂಬ ಧೋರಣೆಯನ್ನು ಬಿಟ್ಟು ಯಾರಿಗೋಸ್ಕರ ಏನೆಲ್ಲ ಶ್ರಮ ವಹಿಸಿ ದುಡಿಯುತ್ತಿರುವರೋ ಅದನ್ನು ಅವರು  ಸನ್ಮಾರ್ಗದಲ್ಲಿ, ಸನ್ನಡತೆಯಿಂದ ಸತ್ಫಲಕ್ಕಾಗಿ ಬಳಸುವಂತಹ ಗುಣ-ಸ್ವಭಾವಗಳನ್ನು ಬೆಳೆಸಿಕೊಳ್ಳುತ್ತಿರುವರೇ?

ಅದಕ್ಕೆ ತಾವು ಮಾದರಿಯಾಗಿ, ಮಾರ್ಗದರ್ಶಕರಾಗಿ ಅವರ ಬೇಕುಬೇಡಗಳಿಗೆ ಸ್ಪಂದಿಸಿ ಸನ್ಮಾರ್ಗಗಾಮಿಗಳನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದೇವೆಯೇ? ಎಂಬಿತ್ಯಾದಿ ಬಗೆಗೆ ಕ್ಷಣಕಾಲ ಶಾಂತಚಿತ್ತರಾಗಿ ಕುಳಿತು ಆಲೋಚಿಸಬೇಕು.

ಇಂದಿನ ಮಕ್ಕಳಿಗೆ ಕೇವಲ ಆಸ್ತಿಪಾಸ್ತಿ, ಸಿರಿಸಂಪತ್ತು ಗಳಿಸಿ ಕೊಡುವುದು ಮುಖ್ಯವಲ್ಲ.

ಅವರಿಗೆ ತಮ್ಮ ಪ್ರೀತಿ-ವಾತ್ಸಲ್ಯ ಪೂರಕ ಸವಿನುಡಿಯ ಹಿತವಚನಗಳು, ಮಾರ್ಗದರ್ಶನಗಳು ಸದಾ ದೊರೆಯುವಂತೆ ಮಾಡುವುದು ಅಮೂಲ್ಯವಾದದು.

ಸಂಕೀರ್ಣ ಸಮಾಜದಲ್ಲಿ ಯಶಸ್ವಿಯಾಗಿ ಬದುಕುವ ಹೃದಯ ಶ್ರೀಮಂತಿಕೆಯನ್ನು ರೂಢಿಸಲು ಶ್ರಮಿಸುವುದು ಮುಖ್ಯವಿದೆ.

ತಂದೆತಾಯಿಗಳ ವಾತ್ಸಲ್ಯ ದೊರೆಯದೆ  ಕೇವಲ ಹಣದ ಹೊಳೆಯಲ್ಲಿ ಮುಳುಗಿರುವ ಮಕ್ಕಳ ಭವಿಷ್ಯ ತುಂಬಾ ಹಾಳಾಗುತ್ತಿದೆ  ಎಂಬುದು ನಗ್ನ ಸತ್ಯ.

ಈ ಬಗೆಗೆ ಪಾಲಕರು ಆದ್ಯ ಗಮನ ಹರುಸುವುದು  ತುಂಬಾ ಆಗತ್ಯವಿದೆ.

ಒಟ್ಟಾರೆ ಮಕ್ಕಳಲ್ಲಿ ದೃಢ ಮನಸ್ಸಿನ (ಏಕಾಗ್ರತೆ) ಪ್ರಾಮುಖ್ಯತೆ ಬಗೆಗೆ ಅರಿವು ಮೂಡಿಸುವ ಮೂಲಕ ಅದರ ಮೌಲ್ಯವನ್ನು ಪ್ರಾರಂಭ ಹಂತದಿಂದಲೂ ಪ್ರಜ್ಞಾಪೂರ್ವಕವಾಗಿ ರೂಪಿಸುವುದು ಗುರುವೃಂದಕಿಂತ ಮಿಗಿಲಾಗಿ ಪೋಷಕರ ಗಂಭೀರ ವಾದ ಹೊಣೆಗಾರಿಕೆಯಾಗಿದೆ.

## 7. ಲಜ್ಜೆ ಅಥವಾ ನಾಚಿಕೆ (Modesty)

ಡಾ॥ಶೀಲ : " ಲಜ್ಜೆ ಅಥವಾ ನಾಚಿಕೆ " ಎಂದರೇನು ?

ಡಾ॥ರಾಮು: ತನ್ನಿಂದ ಕೆಟ್ಟದ್ದೇನಾದರೂ ಉಂಟಾದಾಗ ಅಥವಾ ಆಗುವ ಸಾಧ್ಯತೆ ಇದ್ದಾಗ ಮತ್ತು ಇಂತಹ ಕಲ್ಪನೆ ಹಲವು ಬಾರಿ ಮೂಡಿದಾಗ ಮನಸ್ಸಿಗೆ ಉಂಟಾಗುವ ತಾಪವೇ ಲಜ್ಜೆ ಅಥವಾ ನಾಚಿಕೆ.

ಲಜ್ಜೆ ಅಥವಾ ನಾಚಿಕೆ ಮಾನವನ ಚಾರಿತ್ರ್ಯದ ಕಿರೀಟಕ್ಕೆ ತೊಡಿಸಿದ ಒಂದು ರತ್ನ ಇದ್ದಂತೆ. ಇದು ಹೆಣ್ಣು, ಗಂಡು ಭೇದವಿಲ್ಲದೆ ಇರಲೇಬೇಕಾದ ಗುಣ.

ಆದರೆ ಕೆಲವರು ಇದನ್ನು ಹೆಣ್ಣಿಗೆ ಮಾತ್ರ ಆರೋಪಿಸಿರುತ್ತಾರೆ. ಹುಡುಗಿಯರಿಗೆ ನಾಚಿಕೊಳ್ತಾನೆ, ಹುಡುಗಿಯಾಗಿದ್ದೂ ನಾಚಿಕೆ ಇಲ್ಲವೇ? ಈ ಹೇಳಿಕೆಗಳು ಇದನ್ನು ಸಾಬೀತುಪಡಿಸುತ್ತವೆ. ಏನೇ ಆಗಲಿ, ಈ ಗುಣ ಪ್ರತಿಯೊಬ್ಬರಿಗೂ ಹೆಣ್ಣು-ಗಂಡು ಭೇದವಿಲ್ಲದೆ ಹಿತಮಿತವಾಗಿ ಇರಲೇಬೇಕಾದದು ಆಗಿದೆ.

" ಲಜ್ಜೆ " ಇದೊಂದು ಜಗತ್ತಿನ ಅತಿ ದೊಡ್ಡ ಶಕ್ತಿಯಾಗಿದೆ. ಅತಿಯಾದ ಲಜ್ಜೆ ಹೊಂದಿರುವುದು ಬದುಕಿಗೆ ಭೂಷಣ ಅಲ್ಲ. ಲಜ್ಜತರಲ್ಲದೆ ಲಂಗುಲಗಾಮಿಲ್ಲದೆ ವರ್ತಿಸುವ್ರದೂ ಭೂಷಣವಲ್ಲ.

ಸಾತ್ವಿಕ ಲಜ್ಜೆ ಉತ್ತಮವಾದದು. ರಾಜಸಿಕ ಲಜ್ಜೆ ಮಧ್ಯಮವಾದದು. ತಾಮಸಿಕ ಲಜ್ಜೆ ಅಧಮವಾದದು. ತಾಮಸ ಲಜ್ಜೆಯನ್ನು ಪ್ರದರ್ಶಿಸಬಾರದು.

ಲಜ್ಜೆಯ ಕಾರಣ ದೊಡ್ಡದಿದ್ದರೇ ಮನುಷ್ಯ ಮೂಕನಾಗಿ ಭಾವುಕತೆಯಿಂದ ಮೌನಿಯಾಗುತ್ತಾನೆ. ಲಜ್ಜೆಯು ಅತಿರೇಕಕ್ಕೆ ಹೋದಾಗ ಮೂರ್ಛೆಹೋಗುವ ಸಂಭವವೂ ಉಂಟು.

ಮನುಷ್ಯ ಜೀವನದ ಗತಿಯಲ್ಲಿ ಪ್ರಗತಿಯ ಮೆಟ್ಟಿಲೇರುವಾಗ ಏನಾದರೊಂದು ತಪ್ಪನ್ನು ತಿಳಿದೋ, ತಿಳಿಯದೆಯೋ ಮಾಡುತ್ತಿರುತ್ತಾನೆ.

ಅಂತಹ ತಪ್ಪುಗಳನ್ನೇ ಎತ್ತಿತೋರಿಸಿ ನಿಂದನೆ ಮಾಡುವುದನ್ನು ಬಿಟ್ಟು, ತಪ್ಪಿನ ಬಗ್ಗೆ ಅರಿವು ಮೂಡಿಸಿ, ಸಾಂದರ್ಭಿಕವಾಗಿ ತಿದ್ದುವುದು ಒಳಿತು.

ಇಂದು ಯಾವುದಕ್ಕೂ ಹೆದರದೆ, ಭಯಭೀತಿ ಇಲ್ಲದೆ, ಲಜ್ಜೆ, ನಾಚಿಕೆಯ ಪರಿವೆಯೇ ಇಲ್ಲದೆ, ಲಂಗುಲಗಾಮಿಲ್ಲದೆ, ಎಂತಹ ನೀಚಕೃತ್ಯವನ್ನೂ ಮಾಡಲು ಹೇಸದ ಮಟ್ಟಕ್ಕೆ ಇಳಿದಿರುವ ದೃಷ್ಟಾಂತಗಳನ್ನು ನೋಡಿದರೆ ನಮ್ಮ ಮಕ್ಕಳಿಗೆ ಇಂತಹದೆಲ್ಲಾ ಕೆಟ್ಟ ಆದರ್ಶವಾಗಿ ಉಳಿಯುವುದೆಂಬ ಆತಂಕ ಮೂಡುತ್ತದೆ.

ಹೀಗಾಗಿ ಅಂತಹ ಸನ್ನಿವೇಶಗಳಿಂದ ಪ್ರಭಾವಿತರಾಗದೆ ಪ್ರತಿಹಂತದಲ್ಲೂ ತನ್ನ ನೆರಳಿಗೆ, ತನ್ನ ಆತ್ಮಸಾಕ್ಷಿಗೆ ತಾನು ಹೆದರಿಕೊಂಡು ಬಾಳುವಂತವರಾಗಬೇಕು. ತಿಳಿದೋ, ತಿಳಿಯದೆಯೋ ಮಾಡುವ ತಪ್ಪುಗಳಿಗೆ ಲಜ್ಜಿತನಾಗಿ ಪಶ್ಚಾತ್ತಾಪ ಪಡುತ್ತಾ ತನ್ನ ಬದುಕನ್ನು ಹಸನುಗೊಳಿಸಿಕೊಳ್ಳಲು ಪ್ರಯತ್ನಪಡುವಂತಹ ಇಚ್ಛಾಶಕ್ತಿಯನ್ನು ಮಕ್ಕಳಲ್ಲಿ ಪ್ರಾರಂಭದ ಹಂತದಿಂದ ರೂಪಿಸಬೇಕಾದದು ತುಂಬಾ ಅಗತ್ಯವಿದೆ.

## 8. ನಗು ಮತ್ತು ಅಳು (Laugh & Cry)

ಡಾ॥ಶೀಲ : " ನಗು ಮತ್ತು ಅಳು " ಎಂದರೇನು ?

ಡಾ॥ರಾಮು: ನಗು ಮತ್ತು ಅಳು ಹುಟ್ಟಿದಾಗಿನಿಂದ ಸಾಯುವವರೆಗೂ ಜೀವನದಲ್ಲಿ ಹಾಸು ಹೊಕ್ಕಾಗಿ ಎಲ್ಲರಲ್ಲಿಯೂ ಕಂಡುಬರುವ ಸ್ವಭಾವವಾಗಿದೆ.

ಇವು ವ್ಯಕ್ತಿಯ ಗುಣಸ್ವಭಾವಗಳಲ್ಲದಿದ್ದರೂ ದು:ಖದುಮ್ಮಾನದಲ್ಲಿ, ಸುಖಸಂತೋಷ ದಲ್ಲಿ, ನೋವುನಲಿವಿನಲ್ಲಿ ಸಹಜವಾಗಿ ಅಭಿವ್ಯಕ್ತಗೊಳ್ಳುವ ಒಂದು ವಿಶಿಷ್ಟ ಗುಣ ಸ್ವಭಾವಗಳಾಗಿದೆ.

ಈ ವಿಶಿಷ್ಟ ಗುಣ ಸ್ವಭಾವದಿಂದಲೇ ಮಾನವ ಒಂದು ಶ್ರೇಷ್ಠ ಪ್ರಾಣಿಯಾಗಿರುವುದು. ಇದು ಪ್ರಾಣಿಪಕ್ಷಿಗಳಲ್ಲಿ ಕಂಡುಬಾರದ ದೈವದತ್ತವಾದದು.

ಸಮಯ-ಸಂದರ್ಭಗಳಲ್ಲಿ ಸಹಜವಾಗಿ ನಗುವುದು ಹಾಗೂ ಅಳುವುದು ಕೂಡಾ ಮಗುವಿನ ಮಾನಸಿಕ ಸ್ಥಿಮಿತತೆ ಪರಿಕಕ್ವತೆಯನ್ನು ಕಾಯ್ದುಕೊಳ್ಳುತ್ತದೆ, ರಕ್ಷಿಸು ತ್ತದೆ.

" ದು:ಖದಿಂದ ತಳಮಳಗೊಂಡ ಹೃದಯವನ್ನು ಅಳುವುದರಿಂದ ಹಿಡಿತದಲ್ಲಿ ಇರಿಸ ಬಹುದು" ಎಂದು ಉತ್ತರ ರಾಮ ಚರಿತ್ರೆಯಲ್ಲಿ ಹೇಳಿರುವುದು ಉತ್ಪ್ರೇಕ್ಷೆ ಅಲ್ಲ.

ಅಲ್ಲದೆ " ನೀ ಹೀಂಗ ನೋಡ ಬ್ಯಾಡ ನನ್ನ" ಕವನದಲ್ಲಿ ತನ್ನ ಸತ್ತಿರುವ ಮಗು ವನ್ನು ಪೆಚ್ಚಾಗಿ ನೋಡುತ್ತಾ ಮೂಕಳಾಗಿ ಕುಳಿತಿರುವ ತಾಯಿಯನ್ನು ಕುರಿತು " ಅತಾರ ಅತ್ತುಬಿಡಿ, ದು:ಖವನ್ನು ಹೃದಯದಲ್ಲಿ ತುಂಬಿಟ್ಟುಕೊಂಡು ಒತ್ತಡ ಉಂಟುಮಾಡಿಕೊಳ್ಳಬೇಡಿ" ಎಂದು ದ. ರಾ. ಬೇಂದ್ರೆರವರು ವರ್ಣಿಸಿರುವುದನ್ನು ಗಮನಿಸಿದಾಗ ದು:ಖದ, ನೋವಿನ ಶಮನಕ್ಕೆ "ಅಳು" ಸಂಜೀವಿನಿಯಾಗಿದೆ ಎಂಬು ವುದು ವೇದ್ಯವಾಗುತ್ತದೆ.

ಯಾವುದೇ ಸಂಕಷ್ಟದ ಪರಿಸ್ಥಿತಿಯಲ್ಲಿ ಅಳುವುದರಿಂದ ಆತನಲ್ಲಿ ದು:ಖ ಕಡಿಮೆ ಯಾಗುತ್ತದೆ.

ಸಮಾನ್ಯವಾಗಿ ಸ್ತ್ರೀಯರು ಸಹಜವಾಗಿ ಅಳುವುದರಿಂದ ಮತ್ತು ದು:ಖದ ಬಾಧೆ ಒತ್ತಡ ಕಡಿಮೆಯಾಗಿರುತ್ತದೆ.

ಹೃದಯಾಘಾತ ಅದವರಿಗೆ ಕಡಿಮೆ ಎಂಬುದು ಇದಕ್ಕಾಗಿಯೇ, ಆದರೆ ಪ್ರತಿಯೊಂದು ಕ್ಷುಲ್ಲಕ ಕಾರಣಗಳಿಗೂ, ಸನ್ನಿವೇಶಗಳಿಗೂ ಅಳುವುದು ವ್ಯಕ್ತಿಯ ದೌರ್ಬಲ್ಯವನ್ನು ವ್ಯಕ್ತ ಪಡಿಸುತ್ತದೆ.

ಮಕ್ಕಳು ತಾವು ಮಾಡುವ ಬಹುಪಾಲು ಚಟುವಟಕೆಗಳಲ್ಲಿ ನಗುತ್ತಲೇ ಇರುತ್ತಾರೆ.

ಒಂದು ಸಾಮಾನು ಬೀಳಿಸಿದರೂ ನಗುತ್ತಾರೆ. ಒಡೆದರೂ ನಗುತ್ತಾರೆ.

ಅವರು ಸಹಜವಾಗಿ ಪ್ರತಿ ಸಂದರ್ಭವನ್ನು ಸ್ಫೂರ್ತಿದಾಯಕವಾಗಿ ತೆಗೆದುಕೊಂಡು ನಗು ನಗುತ್ತಾ ಇರುತ್ತಾರೆ.

ಆದರೆ ಬೆಳೆಯುತ್ತಾ ಬೆಳೆಯುತ್ತಾ ಸಹಜ ನಗು ಮಾಯವಾಗ ತೊಡಗುತ್ತದೆ.

ಕಾರಣ ಬೈಗುಳ, ಹೊಡೆತ, ಹೆದರಿಕೆ ಮತ್ತು ಭಯ ಭೀತಿಯನ್ನು ಪರಕಾಷ್ಠೆ ಮಟ್ಟಕ್ಕೆ ಗುರು, ಹಿರಿಯರು, ಮಕ್ಕಳಲ್ಲಿ ಉಂಟು ಮಾಡಿರುವುದು.

ಮಕ್ಕಳಲ್ಲಿ ಸಹಜವಾಗಿ ನಗುವ-ಅಳುವ ಈ ಗುಣಸ್ವಭಾವವು ಅತ್ಯಂತ ಉತ್ತಮ ವಾದ ಮೌಲ್ಯವಾಗಿದೆ.

ಈ ಮೌಲ್ಯವನ್ನು ಮಕ್ಕಳ ಜೀವನದಲ್ಲಿ ಹದವರಿತು ಬಳಸಿಕೊಂಡು ಅವರ ಬಾಳಿನ ಬೆಳಕಿಗೆ ಅನುಕೂಲವಾಗುವಂತೆ ರೂಪಿಸಬೇಕಿದೆ.

ಇದು ನಿಜ. ಸದಾ ತಾನು ನಗುನಗುತ್ತಾ ತನ್ನವರನ್ನೂ, ಸುತ್ತಮುತ್ತಲಿನವರನ್ನೂ ಸದಾ ನಗುವಂತೆ ಮಾಡುವುದು ಖಂಡೀತಾ ಒಂದು ಉತ್ತಮ ಗುಣ ಸ್ವಾಭಾವ ವಾಗಿದೆ.

**ಡಿ.ವಿ.ಜಿ ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ನಗುವಿನ ಬಗೆಗೆ ಹೀಗೆ ಹೇಳಿದ್ದಾರೆ**

ನಗುವುದು ಸಹಜ ಧರ್ಮ ನಗಿಸುವುದು ಪರ ಧರ್ಮ ।
ನಗುವ ಕೇಳುತ ನಗುವುದು ಅತಿಶಯದ ಧರ್ಮ ॥
ನಗುವ, ನಗಿಸುವ, ನಗಿಸಿ ನಗುತ ಬಾಳುವ ವರವಮಿಗೆ ।
ನೀನು ಬೇಡಿಕೊಳ್ಳೊ ಮಂಕುತಿಮ್ಮ ॥

# 6. ಪಂಚ ಮಾನವ ಮೌಲ್ಯಗಳ ಪ್ರಮುಖ ಉಪದ್ರವಗಳು

1. ಕುತೂಹಲ (Anxiety)

2. ಕೋಪ (Anger)

3. ಅಸೂಯೆ (ಮಾತ್ಸರ್ಯ) (Envious)

4. ಹೆದರಿಕೆ (Apprehension)

5. ಭಯ (Fear)

## 1. ಕುತೂಹಲ (Anxiety)

ಡಾ॥ಶೀಲ : " ಕುತೂಹಲ " ಎಂದರೇನು ?

ಡಾ॥ರಾಮು: ಆಸಕ್ತಿಯಿರುವ ಅಂಶ, ಘಟನೆ, ಆಚಾರ-ವಿಚಾರಗಳಿಗೆ ಸಂಬಂಧಿಸಿದಂತೆ ಸಂಭವಿಸಬಹುದಾದ ಪರಿಸ್ಥಿತಿಯ ಬಗೆಗೆ ಮನಸ್ಸು ಆತಂಕಗೊಂಡಿರುವ ಸ್ಥಿತಿಗೆ " ಕುತೂಹಲ, ವ್ಯಾಕುಲ, ಕಳವಳ, ಕಾತರ, ತಲ್ಲಣ, ತವಕ, ಚಿಂತೆ" ಎಂದು ಹೇಳಬಹುದು.

ಇದು ಮಾನಸಿಕವಾಗಿ ಕೇಡು ಅಥವಾ ನೋವು ಉಂಟುಮಾಡುವ, ಒಂದು ರೀತಿಯ ಸಂಕಷ್ಟ ಸ್ಥಿತಿ.

ಮೇಲ್ನೋಟಕ್ಕೆ ಭಯ ಹಾಗೂ ವ್ಯಾಕುಲವು ಒಂದೆ ಎಂಬಂತೆ ಕಂಡು ಬಂದರೂ ಎರಡೂ ಭಿನ್ನವಾಗಿವೆ.

ಮಕ್ಕಳು ಇಲ್ಲವೇ ವಯಸ್ಕರು ಯಾವ ಕಾರಣಕ್ಕೆ ಮಾನಸಿಕ ಬಾಧೆಗೆ ಒಳಗಾಗಿದ್ದಾರೆಂಬುದನ್ನು ಗ್ರಹಿಸಲ್ಪಟ್ಟರೆ ಆವಾಗ ಅವರು ಭಯಗೊಂಡಿರುವ ಅಥವಾ ವ್ಯಾಕುಲಕ್ಕೆ ಬಲಿಯಾಗಿರುವರೆಂದು ಅರಿಯಬಹುದು.

ಚಿತೆ ಮತ್ತು ಚಿಂತೆ (ವ್ಯಾಕುಲ) ಎರಡೂ ಭಿನ್ನವಾದರೂ ಕ್ರಿಯೆಯಲ್ಲಿ ಎರಡೂ ಒಂದೆ.

ಚಿತೆ ದೈಹಿಕ ಶರೀರವನ್ನು ದಹಿಸಿದರೆ, ಚಿಂತೆಯು ಮನಸ್ಸನ್ನೇ ದಹಿಸ ತೊಡಗುತ್ತದೆ. ಒಂದು ಗೋಚರ ಮತ್ತೊಂದು ಅಗೋಚರ.

ತನ್ನಲ್ಲಿ ಮನೆಮಾಡಿಕೊಂಡಿರುವ ಸಮಸ್ಯೆ, ಚಿಂತೆಗಳು ಒಳಗೊಳಗೆ ಮಾನಸಿಕ ಹಿಂಸೆಗೆ ಒಳಮಾಡುತ್ತಾ ದೈಹಿಕವಾಗಿ ಯಾವುದೇ ವೈಪರೀತ್ಯವನ್ನುತೋರ್ಪಡದೇ, ಮಾನಸಿಕವಾಗಿ ತೀವ್ರತರವಾದ ವೇದನೆ ಉಂಟು ಮಾಡುವುದು ಕೂಡಾ ವ್ಯಾಕುಲದ ಲಕ್ಷಣವಾಗಿರುತ್ತದೆ.

ತೀವ್ರತರದ ವ್ಯಾಕುಲಕ್ಕೆ ಒಳಗಾದ ವ್ಯಕ್ತಿ ತಾನು ಏಕೆ ಹೀಗಾಗಿರುವೆನು ? ಎಂಬ ನಿಖರವಾದ ಕಾರಣವನ್ನು ಅರಿಯದವನಾಗಿರುತ್ತಾನೆ.

ಏನಾಗುತ್ತಿದೆ? ಏನು ಮಾಡುತ್ತಿರುವೆ? ಎಂಬಿತ್ಯಾದಿ ವಿಚಾರಗಳು ಕೂಡಾ ಮನ ದಟ್ಟಾಗಿರುವುದಿಲ್ಲ.

ವ್ಯಾಕುಲ ತೀವ್ರತರವಾಗಿದ್ದಾಗ ಆತಂಕ ಹೆಚ್ಚಾಗಿದ್ದು ಆತ ಮುಂದೆ ಯಾವುದೇ ಸಾಮಾಜಿಕ ಚಟುವಟಿಕೆಗಳಲ್ಲಿ ಭಾವಹಿಸಲು ತಟಸ್ಥ ಧೋರಣೆ ತೋರುವುದು, ಹಿಂಜರಿಕೆ, ಸಂಕುಚಿತ ಭಾವನೆ ವ್ಯಕ್ತಪಡಿಸುವುದು ಇತ್ಯಾದಿ ಪ್ರವೃತ್ತಿಗಳು ಎದು ರಾಗತೊಡಗುತ್ತವೆ.

ಇದು ಮಕ್ಕಳಲ್ಲಿ ಮಿಗಿಲಾಗಿ ವಯಸ್ಕರಲ್ಲಿ ಅದರಲ್ಲೂ ವಿಶೇಷವಾಗಿ ತರುಣ-ತರುಣಿಯರಲ್ಲಿ ಕಾಣ ಬರುವ ಅಂಶವಾಗಿದೆ.

ವ್ಯಾಕುಲಕ್ಕೆ ಒಳಗಾದ ಮಕ್ಕಳು ಮಂಕು ಕವಿದವರಂತೆ, ಖಿನ್ನತೆಯಿಂದ ಕೂಡಿದ ಮನೋವಿಕಾರಕ್ಕೆ ಒಳಗಾದವರಂತೆ ಕಳಾಹೀನರಾಗಿ ಕಂಡುಬರುತ್ತಾರೆ.

ಅವರು ತಮ್ಮ ಮನಸ್ಥಿತಿಯನ್ನು ಬಿಚ್ಚು ಮನಸ್ಸಿನಿಂದ ಯಾರಿಗಾದರೂ ಹೇಳಿ ಕೊಳ್ಳಲು ತವಕಿಸುತ್ತಿರುತ್ತಾರೆ. ಅದಕ್ಕೆ ಅವಕಾಶ, ಪ್ರೇರಣೆ ದೊರೆತರೇ ಅವರ ಮುಗ್ಧ ಹೃದಯ ತೆರೆಯುತ್ತದೆ.

ನೇರ ಪ್ರಶ್ನೆಗಳಿಂದ ಅವರ ವ್ಯಾಕುಲ ಅಥವಾ ಚಿಂತೆಗೆ ಕಾರಣ ಹುಡುಕುವುದು ಸೂಕ್ತ ಎನಿಸಿದರೂ ಸಾಧುವಲ್ಲ.

ಹಲವಾರು ಪೂರಕ ವಿಚಾರಗಳನ್ನೂ, ಸನ್ನಿವೇಶಗಳನ್ನೂ ಸೃಷ್ಟಿಸಿ ತನ್ಮೂಲಕ ಅವರ ಚಿಂತೆಗೆ ಕಾರಣಗಳನ್ನು ಹುಡುಕುವ ಪ್ರಯತ್ನ ಮಾಡಬೇಕು.

ಕಾರಣ ಹುಡುಕಿದರಷ್ಟೇ ಸಾಲದು. ಅನಂತರ ಅದಕ್ಕೆ ತಕ್ಕ ಮಾರ್ಗೋಪಾಯ, ಮಾರ್ಗದರ್ಶನ, ಪರಿಹಾರಗಳನ್ನು ಅವರ ಪೋಷಕರಿಗೂ ಸೇರಿದಂತೆ ಸೂಕ್ತ ರೀತಿಯಲ್ಲಿ ಸಕಾರಾತ್ಮಕವಾಗಿ ನೀಡುವುದೂ ಅಗತ್ಯವಿರುತ್ತದೆ.

ಆಗಾಗ್ಗೆ ಅನುಪಾಲನೆ ಮಾಡುವುದನ್ನು ಮರೆಯಬಾರದು. ಒಟ್ಟಾರೆ ಕಲಿಕೆಯಲ್ಲಿ ಹಿಂದಿರಲಿ, ಮುಂದಿರಲಿ ಮಕ್ಕಳಿಗೆ ತಮ್ಮದೇ ಆದ ಕೆಲವು ವ್ಯಾಕುಲಗಳು ಕಾಡು ತ್ತಿರುತ್ತವೆ, ಗುರುವೃಂದವು ವಾತ್ಸಲ್ಯಪೂರಿತ ಹೃದಯ ಸಿರಿವಂತಿಕೆಯ ಮೂಲಕ ವ್ಯಾಕುಲ, ಕಾತರತೆ ಉಂಟಾಗದಂತೆ ಮತ್ತು ಮಕ್ಕಳ ಮನಸ್ಸು ತಲ್ಲಣಗೊಳ್ಳದಂತೆ ಅವುಗಳಿಂದ ಮುಕ್ತರನ್ನಾಗಿ ಮಾಡಬೇಕು.

ಆ ಘಳಿಗೆಯಿಂದಲೇ ಮಕ್ಕಳಲ್ಲಿ ಉತ್ತಮ ಗುಣ-ಸ್ವಭಾವಗಳು, ರೂಢಿಗತವಾಗಲು ಪ್ರೇರಣೆ ಮತ್ತು ಘೋಷಣೆಯಾಗುತ್ತದೆ.

## 2. ಕೋಪ (Anger)

ಡಾ॥ಶೀಲ : " ಕೋಪ " ಎಂದರೇನು ?

ಡಾ॥ರಾಮು: " ಕೋಪ ಎಂಬುದು ಎಷ್ಟೊಂದು ಅನರ್ಥಕಾರಿ ಮತ್ತು ವಿನಾಶಕಾರಿ" ಎಂಬುದನ್ನು ಪುರಾಣ ಇತಿಹಾಸ ಕಾಲದಿಂದಲೂ ನೂರಾರು ಸನ್ನಿವೇಶ ಮತ್ತು ಸಂಗತಿಗಳಿಂದ ಮನಗಂಡಿದ್ದರೂ ಅದನ್ನು ಜಯಿಸುವುದರಲ್ಲಿ ವಿಫಲರಾಗಿದ್ದೇವೆ.

ಕೋಪವೆಂಬ ಈ ಭಾವವನ್ನು ಹತೋಟಿಯಿಟ್ಟುಕೊಂಡು ಹದವರಿತು ಪ್ರದರ್ಶಿಸುವ ವಿವೇಚನಾ ಪರತೆಯನ್ನು ಮಕ್ಕಳಿಂದಲೇ ಬೆಳೆಸುವುದು ಅಗತ್ಯವಿದೆ.

ಆದುದರಿಂದ ಆ ಬಗೆಗೆ ಸಂಕ್ಷಿಪ್ತವಾಗಿ ಅರಿವುಳ್ಳವರಾಗಿರುವುದು ಒಳಿತೆಂದು ಇಲ್ಲಿ ಚರ್ಚಿಸಲಾಗಿದೆ.

**"ಕೋಪ"** ವಿನಾಶಕಾರಿ ಎಂದಾಕ್ಷಣ ಅದು ಪೂರ್ಣ ಪ್ರಮಾಣದಲ್ಲಿ ಇರಲೇ ಬಾರದೆಂಬ ಅರ್ಥವಲ್ಲ, ಕೋಪದ ತೀಕ್ಷ್ಣತೆ ತೀವ್ರತೆಯ ಬಗೆಗೆ ಅರಿವುಳ್ಳವರಾಗಿ ಬಳಸುವುದು ಅವಶ್ಯವಿದೆ.

ಹದವರಿತು ಕೋಪದ ಬಳಕೆ ಇದ್ದರೇ ಅಡ್ಡಿಯಿರುವುದಿಲ್ಲ.

ದೂರ್ವಾಸ ಮುನಿಯಾದೊಡೆ ವಿನಾಶಕಾರಿಯಲ್ಲವೆಎಂಬಂತೆ ತಾವು ಕೆಡುವುದಲ್ಲದೆ ಅನ್ಯರಿಗೂ ಕೇಡು ಉಂಟಾಗುತ್ತದೆ ವಿಶೇಷವಾಗಿ ಮಕ್ಕಳು ಬಲಿಪಶುವಾಗುತ್ತಾರೆ.

ಮಕ್ಕಳಲ್ಲಿ ಬೌದ್ಧಿಕ ಪ್ರಬುದ್ಧತೆ ಹಾಗೂ ಕೌಶಲ್ಯಪೂರ್ಣ ಚಟುವಟಿಕೆಗಳು ಪ್ರಬುದ್ಧತೆಗೆ ಬರುತ್ತಿದ್ದಂತೆಯೇ ಕೋಪ-ತಾಪಗಳ ಭಾವಗಳು ಉದ್ದೀಪನಗೊಳ್ಳಲು ಪ್ರಾರಂಭವಾಗುತ್ತವೆ.

ಕೋಪವು ಕೇವಲ ಮಗುವಿಗೆ ಉಂಟಾದ ಅಡ್ಡಿ ಆತಂಕಗಳಿಂದ ಮಾತ್ರ ಉಂಟಾಗುವುದಿಲ್ಲ. ಆತನ ಆಟ-ಪಾಠಗಳಿಗೆ ಸ್ವಾಭೀಮಾನ ಪೂರ್ವಕ ಚಿಂತನೆಗೆ ಆಲೋಚನೆಗಳಿಗೆ, ಆಸೆಯ - ಆಕಾಂಕ್ಷೆಗಳಿಗೆ ದಕ್ಕೆ ಬಂದಾಗಲೂ ಕೋಪ ಉಂಟಾಗುತ್ತದೆ.

ಕೇವಲ ಮಕ್ಕಳ ಭೌತಿಕ ಬೇಕು-ಬೇಡಿಕೆಗಳನ್ನು ಈಡೇರಿಸುತ್ತಿದ್ದು ಅವರ ಶಾಲೆಯ ಬೇಕು-ಬೇಡಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಈಡೇರಿಸದೇ ಇದ್ದಾಗ, ತಮ್ಮ ಅಸಮಾಧಾನಗಳಿಗೆ ಕಾರಣವೇನೆಂದು ತಿಳಿಸುವ ಅವಕಾಶ ಕಲ್ಪಿಸದೇ ಇದ್ದಾಗ ಮತ್ತು ತಾಳ್ಮೆಯಿಂದ ಕೇಳಲು ಸಿದ್ಧರಿಲ್ಲದ ಮನೆ ಮತ್ತು ಶಾಲೆ ವಾತಾವರಣದಿಂದಲೂ ಮಕ್ಕಳಿಗೆ ಕೋಪ ಉಂಟಾಗುತ್ತದೆ.

ಮಗುವಿಗೆ ಕೋಪ ಬಂದಿರುವುದೇ? ಇಲ್ಲವೇ ಹತಾಶ್ಯಗೊಂಡಿರುವರೇ? ಎಂದು ತಿಳಿಯುವುದು ಕಷ್ಟವಾದುದರಿಂದ ಭಾವೋದ್ವೇಗದ ತಳಹದಿಯಲ್ಲಿ ಮಕ್ಕಳನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು.

ಅದಕ್ಕೆ ಮುನ್ನ ಪ್ರತಿಯೊಬ್ಬರು ತಮ್ಮ ತಮ್ಮ ಭಾವೋದ್ವೇಗಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು. ಆನಂತರ ಅದರ ಬೆಳಕಿನಲ್ಲಿ ಮಕ್ಕಳ ಭಾವೋದ್ವೇಗ ಭಾವನೆಗಳು ಏನೆಂದು ಅರಿಯುವುದು ಸಮಂಜಸವೆನಿಸುತ್ತದೆ.

ಇಲ್ಲಿ ಗಮನಿಸತಕ್ಕ ಅನುಭವಿ, ಅಂಶವೆಂದರೆ, ಮಕ್ಕಳ ಯಾವುದೇ ಭಾವನೆಗಳನ್ನೂ ಉದ್ವೇಗಗಳನ್ನೂ ತಮ್ಮ ಭಾವೋದ್ವೇಗ ಭಾವನೆಗಳಿಗೆ ತುಲನೆಮಾಡಿಕೊಂಡು ನೋಡಿ ತೀರ್ಮಾನಕ್ಕೆ ಬರಬಾರದೆಂಬುದು. ಅಂದರೇ, ಮಕ್ಕಳ ಭಾವೋದ್ವೇಗ ಭಾವನೆಗಳನ್ನು ತಮ್ಮ ವಯಸ್ಸಿನ ಭಾವೋದ್ವೇಗ ಉತ್ಕೃಷ್ಟತೆಗಳಿಗೆ ಹೋಲಿಸಿ ನೋಡದೇ, ಮಕ್ಕಳ ವಯೋಮಿತಿಯ ಮಟ್ಟಕ್ಕೆ ಇಳಿದು ಆಲೋಚಿಸಬೇಕು ಎಂಬುದು ಗಮನಿಸತಕ್ಕ ಅಂಶ.

ಮಕ್ಕಳು ಬೆಳೆದಂತೆಲ್ಲಾ ಅವರ ಭೌತಿಕ-ಬೌದ್ಧಿಕ ಇಚ್ಛೆಗಳು ವೃದ್ಧಿಸುತ್ತವೆ. ಇಚ್ಛೆಗಳಿಗೆ ತಕ್ಕ ಚಟುವಟಿಕೆಗಳೂ ವೃದ್ಧಿಸತೊಡಗುತ್ತವೆ. ಅದಕ್ಕೆ ತಕ್ಕ ಭಾವನೆಗಳು ಕೂಡಾ ವೃದ್ಧಿಸುತ್ತವೆ.

ಪ್ರತಿ ಮಗುವಿನ ಕಲಿಕಾ ಸಾಮರ್ಥ್ಯ, ಮುನ್ನುಗ್ಗುವ ಸಾಹಸ ಪ್ರವೃತ್ತಿ, ಸಹಜ ಸಾಮರ್ಥ್ಯ, ಕೌಶಲ್ಯಗಳನ್ನು ಪ್ರದರ್ಶಿಸಿ ತನ್ನನ್ನು ಗುರುತಿಸಿಕೊಳ್ಳಬೇಕೆಂಬ ಅಂಶಗಳು ಜಾಗೃತಗೊಳ್ಳುತ್ತವೆ. ಇವೆಲ್ಲವೂ ಆತನ ಭಾವನೆಗಳ ಪ್ರಭಾವವನ್ನು ಆಧರಿಸಿರುತ್ತವೆ. ಅವರಲ್ಲಿ ಹುದುಗಿರುವ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಅಭಿವ್ಯಕ್ತಪಡಿಸಲು ಅವಕಾಶಗಳು ಒದಗಿಬಂದಾಗ ಭಾವನೆಗಳ ಅಭವ್ಯಕ್ತಿಯಿಂದ ಹೆಚ್ಚು ಸಮಾಧಾನ ಸಂತೃಪ್ತಿ ಉಂಟಾಗತ್ತದೆ.

ಆದರೆ, ಶಾಲೆ ಮತ್ತು ಮನೆ ಎರಡೂ ಪರಿಸರದಲ್ಲಿಯೂ ಅವರಿಗೆ ಈ ಅವಕಾಶ ದೊರಕದೇ ಇದ್ದಾಗ, ಅವರನ್ನು ಗುರುತಿಸದೇ ಕಡೆಗಣಿಸಿದಾಗ ಒಂದೇ ವಾತಾವರಣದಲ್ಲಿ ಪದೇಪದೇ ತೊಡಗಿಸಿದಾಗ ಮತ್ತು ಅವರ ಸಾಮರ್ಥ್ಯಮೀರಿದ ಚಟುವಟಿಕೆಗಳಿಗೆ ತೊಡಗಿಸಿದಾಗ ವಹಿಸಿದಾಗ ಮಕ್ಕಳಲ್ಲಿ ಬೇಸರಿಕೆ, ತಾತ್ಸಾರ, ಉದಾಸೀನತೆ ಉಂಟಾಗುತ್ತವೆ. ತನ್ಮೂಲಕ ಕೋಪ-ತಾಪಗಳೂ ಉದ್ದೀಪಗೊಳ್ಳತ್ತವೆ.

ಮನೋವಿಜ್ಞಾನಿಗಳ ಸಂಶೋಧನೆಯಿಂದ ಮಕ್ಕಳಲ್ಲಿ ಕೋಪವು ಉದ್ದೀಪನಗೊಳ್ಳುವ ಇನ್ನಿತರ ಅಂಶಗಳು ತಿಳಿದು ಬಂದಿವೆ. ಅವೆಂದರೆ :

(1) ತನಗಿಂತ ಹೆಚ್ಚು ವಯಸ್ಸಿನ ಮಕ್ಕಳಿರುವ ಮನೆಯಲ್ಲಿ ಬೆಳೆದಿರುವ ಮಕ್ಕಳು ಬೇಗ ಕೋಪಕ್ಕೆ ಒಳಗಾಗುತ್ತಾರೆ.

(2) ಮಗುವಿನ ಶಕ್ತಿ-ಸಾಮರ್ಥ್ಯಗಳನ್ನು ಕಡಿಮೆ ಮಾಡುವಂತಹ ಸಮಸ್ಯೆಗಳು ಹೆಚ್ಚಿರುವ ಮನೆಯ ಮಕ್ಕಳಲ್ಲಿ ಕೋಪ ಕಡಿಮೆ ಪ್ರದರ್ಶನವಾಗುತ್ತದೆ.

(3) ಹಸಿವಿನ ಬಾಧೆ ಹೆಚ್ಚಾಗಿದ್ದಾಗ, ತೀವ್ರ ತರವಾದ ಭೌತಿಕ, ಭೌದ್ಧಿಕ ಕಿರುಕುಳಕ್ಕೆ ಒಳಗಾಗಿರುವ ಮಕ್ಕಳಲ್ಲಿ ಕೋಪ ಹೆಚ್ಚು ವೃದ್ಧಿಯಾಗಿರುತ್ತದೆ.

(4) ಕಲಿಕಾಶಕ್ತಿ, ಕಲಿಕಾ ಸಾಮರ್ಥ್ಯ ಆಧರಿಸಿ ಚಟುವಟಿಕೆಗಳನ್ನು ನೀಡದ ಸಂದರ್ಭಗಳಲ್ಲಿಯೂ ಸಹಜವಾಗಿ ನಿರಾಸಕ್ತಿಯಿಂದ ಕೋಪ ಉಂಟಾಗುತ್ತದೆ.

(5) ಮಕ್ಕಳಿಗೆ ತಪ್ಪಿನ ಅರಿವು ಇಲ್ಲದಾಗ ನಿಂದಿಸುವುದು, ದಂಡಿಸುವುದರಿಂದ ಕುಪಿತರಾಗುತ್ತಾರೆ. ಇದು ಅತಿಯಾದಾಗ ಪ್ರತಿಭಟಿಸುವ ಹಂತಕ್ಕೂ ಪ್ರೇರಿತರಾಗುತ್ತಾರೆ.

ಶೈಕ್ಷಣಿಕ ಚಟುವಟಿಕೆಗಳ ಪ್ರಮುಖ ಅಂಶಗಳಲ್ಲಿ ಭಾವ್ರೋತ್ಕರ್ಷತೆಯು ಒಂದು ಮುಖ್ಯಾಂಶವಾಗಿರುತ್ತದೆ. ಆರೋಗ್ಯಕರ ಭಾವ್ರೋದ್ವೇಗ ಬೆಳವಣಿಗೆ ಮಾಡುವ ಮೂಲಕ ಭಾವ್ರೋತ್ಕರ್ಷತೆಯನ್ನು ಉಂಟುಮಾಡಬಹುದು.

ಭಾವ್ರೋದ್ವೇಗಳ ಪರಿಪಕ್ವತೆಯು ಜೀವನದ ಯಾವುದೇ ಒಂದು ಹಂತದವರೆಗೆ ನಡೆದು ಸ್ಥಗಿತಗೊಳ್ಳುವುದಿಲ್ಲ. ಜೀವನದುದ್ದಕ್ಕೂ ನಡೆಯಲಿರುವ ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಉತ್ತಮವಾದ ಶೈಕ್ಷಣಿಕ ಕಾರ್ಯಕ್ರಮಗಳು ಮಗುವು ತನ್ನ ಭಾವ್ರೋದ್ವೇಗಗಳ ಪರಿಪಕ್ವತೆ ಗಳಿಸುವಲ್ಲಿ ತುಂಬಾ ಸಹಕಾರಿಯಾಗಿರುತ್ತವೆ.

ಭಾವ್ರೋದ್ವೇಗಳಲ್ಲಿ ಪರಿಪಕ್ವತೆ ಗಳಿಸುವುದು ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಅತ್ಯಂತ ಅವಶ್ಯಕವಾದುದಾಗಿದೆ.

ಭಾವ್ರೋದ್ವೇಗಗಳಲ್ಲಿ ಪರಿಪಕ್ವತೆ ಮತ್ತು ಹತೋಟಿವುಳ್ಳ ವ್ಯಕ್ತಿಯು ಈ ಕೆಳಕಂಡ ಗುಣಲಕ್ಷ್ಮಣಗಳನ್ನುಹೊಂದಿರುತ್ತಾನೆಂದು ಮನೋವಿಜ್ಞಾನಿಗಳಿಂದ ತಿಳಿದುಬರುತ್ತದೆ.

(1) ತನ್ನ ಭಾವನೆಗಳಲ್ಲಿ ಹತೋಟಿ ಹೊಂದಿರುತ್ತಾನೆ.

(2) ಮೌನಿಯಾಗಿರುತ್ತಾನೆ ಮತ್ತು ಮೌನಾವಸ್ಥೆಯನ್ನು ಹೆಚ್ಚು ಬಯಸುತ್ತಾನೆ.

(3) ಅಸೌಖ್ಯ ಉಂಟಾದರೂ ತನ್ನ ತತ್ವಾದರ್ಶಗಳಿಗೆ ಬದ್ಧನಾಗಿರಲು ಪ್ರಯತ್ನಿಸುತ್ತಾನೆ.

(4) ಆತನ ಮನಃಸ್ಥಿತಿ ಚಾಂಚಲ್ಯತೆಗೆ ಅಥವಾ ತೂಗುಯ್ಯಾಲೆಗೆ ಒಳಪಡುವುದಿಲ್ಲ.

(5) ಚಂಚಲ ಮನಸ್ಸು, ಮತ್ತು ಲಘು ಭಾವನೆಗಳನ್ನು ಹೊಂದಿರುವುದಿಲ್ಲ.

(6) ತನ್ನ ಸಂವೇಗಾತ್ಮಕ ಭಾವನೆಗಳನ್ನು ನಯ ವಿನಯ ಸಭ್ಯತೆಯಿಂದ ಮಿತ ವರ್ತನೆಯಿಂದ ನಿಯಮಬದ್ಧವಾಗಿ ಅಭಿವ್ಯಕ್ತಪಡಿಸುತ್ತಾನೆ.

(7) ತನ್ನ ಭಾವ್ರೋದ್ವೇಗಗಳ ಪ್ರವಾಹಕ್ಕೆ ಸಿಲುಕಿ ಸೆಳೆದೊಯ್ಯಲ್ಪಡುವುದಿಲ್ಲ.

(8) ವಿಫಲತೆ, ಆಶಾಭಂಗ ಉಂಟಾದರೂ ಕೂಡಾ ತಾಳ್ಮೆ,ಸಹನೆಯನ್ನು ಹೊಂದಿರುತ್ತಾನೆ.

(9) ತನ್ನ ಆತಂರಿಕ-ಬಾಹ್ಯ ಚಟುವಟಿಕೆಗಳಲ್ಲಿ ಉತ್ತಮವಾದ ಆರೋಗ್ಯಕರ ಪ್ರಗತಿಯನ್ನು ತನ್ನ ಬೆಳವಣಿಗೆಯಲ್ಲಿ ಅಭಿವ್ಯಕ್ತಿಪಡಿಸುತ್ತಾನೆ.

ಈ ಮೇಲ್ಕಂಡ ಅಂಶವನ್ನು ಗಮನದಲ್ಲಿರಿಸಿಕೊಂಡು ಹಲವು ಹಂತಗಳಲ್ಲಿ ಶಾಲಾ ಶಿಕ್ಷಣ ಮುಗಿಸಿ ಸಂಕೀರ್ಣ ಸಮಾಜಕ್ಕೆ ಅಡಿಯಿಡುವ ಮಕ್ಕಳು ತಮ್ಮ ವಿದ್ವತ್ತಿನ ಪರಿಣತಿ ಜೊತೆಗೆ ತಮ್ಮ ಭಾವ್ರೋದ್ವೇಗದಲ್ಲಿ ಪರಿಪಕ್ವತೆ ಹೊಂದಿ, ಸಾಕಾರಗೊಂಡು ಹೊರಬರುವಂತೆ ಆದ್ಯ ಗಮನಹರಿಸುವುದು ಅತ್ಯಗತ್ಯವಿದೆ.

**ಕೋಪವುಳ್ಳವ ಎಂತಹ ಕುರೂಪಿ! ಆತನು ಸುಖಿಯಾಗಿ ಮಲಗಲಾರ, ಅಪಾರ ಐಶ್ವರ್ಯವಂತನಾಗಿದ್ದರೂ ಸಹಾ ಆತ ಸದಾ ಬಡವನೇ, ಕೋಪದಿಂದ ತುಂಬಿದವನಾಗಿ ಆತನು ತನ್ನ ಕ್ರಿಯೆ ಮತ್ತು ಮಾತುಗಳಿಂದ ಹಿಂಸಿಸಿಕೊಳ್ಳುತ್ತಿರುತ್ತಾನೆ.**

ನಿನ್ನ ಕೋಪವನ್ನು ಕೊಲ್ಲು ಮತ್ತು ಸುಖಿಯಾಗಿರು. ನಿನ್ನ ಕೋಪವನ್ನು ಕೊಲ್ಲು ಮತ್ತು ನೀನು ದುಃಖಿಸಲಾರೆ. ಕೋಪವನ್ನು ಎಲ್ಲಾ ರೀತಿಯಲ್ಲಿ ಕೊಂದು ಅದರ ವಿಷಭರಿತ ಬೇರುಗಳನ್ನು ಮತ್ತು

ಸಿಹಿ ಮುಳ್ಳುಗಳನ್ನು ಕಿತ್ತು ಎಸೆಯಿರಿ, ಕಡಿದುಹಾಕಿ. ಅಂತಹುದಕ್ಕೆ ಉದಾತ್ತರು ಪ್ರಶಂಸಿಸುತ್ತಾರೆ. ಕೋಪವನ್ನು ಕೊಂದವನು ಮುಂದೆ ಅಳಲಾರ.

ಕೋಪಗೊಂಡ ಮನುಷ್ಯ ಶತೃವಿಗೆ ಈ ರೀತಿ ಕೆಡಕನ್ನು ಇಚ್ಛಿಸುತ್ತಾನೆ. ಆತ ಕುರೂಪನಾಗಲಿ, ದುಃಖಿತನಾಗಲಿ, ಉನ್ನತಿ ತಾಳದಿರಲಿ, ಬಡವನಾಗಲಿ, ಕೀರ್ತಿ ಇಲ್ಲದಿರಲಿ, ಮಿತ್ರರು ಇಲ್ಲದಿರಲಿ, ದುರ್ಗತಿಗೆ ಹೋಗಲಿ. ಆದರೆ ಆ ರೀತಿಯ ಇಚ್ಛೆಯ ಪರಿಣಾಮದಿಂದ ಆತನೇ ಮುಂದೆ ಕುರೂಪಿಯಾಗುತ್ತಾನೆ, ದುಃಖಿತನಾಗುತ್ತಾನೆ, ಅವನತಿ ತಾಳುತ್ತಾನೆ, ಬಡವನಾಗುತ್ತಾನೆ. ಕೀರ್ತಿರಹಿತ ನಾಗುತ್ತಾನೆ, ಮಿತ್ರರನ್ನು ಕಳೆದುಕೊಳ್ಳುತ್ತಾನೆ ಮತ್ತು ದುರ್ಗತಿಗೆ ಹೋಗುತ್ತಾನೆ.

ಹೀಗೆ ನಿಮಗೆ ನೀವು ಶಿಕ್ಷಣ ನೀಡಿಕೊಳ್ಳಿ. ನಾವು ಆಕಾಶದಂತೆ ಶತ್ರುತ್ವಭಾವವಿಲ್ಲದೆ, ಕೋಪವಿಲ್ಲದೆ, ಮೈತ್ರಿಯಿಂದ ಇಡೀ ಜಗತ್ತನ್ನು ವಿಶಾಲಾವಂತವಾಗಿ, ಅಳತೆಗೆ ಮೀರಿ ಹಬ್ಬಿಸುತ್ತೇವೆ.

ಕೋಪ ಮೂರ್ಖತೆಯಲ್ಲಿ ಹುಟ್ಟುತ್ತದೆ. ಪಶ್ಚಾತ್ತಾಪದಲ್ಲಿ ಕೊಲೆಗೊಳ್ಳುತ್ತದೆ. ಕೋಪ ಎಂಬುದು ಸ್ವಲ್ಪಕಾಲ ಇರುವ ಹುಚ್ಚು. ಆದರೆ ಅದರ ಪರಿಣಾಮ ತುಂಬಾ ಕೆಟ್ಟದ್ದು.

## 3. ಅಸೂಯೆ (ಮಾತ್ಸರ್ಯ, ಈರ್ಷೆ) (Envious)

ಡಾ॥ಶೀಲ : " ಅಸೂಯೆ " ಎಂದರೇನು ?

ಡಾ॥ರಾಮು: ಹೊಟ್ಟೆಕಿಚ್ಚು, ಅಸೂಯೆ ಎಂಬ ಹೆಸರನ್ನುಳ್ಳ ಒಂದು ಸಂಕೀರ್ಣ ಮನೋಧರ್ಮ (ಜೆಲಸಿ).

ಹುಟ್ಟಿದ ಮಗುವಿನಲ್ಲಿ ಅನೇಕ ತಿಂಗಳವರೆಗೆ ಇದು ಕಾಣಿಸಿಕೊಳ್ಳುವುದಿಲ್ಲ.

ಆಗಿನ ಅದರ ಭಾವಸ್ಥಿತಿ ಎಂದರೆ ಶಾರೀರಿಕ ಉದ್ರೇಕ ಮಾತ್ರ. ಕ್ರಮೇಣ ಅದರಿಂದ ಸಂಕಟ ಮತ್ತು ಆನಂದ ಎಂಬೆರಡು ಭಾವಗಳು ಸುಮಾರು ಮೂರು ತಿಂಗಳು ಹೊತ್ತಿಗೆ ಕವಲೊಡೆದುಕೊಳ್ಳುತ್ತದೆ.

ಅನೇಕ ಮನೋವಿಜ್ಞಾನಿಗಳ ಸಂಶೋಧನೆಗಳ ಪ್ರಕಾರ ಈರ್ಷೆ ಮೂಲ ಸಂಕಟಭಾವದಿಂದ ಬೇರ್ಪಟ್ಟು ಸ್ವತಂತ್ರವಾಗುವ ಒಂದು ಅಸಂತುಷ್ಟಭಾವ.

ಈರ್ಷೆ ಯಾವಾಗಲೂ ಸಾಮಾಜಿಕ ಸನ್ನಿವೇಶವನ್ನು ಅವಲಂಬಿಸಿದ್ದು. ಅಂದರೆ ಹೊಟ್ಟೆಕಿಚ್ಚು ಯಾವಾಗಲೂ ಇನ್ನೊಬ್ಬರ ಬಗ್ಗೆ ಹುಟ್ಟುವ ಭಾವ.

ಆದ್ದರಿಂದ ಸಾಮಾಜಿಕ ಸನ್ನಿವೇಶಗಳು ಗೊತ್ತಾಗುವವರೆಗೆ. ಅವರ ಆಸೆ, ಭದ್ರತೆಗಳಿಗೆ ಧಕ್ಕೆ ಉಂಟಾಗುವುದು ಅವರಿಗೆ ಗೊತ್ತಾಗುವವರಿಗೆ, ಮಕ್ಕಳಲ್ಲಿ ಹೊಟ್ಟೆಕಿಚ್ಚು ಕಂಡುಬರುವುದಿಲ್ಲ.

ಹೊಟ್ಟೆಕಿಚ್ಚಿನಲ್ಲಿ ಕೋಪ, ಭಯ ಮತ್ತು ಪ್ರೀತಿಯ ಅಂಶಗಳು ಸೇರಿಕೊಂಡಿರಬಹುದು ಎಂಬುದು ಹಲವು ಮನೋವಿಜ್ಞಾನಿಗಳ ಅಭಿಮತ.

ಎಲ್ಲ ವಯಸ್ಸಿನಲ್ಲೂ ಹೊಟ್ಟೆಕಿಚ್ಚಿನ ಮೂಲ ಅಭದ್ರತೆ; ತನಗೆ ಬೇಕಾದ್ದು ಸಿಗಲಾರದೆಂಬ ಅಳುಕು.

ಯಾರ ಬಗ್ಗೆ ಹೊಟ್ಟೆ ಉರಿಯುತ್ತದೋ ಅವರ ಬಗ್ಗೆ ಕೋಪ, ಭಯ, ನಮ್ಮಲ್ಲಿಲ್ಲದ್ದೇನೋ ಅವರಲ್ಲಿ ಇರುವುದರಿಂದ ಒಂದು ಬಗೆಯ ಹೊಗಳುವ ಮನೋಧರ್ಮ – ಇವೆಲ್ಲ ಈ ಭಾವದಲ್ಲಿ ಬೆರೆತುಕೊಂಡಿರುತ್ತವೆ.

ಬಾಲ್ಯದ ಪ್ರಾರಂಭದ ವರ್ಷಗಳಲ್ಲಿ ಹೊಟ್ಟೆಕಿಚ್ಚು ಹೆಚ್ಚು ಸಾಮಾನ್ಯ; ಮಕ್ಕಳು ಹೆಚ್ಚು ದೊಡ್ಡವರಾಗಿ ಇತರರೊಡನೆ ಬೆರೆಯತೊಡಗಿದಾಗ ಇದು ಸ್ವಲ್ಪ ಕಡಿಮೆ.

ಕಿಶೋರಾವಸ್ಥೆಯ ಕೊನೆಯಲ್ಲಿ ಮತ್ತಿದು ಜಾಸ್ತಿಯಾಗುತ್ತದೆ.

ಚಿಕ್ಕವಯಸ್ಸಿನಲ್ಲಿ ಹೊಟ್ಟೆಕಿಚ್ಚಿನ ಮೂಲಕಾರಣ ಮಗುವಿಗೆ ತಾನು ತಾಯಿಯ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಳ್ಳುತ್ತಿದ್ದೇನೆಂಬ ಭಯ.

ಅದಕ್ಕೊಂದು ತಮ್ಮನೋ ತಂಗಿಯೋ ಹುಟ್ಟಿದಾಗ ಈ ಹೊಟ್ಟೆಕಿಚ್ಚು ಚೆನ್ನಾಗಿ ವ್ಯಕ್ತವಾಗುತ್ತದೆ.

ತಮ್ಮ ತಂಗಿಯರ ಆಗಮನ, ಮಗುವಿನ ದೃಷ್ಟಿಯಲ್ಲಿ, ತಾನು ಮುಖ್ಯವಾಗಿ ತಾಯಿಯ ಪ್ರೀತಿಯಿಂದ ವಂಚಿತವಾಗುವ ಸನ್ನಿವೇಶ.

ಹೀಗೆ, ಹೊಟ್ಟೆಕಿಚ್ಚು ಮೂಲಭೂತವಾಗಿ ಮಗು ಪ್ರೀತಿ ವಿಶ್ವಾಸಗಳಿಂದ ವಂಚಿತವಾದಾಗ ಅಥವಾ ಹಾಗೆ ಅನ್ನಿಸಿದಾಗ ಅದು ತೋರಿಸುವ ಪ್ರತಿಕ್ರಿಯೆ.

ವಾಸ್ತವವಾಗಿಯೂ ತಾಯಿಗೆ ಹೊಸದೊಂದು ಮಗು ಹುಟ್ಟಿದಾಗ ಮೊದಲಿನ ಮಗುವಿಗೆ ಹಿಂದಿನಂತೆಯೇ ಗಮನಕೊಡುವುದು ಸಾಧ್ಯವಾಗುವುದಿಲ್ಲ.

ಆಕೆ ಹೊಸ ಮಗುವಿಗೆ ಹೆಚ್ಚು ಆರೈಕೆ ಮಾಡಬೇಕಾಗುತ್ತದೆ.

ಇದುವರೆಗೆ ಅಮ್ಮನ ಪ್ರೀತಿಗೆ ಪೂರ್ತಿ ಪಾತ್ರವಾಗಿದ್ದ ಮಗುವಿಗೆ ಇದ್ದಕ್ಕಿದ್ದಂತೆ ತಾಯಿ ಈ ಹೊಸ ಮಗುವನ್ನು ಎತ್ತಿ ಮುದ್ದಾಡುವುದು, ಮೊಲೆಯೂಡಿಸುವುದು ಹೊಟ್ಟೆಕಿಚ್ಚು ಬರಿಸುತ್ತದೆ.

ಹೊಟ್ಟೆಕಿಚ್ಚಿನ ಮೂಲ ಬಹುಶಃ ಇದ್ದರಬಹುದೆಂಬ ಅಭಿಪ್ರಾಯವನ್ನು ಕೆಲವು ಮನೋವಿಜ್ಞಾನಿಗಳು ವ್ಯಕ್ತಪಡಿಸುತ್ತಾರೆ.

ಹೊಟ್ಟೆಕಿಚ್ಚಿನಿಂದ ತಪ್ತವಾದ ಮಗು ಈ ಎರಡರಲ್ಲಿ ಒಂದು ಪ್ರತಿಕ್ರಿಯೆಯನ್ನು ತೋರಿಸಬಹುದು

1. ಯಾರ ಬಗ್ಗೆ ಮಗುವಿಗೆ ಹೊಟ್ಟೆಕಿಚ್ಚು ಉಂಟಾಗುತ್ತದೋ ಅವರ ಮೇಲೆ ಎಗರಿಬೀಳಬಹುದು;

2. ಇನ್ನೂ ಚಿಕ್ಕ ವಯಸ್ಸಿನ ಅವಸ್ಥೆಗೆ ಹಿನ್ನಡೆಯಬಹುದು. ಮೊದಲನೆಯ ವಿಧಾನದಿಂದ ಮಗು ತನ್ನ ಕೋಪವನ್ನು ತೀರಿಸಿಕೊಂಡರೆ ಎರಡನೆಯ ವಿಧಾನದಿಂದ ಅದು ತಾನು ಇನ್ನೂ ತುಂಬಾ ಚಿಕ್ಕವನೆಂದು ತೋರಿಸುವುದರ ಮೂಲಕ ತಾಯ್ತಂದೆಯರ ಗಮನವನ್ನು ಸೆಳೆಯಬಹುದು.

ಈ ಎರಡನೆಯ ಬಗೆಯ ಪ್ರತಿಕ್ರಿಯೆಯನ್ನು ತೋರಿಸುವ ಮಗು ಸಾಕಷ್ಟು ದೊಡ್ಡದಾಗಿದ್ದರೂ ಮುದ್ದು ಭಾಷೆಯಲ್ಲಿ ಮಾತನಾಡಲು, ಹಾಸಿಗೆಯಲ್ಲಿ ಮೂತ್ರವಿಸರ್ಜನೆ ಮಾಡಲು, ಹಟಮಾಡಲು ಮೊದಲು ಮಾಡಬಹುದು.

ದೊಡ್ಡವರಲ್ಲಿ ಹೊಟ್ಟೆಕಿಚ್ಚಿನ ಮೂಲಕಾರಣ ಬೇರೆಯವರ ಶ್ರೀಮಂತಿಕೆ, ಘನತೆ, ಹಿರಿಮೆಗಳು ಮತ್ತು ಇತರ ಶಕ್ತಿಸಾಮರ್ಥ್ಯಗಳು.

ಸೊಸೆಯ ಸುಖದ ನಲಿದಾಟಗಳನ್ನು ಕಂಡು ಅತ್ತೆಗೆ, ಅತ್ತೆಯ ಅಧಿಕಾರವನ್ನು ಕಂಡು ಸೊಸೆಗೆ, ಓರಗಿತ್ತಿಯರ ಉತ್ಕರ್ಷವನ್ನು ಕಂಡು ಹೆಂಗಸಿಗೆ, ನೆಂಟರಿಷ್ಟರ ಅಭಿವೃದ್ಧಿಯನ್ನು ಕಂಡು ಗಂಡಸಿಗೆ ಈರ್ಷೆಯುಂಟಾಗುವುದು ಸಾಮಾನ್ಯ.

ಈರ್ಷೆಯಿಂದ ಪ್ರತೀಕಾರ ಬುದ್ಧಿ ಬೆಳೆಯುತ್ತದೆ. ಅವರ ಸುಖ ತನಗೆ ಸಿಕ್ಕರಂತೂ ಪರಮಸಂತೋಷ. ಅದಿಲ್ಲದಲ್ಲಿ ಅವರ ಸುಖ ಕಡಿಮೆಯಾದರೆ ಅಷ್ಟೇ ಸಾಕು ಎಂಬ ಭಾವ ಈರ್ಷಾವಂತರಲ್ಲಿ ಬೆಳೆಯುತ್ತದೆ.

ಸಾಹಿತ್ಯದ ಉತ್ಕೃಷ್ಟ ಮಾದರಿಗಳಿಗೆಲ್ಲ ಈ ಭಾವನೆ ಒಂದಲ್ಲ ಒಂದು ರೀತಿಯಲ್ಲಿ ಮೂಲವಸ್ತುವನ್ನೊದಗಿಸಿದೆ.

ಎಲ್ಲ ವಯಸ್ಸಿನಲ್ಲೂ ಹೊಟ್ಟೆಕಿಚ್ಚು ಅನಪೇಕ್ಷಣೀಯ ಭಾವ. ಬಾಲ್ಯದಲ್ಲಿ ಅತಿಯಾದ ಹೊಟ್ಟೆಕಿಚ್ಚನ್ನು ಅನುಭವಿಸುವ ಮಕ್ಕಳ ಮಾನಸಿಕ ಬೆಳವಣಿಗೆ ಕುಂಠಿತವಾಗಬಹುದು.

ದೊಡ್ಡವರಲ್ಲಿ ಇದು ಮಾನಸಿಕ ಅನಾರೋಗ್ಯದ, ಅಂಜಿಕೆಯ, ಅಪ್ರಬುದ್ಧತೆಯ ಸೂಚನೆಯಾಗಬಹುದು.

ಅಸೂಯೆ ಎಂಬುದು ಭಯ - ಕ್ರೋಧಗಳಂತೆ ಒಂದು ಹುಟ್ಟು ಗುಣವಲ್ಲ.

ಬೆಳವಣಿಗೆಯ ಹಂತದಲ್ಲಿ ರೂಢಿಸಿಕೊಂಡ ಒಂದು ಗುಣಸ್ವಭಾವವಷ್ಟೆ, ಆದಾಗ್ಯೂ ಇದರ ತೀವ್ರತೆ, ತೀಕ್ಷ್ಣತೆ ತುಂಬಾ ಅಪಾಯಕಾರಿ.

ಅಸೂಯೆ ಹಲವು ಮಾದರಿಯಲ್ಲಿ ವ್ಯಕ್ತಕೊಳ್ಳುತ್ತದೆ. ದ್ವೇಷ, ಅಪಾಯಕಾರಿ ಯಾದರೂ ಆದನ್ನು ಬಹಶ: ಎದು ರಿಸಬಹುದು.

ಆದರೆ ಅಸೂಯೆ ಎಂಬ ಪರಮ ವೈರಿ ಪ್ರೀತಿ, ಪ್ರೇಮ ಬಾಂಧವ್ಯಗಳ ತೆರೆಮರೆಯಲ್ಲಿಯೇ ಅಡಗಿದ್ದು, ಹೊಂಚು ಹಾಕಿ ಬಲಿತೆಗೆದು ಕೊಳ್ಳಲು ಹವಣಿ ಸುತ್ತದೆ.

ಕೌರವರ ಹಿತೈಷಿಯಾಗಿಯೇ ನಟಿಸಿ ಕೊನೆಗೆ ಕೌರವವಂಶವನ್ನೇ ಬಲಿತೆಗೆದು ಕೊಂಡ ಶಕುನಿಯಂತವರು ನಮ್ಮ ಸುತ್ತಮುತ್ತ, ನೆರೆಹೊರೆಯಲ್ಲಿ ಮತ್ತು ಸಮಾಜ ದಲ್ಲಿ ತುಂಬಾ ಇದ್ದಾರೆ.

ಅದನ್ನು ವಿವೇಚನಾ ಪರನಾಗಿ ಅರಿಯುವ ಅರಿವು ಮತ್ತು ತಾಳ್ಮೆಬೇಕಷ್ಟೇ. ಇಂಥವುಗಳು ಯಾವುದೇ ಸಂದರ್ಭದಲ್ಲಿಯೂ ಮೇಲ್ನೋಟದಲ್ಲಿ ಅಭಿವ್ಯಕ್ತವಾಗ ಲಾರವು.

ಒಮ್ಮೊಮ್ಮೆ ಪ್ರಜ್ಞಾಪೂರ್ವಕವಾಗಿಯೇ ಅಸೂಯೆ ಪ್ರಕಟವಾಗುತ್ತದೆ.

ನನ್ನಲ್ಲಿ ಇಲ್ಲದ್ದು ಅವನಲ್ಲಿ ಏನಿದೆ ? ಅವನು ದಡ್ಡ: ನಾನು ಜಾಣ ಮತ್ತು ಬುದ್ಧಿವಂತ, ಆದರೂ ಆತನಿಗೆ ಯಶಸ್ಸು ಹೆಚ್ಚು ಏಕೆ ?

ನಾನು ಹಿರಿಯ, ಆತ ಕಿರಿಯ, ಆದರೂ ನನಗಿಂತ ಮುಂದೆ, ನನಗಿಂತ ಪ್ರಗತಿ ಏಕೆ ? ಹೇಗೆ ? ಅವನು ಬಡವ: ನಾನು ಸಿರಿವಂತ.

ಆದರೂ ಆತನಿಗೆ ನನಗೊಲಿಯದ ಅನುಕೂಲಗಳು ಲಭ್ಯವೇಕೆ ?

ನಾನು ಮೇಲು, ಅವನು ಕೀಳು, ಆದರೂ ಅವನಿಗೆ ಕೀರ್ತಿ ಪತಾಕೆಗಳ ಲಭ್ಯತೆ ಏಕೆ ?

ಇವೇ ಮೊದಲಾದ ಸಂಕುಚಿತ ಭಾವನೆಗಳು ಉದ್ದೀಪನ ಗೊಂಡು ಮನೋಬಲ ದೃಢವಿಲ್ಲದಾಗ ಅದು ಕ್ರಮೇಣ ಅಸೂಯೆಯಾಗಿ ಪರಿ ವರ್ತನೆ ಹೊಂದುತ್ತದೆ.

ಇದನ್ನು ಪ್ರಾರಂಭ ಹಂತದಿಂದಲೇ ಬೆಳಯದಂತೆ ಚಿವುಟ ಬೇಕಿದೆ.

ಅಸೂಯೆಯ ಬೀಜ ಮೊಳಕೆಯೊಡೆಯದಂತೆ ಗಮನಹರಿಸಿ, ಅಲ್ಲಿಯೇ ಅದನ್ನು ಶಮನಗೊಳಿಸುವುದು ಅತ್ಯಗತ್ಯ.

ಸಾಮಾನ್ಯವಾಗಿ ಮಕ್ಕಳು ತನ್ನನ್ನು ಕಡೆಗಣಿಸಿ ಇತರ ಮಕ್ಕಳನ್ನು ತನ್ನೆದುರಿಗೇ ಪ್ರೀತ್ಯಾದರಗಳಿಂದ ನೋಡುವ ತಂದೆತಾಯಿಗಳ, ಪೋಷಕರ, ಗುರುವೃಂದದ ಬಗ್ಗೆ ಉಂಟಾದ ಕೋಪ ಸಾಮಾನ್ಯ ಕೋಪದಂತಲ್ಲ.

ತನಗೆ ಲಭ್ಯವಿಲ್ಲದ್ದು ಅವನಿಗೆ ದೊರೆಯಿತೆಂದು ಒಳಗೊಳಗೇ ಕೊರಗಿ ಕೊನೆಗೆ ಆತನಲ್ಲಿ ಅಸೂಯೆ ಮೂಡತೊಡಗುತ್ತದೆ.

ಎರಡು-ಮೂರು ಮಕ್ಕಳಿರುವ ಮನೆಯಲ್ಲಿ ಮೊದಲ ಮಗುವಿನಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ.

ನಾಲ್ಕಾರು ಮಕ್ಕಳೊಡನೆ ಬೆಳೆದ ಮಕ್ಕಳಲ್ಲಿ ಈ ಗುಣ ಕಡಿಮೆ ಇರುತ್ತದೆ.

ಮನೆಯ ವಾತಾವರಣದಲ್ಲಿ ಬೀಜವಾಗಿ ಮೊಳಕೆಯೊಡೆದ ಅಸೂಯೆಯ ಬೀಜವು ಶಾಲಾ ವಾತಾವರಣದಲ್ಲಿ ಉತ್ತಮ ಗೊಬ್ಬರ, ನೀರು ದೊರೆತಲ್ಲಿ ಬೇರು ಬಿಟ್ಟು ಹುಲುಸಾಗಿ ಬೆಳೆಯತೊಡಗಿ ಮಾರಕವಾಗಿ ಪರಿಣಮಿಸುತ್ತದೆ.

ಅಷ್ಟೆ ಏಕೆ ಪರೀಕ್ಷೆಗಳ ಪ್ರಗತಿ ಪತ್ರ ವೀಕ್ಷಿಸಿದಾಕ್ಷಣ ಅವರಿಗೆ ಹೆಚ್ಚು ಅಂಕಗಳು ಬಂದಿವೆ ನಿನಗೆ ಕಡಿಮೆ ಬಂದಿವೆ: ನೀನು ದಡ್ಡಿ, ಅವಳು ಜಾಣೆ ಇತ್ಯಾದಿಯಾದ ಪೋಷಕರು ಮತ್ತು ಗುರುವೃಂದದ ನಕರಾತ್ಮಕ ಪ್ರಶ್ನೆಗಳು ಕೂಡ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರಿ ಅವರು ಉಳಿದ ಮಕ್ಕಳ ಮೇಲೆ ಮತ್ಸರ ಬೆಳೆಸಿಕೊಳ್ಳಲು ತೊಡಗುತ್ತಾರೆ.

ಅದಕ್ಕೆ ಯಾವಾಗಲು ತಪ್ಪಿನ ಅರಿವನ್ನು ಕೇವಲ ನಿಂದನೆಯಿಂದಲೇ ಮಾಡಬಾರದು. ಮಕ್ಕಳಲ್ಲಿ ಸಕಾರಾತ್ಮಕವಾಗಿ ಅರಿವು ಮೂಡಿಸಬೇಕು ಇದು ಮಕ್ಕಳಿಗಷ್ಟೇ ಅಲ್ಲ ಹಿರಿಯರಿಗೂ ಅನ್ವಯಿಸುತ್ತದೆ.

" ಹೊಗಳುವುದಾದರೇ ಎಲ್ಲರ ಎದುರಿಗೆ ಹೊಗಳು, ತೆಗಳುವುದಾದರೇ ಒಬ್ಬರನ್ನೆ ಕರೆದು ತೆಗೆಳು ಎಂಬ ಸ್ವಾನುಭವ ನುಡಿ ಆದರ್ಶಪ್ರಾಯವಾದದು ".

ಸಮಾಜದಲ್ಲಿ ಸಾಮಾನ್ಯವಾಗಿ ನಾವು ಅನುಭವಿಸುತ್ತಿರುವ ಸಂಕಷ್ಟಗಳು, ವ್ಯಸನಗಳು ನಮ್ಮ ಇಚ್ಛೆಗೆ ಭಂಗ ಬಂದುದರಿಂದ ಉತ್ಪನ್ನವಾಗಿರುವುದಿಲ್ಲ.

ಈಗಾಗಲೇ ಚರ್ಚಿಸಿದಂತೆ ತಮಗೆ ಲಭ್ಯವಿಲ್ಲದ್ದು ತಮಗೆ ಇಷ್ಟವಿಲ್ಲದವರಿಗೆ, ವಿರೋಧಿಗಳಿಗೆ, ಶತ್ರುಗಳಿಗೆ, ಕಿರಿಯರಿಗೆ ಲಭ್ಯವಾದುದರಿಂದ ಅಸೂಯೆ ಉಂಟಾಗುತ್ತದೆ.

ಬಂಧು ಬಾಂಧವ್ಯ, ಸ್ನೇಹತ್ವಗಿಂತಲೂ ಮಿಗಿಲಾಗಿ ಪತಿ ಪತ್ನಿಯರನ್ನೂ ಇದು ಹೊರತುಪಟ್ಟಿಲ್ಲ.

ಎಂದರೆ ಅಸೂಯೆಯ ಪ್ರಭಾವದ ಬಗ್ಗೆ ಎಚ್ಚರಿಕೆಯಿಂದ ಇರಬೇಕಾದುದು ಅತ್ಯಗತ್ಯ.

ಈ ಗುಣಸ್ವಭಾವ ಭಾವೀ ಪ್ರಜೆಗಳಲ್ಲಿ ಮೂಡದಂತೆ ಎಚ್ಚರಿಕೆ ವಹಿಸಬೇಕಾದುದು ಗುರುತರವಾಗಿದೆ.

ಅಲ್ಲದೇ ನೂರಾರು ಭಾಷೆಗಳು, ಮತಧರ್ಮಗಳು, ವಿಭಿನ್ನ ಸಂಸ್ಕೃತಿ ಮತ್ತು ನೂರಾರು ರಾಜಕೀಯ ಪಕ್ಷಗಳನ್ನು ಹೊಂದಿರುವ ಬಹು ದೊಡ್ಡ ಪ್ರಜಾತಂತ್ರ ವ್ಯವಸ್ಥೆ ಹೊಂದಿರುವ ಭಾರತದಂತಹ ರಾಷ್ಟ್ರದಲ್ಲಿ ಅಸೂಯೆ ಮತ್ತು ಮತ್ಸರವು ಬಹು ಅಪಾಯಕಾರಿ.

ರಾಷ್ಟ್ರದ ಸರ್ವಾಂಗೀಣ ಪ್ರಗತಿಗೆ ಇದು ಮಾರಕ. ಪ್ರಶಾಂತವಾಗಿ ಹರಿಯುವಂತೆ ಕಾಣುವ ವಿಶಾಲ ನದಿಯ ಅಂತರಾಳದ ಕರೆಂಟ್ ಇದ್ದಂತೆ ರಾಜಕೀಯ ಮಾತ್ಸರ್ಯ.

ಚಿಕ್ಕಂದಿನಿಂದಲೇ ಇದೆಲ್ಲದರ ಬಗ್ಗೆ ಸೋದಾಹರಣವಾಗಿ ಅರಿವು ಮೂಡಿಸುವುದು ಅತಿ ಅವಶ್ಯವಾದುದು.

# 4. ಹೆದರಿಕೆ (Apprehension)

**ಡಾ॥ಶೀಲ : " ಹೆದರಿಕೆ " ಎಂದರೇನು ?**

**ಡಾ॥ರಾಮು:** "ಹೆದರಿಕೆ" ತತ್ಪರಿಣಾಮವಾಗಿ ಅಪಾಯಗಳಿಂದ, ಕಷ್ಟನಷ್ಟಗಳಿಂದ ಆಪತ್ತುಗಳಿಗೆ ಸುಲಭವಾಗಿ, ನೇರವಾಗಿ ಬಲಿಯಾಗುವುದರಿಂದ ರಕ್ಷಿತನಾಗುತ್ತಾನೆ ಅಲ್ಲದೆ ಕೆಲವು ವಿಚಾರಗಳಿಗೆ ಅನಾವಶ್ಯಕವಾಗಿ ಭಯಭೀತನಾಗಿ ಹಿಂಜರಿಕೆ, ಸಂಕೋಚ ಸ್ವಭಾವದವನಾಗಿ ಬೆಳೆಯುವ ಅವಕಾಶಗಳು ಉಂಟಾಗುತ್ತಿದ್ದವು.

ಒಂದೆರಡು ವರ್ಷಗಳವರೆಗೆ ಮಕ್ಕಳಿಗೆ ಹೆದರಿಕೆ ಎಂಬ ಭಾವನೆ ಇರುವುದೇ ಇಲ್ಲ. 3-4ನೇ ವಯಸ್ಸಿನಲ್ಲಿ ಇದು ಜಾಗೃತಗೊಳ್ಳುತ್ತದೆ. ಕರ್ಕಶವಾದ ಶಬ್ದಗಳು, ಕೆಲವು ವಸ್ತುಗಳು, ದುಷ್ಟ ಪ್ರಾಣಿಗಳು, ಕೆಲವು ಘಟನೆ ಮತ್ತು ಸನ್ನಿವೇಶಗಳ ಬಗ್ಗೆ ಕ್ರಮೇಣ ಹೆದರಿಕೆ ಉಂಟಾಗುತ್ತದೆ ಎಂದು ಮನೋವಿಜ್ಞಾನಿಗಳಾದ ವ್ಯಾಟ್ಸನ್ ಮತ್ತು ಮೇರಿ ಜೋನ್ಸ್ ಅವರು ತಮ್ಮ ಸಂಶೋಧನೆಗಳಿಂದ ದೃಢಪಡಿಸಿದ್ದಾರೆ.

ಮಕ್ಕಳಿಗೆ ಉಂಟಾಗುವ ಹೆದರಿಕೆಗಳೆಲ್ಲಾ ಸ್ವಾಭಾವಿಕವಾದವುಗಳಲ್ಲ. ಬಹುಪಾಲು ಸನ್ನಿವೇಶ, ಪರಿಸರ ಮತ್ತು ಸಂಸರ್ಗ ಜನ್ಯವಾದವುಗಳು. ಉದಾಹರಣೆಗೆ, ಕತ್ತಲ ಬಗ್ಗೆ ಪ್ರಥಮತ: ಯಾವ ಮಗುವೂ ಹೆದರಿಕೆ ವ್ಯಕ್ತಪಡಿಸುವುದಿಲ್ಲ. ಕತ್ತಲಿನಲ್ಲಿ ಭೂತ, ಗುಮ್ಮ ಬರುತ್ತದೆಂದು ಹೆದರಿಸಿದಾಗ ಅವರಲ್ಲಿ ಕತ್ತಲೆ ಬಗ್ಗೆ ಹೆದರಿಕೆ ಪ್ರಾರಂಭವಾಗುತ್ತದೆ.

ಮತ್ತೊಂದು ಉದಾಹರಣೆ ಎಂದರೆ ಪ್ರತಿಯೊಂದ ಮಗುವೂ ತನ್ನ ಮನೆಯಲ್ಲಿ ಚಿನ್ನಾ, ರನ್ನರಾಗಿ ಮುದ್ದಾಡಿಸಿಕೊಂಡು ಬೆಳೆದಿರುತ್ತದೆ. ಅಂತಹ ಮಗು ಶಾಲೆಗೆ ಬಂದಾಗಲೂ ಅದೇ ವಾತಾವರಣ ನಿರೀಕ್ಷೆ ಮಾಡುತ್ತದೆ. ಶಾಲೆಯಲ್ಲಿ ಮನೆಯ ವಾತಾವರಣ ದೊರೆಯದೆ ಕಂಗಾಲಾಗಿರುತ್ತವೆ. ಹೀಗಾಗಿ ಕೋಲುಹಿಡಿದು ರೇಗುವುದು, ಬಾಯಿ ತೆರೆದರೆ ಬೈಯ್ಯುವುದು, ಹೊಡೆಯುವುದು ಇತ್ಯಾದಿಗಳಿಂದ ಮಕ್ಕಳಲ್ಲಿ ಹೆದರಿಕೆ ಪ್ರಾರಂಭವಾಗುತ್ತದೆ. ಅಲ್ಲದೆ, ಬೇರಾವುದೇ ಮಕ್ಕಳಿಗೆ ಹೊಡೆದು ಬೈದರೂ ಉಳಿದ ಮಕ್ಕಳು ಹೆದರಿಕೆಯಿಂದ ಅಳಲು ಪ್ರಾರಂಭಿಸುತ್ತವೆ. ಇದನ್ನು ಆರೋಪಿತ ಹೆದರಿಕೆಗಳು ಎಂದು ಕರೆಯುವರು. ನಾಯಿಯಿಂದ ಕಚ್ಚಿಸಿಕೊಂಡ ಮಗು ಯಾವುದೇ ನಾಯಿ ಕಂಡರೂ ಹೆದರಿಕೊಳ್ಳುವುದು. ಹಾಗೆಯೇ ಕೆಲವೊಮ್ಮೆ ದಂಡಿಸುವ ಶಿಕ್ಷಕರಿಗೆ ಹೆದರುವ ಮಕ್ಕಳು ಇತರ ಶಿಕ್ಷಕರನ್ನು ಕಂಡರೂ ಹೆದರುವುದಕ್ಕೆ ಪ್ರಾರಂಭಿಸುವರು. ದಕ್ಕೆ

ಐದಾರು ವರ್ಷಗಳನ್ನು ದಾಟಿದ ಮಕ್ಕಳು ಭೌತಿಕ ವಸ್ತುಗಳಿಗೆ ಹೆದರಿಕೊಳ್ಳುವ ಬದಲು ಕಾಲ್ಪನಿಕ ವಸ್ತುಗಳಿಗೆ ಹೆದರಿಕೊಳ್ಳುವುದಕ್ಕೆ ಪ್ರಬಲವಾದ ಕಾರಣವಿರುತ್ತದೆ. ಇಂತಹ ಕಾಲ್ಪನಿಕ ಹೆದರಿಕೆ ಮಕ್ಕಳ ಬೆಳವಣಿಗೆಗೆ ಮಾರಕವಾದುದು. ಅದನ್ನು ದೂರ ಮಾಡಲು ಪ್ರಯತ್ನಿಸಬೇಕು. ಹೆದರಿಕೆಯು, ದೈನಂದಿನ ಪಠ್ಯ-ಸಹಪಠ್ಯ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಉಂಟಾಗುವ ಸಾಧ್ಯತೆ ಹೆಚ್ಚಿದೆ. ಇಂತಹ ಸನ್ನಿವೇಶಗಳು ಹೆಚ್ಚಾದಲ್ಲಿ ಮಗುವಿನಲ್ಲಿ ಹಿಂಜರಿಕೆ, ಸಂಕುಚಿತ ಮನೋಭಾವನೆ ಉಂಟಾಗತೊಡಗಿ ಕಲಿಕೆಯಲ್ಲಿ ಆಸಕ್ತಿ ಕುಂಠಿತವಾಗತೊಡಗಿ ಕೊನೆಗೆ ಯಾವು

ದರಲ್ಲಿಯೂ ಆಸಕ್ತಿ ಉಳಿಯುವುದಿಲ್ಲ. ಆದುದರಿಂದ ಶಾಲೆಗಳಲ್ಲಿ ಇಂತಹ ಹೆದರಿಕೆ ಗಳು ಉಂಟಾಗುವ ಸನ್ನಿವೇಶ, ಘಟನೆಗಳನ್ನು ಪತ್ತೆಹಚ್ಚಿ ಅವುಗಳನ್ನು ನಿವಾರಿಸಲು ವೈಯಕ್ತಿಕ ಗಮನ ಹರಿಸಬೇಕಾದದ್ದು ಅವಶ್ಯವಿದೆ.

ಹೀಗೆ ಹೆದರಿಕೆ ಬಿಡಿಸುವ ಕಾರ್ಯವನ್ನು ಸಕಾಲದಲ್ಲಿ ಸೂಕ್ತವಾಗಿ ಮಾಡದಿದ್ದರೆ ಮಕ್ಕಳ ಮುಂದಿನ ಜೀವನದಲ್ಲಿ ಹಾಗೂ ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಗಳಿವೆ. ಆದುದರಿಂದ ಪೋಷಕರು ಮತ್ತು ಶಿಕ್ಷಕರು ಈ ಬಗ್ಗೆ ಆದ್ಯ ಗಮನ ಹರಿಸಬೇಕು.

# 5. ಭಯ (Fear)

ಡಾ॥ಶೀಲ : “ ಭಯ ” ಎಂದರೇನು ?

ಡಾ॥ರಾಮು: ಭಯವು ವ್ಯಕ್ತಿಯನ್ನು ಪ್ರತಿನಿತ್ಯ ಪ್ರತಿಕ್ಷಣವೂ ಜೀವನದಲ್ಲಿ ಎದುರಿಸುವಂತಹ ಅಪಾಯ, ನಷ್ಟಗಳು ಆಪತ್ತುಗಳು ಹಾಗೂ ಗ್ರಹಚಾರಗಳಿಂದ ರಕ್ಷಿಸುವಂತಹ ಅಂಗರಕ್ಷಕನ ಕಾರ್ಯವನ್ನು ನಿರ್ವಹಿಸುತ್ತದೆ.

ಡಾ॥ಶೀಲ : ಅಂದು ಪೂರ್ವಜರು ಅವರ ಜೀವನದಲ್ಲಿ ಏಕೆ ಭಯಭೀತರಾಗಿ ನಡೆಯುತ್ತಿದ್ದರು ?

ಡಾ॥ರಾಮು: ಪೂರ್ವಜರಿಗೆ ಪ್ರಕೃತಿ, ಪರಿಸರ, ಆಚಾರವಿಚಾರಗಳು, ನಡೆನುಡಿಗಳ ಬಗ್ಗೆ ಮಿಗಿಲಾಗಿ ತಮ್ಮ ನೆರಳಿಗೆ ತಾವು ಭಯಭೀತರಾಗಿ ನಡೆಯುತ್ತಿದ್ದರು. ಇದರಿಂದಾಗಿ ಯಾವುದೇ ಗಹನವಾದ ತೀರ್ಮಾನ ಕೈಗೊಳ್ಳಲು ಆತ ತನ್ನ ಭಯದ ನೆರಳಿನಲ್ಲಿ ಚಿಂತನ-ಮಂಥನ ನಡೆಸಿ, ಅನಂತರ ಅಡಿಯಿಡುತ್ತಿದ್ದನು. ಹೀಗಾಗಿ ಅವನು ಅದು ಸಾಮಾನ್ಯವಿರಲಿ ಇಲ್ಲವೇ ಗಹನವಾದ ಗಂಭೀರವಾದ ಆಚಾರವಿರಲಿ, ವಿಚಾರವಿರಲಿ ಭಯಭೀತಿಯ ನೆರಳಿನಲ್ಲಿ ಕಾರ್ಯಪ್ರವೃತ್ತನಾಗುತ್ತಿದ್ದನು.

ತತ್ಪರಿಣಾಮವಾಗಿ ಅಪಾಯಗಳಿಂದ, ಕಷ್ಟನಷ್ಟಗಳಿಂದ ಆಪತ್ತುಗಳಿಗೆ ಸುಲಭವಾಗಿ, ನೇರವಾಗಿ ಬಲಿಯಾಗುವುದರಿಂದ ರಕ್ಷಿತನಾಗುತ್ತಿದ್ದನು. ಅಲ್ಲದೆ ಕೆಲವು ವಿಚಾರ ಗಳಿಗೆ ಅನಾವಶ್ಯಕವಾಗಿ ಭಯಭೀತನಾಗಿ ಹಿಂಜರಿಕೆ, ಸಂಕೋಚ ಸ್ವಭಾವದವ ನಾಗಿ ಬೆಳೆಯುವ ಅವಕಾಶಗಳು ಉಂಟಾಗುತ್ತಿದ್ದವು.

ಸಾಮಾನ್ಯವಾಗಿ 3-4 ವರ್ಷಗಳವರೆಗೆ ಮಕ್ಕಳಿಗೆ ಭಯ-ಭೀತಿಗಳ ಪರಿಕಲ್ಪನೆ ಇರುವುದಿಲ್ಲ. ಬೆಂಕಿ, ಹಾವು ಇತ್ಯಾದಿ ಕಂಡರೂ ಹೌಹಾರದೆ ಆನಂದದಿಂದ ಅದರೊಡನೆ ಆಟವಾಡಲು ಹಾತೊರೆಯುವ ಪ್ರವೃತ್ತಿ ಮಗುವಿನದಾಗಿರುತ್ತದೆ. 3-4ವರ್ಷಗಳನ್ನು ದಾಟುತ್ತಿದ್ದಂತೆಯೇ ಆತನಲ್ಲಿ ಅರಿವು ಮೂಡುತ್ತಿದ್ದಂತೆ ಪೋಷಕರೇ ಸೃಷ್ಟಿಸಿದಂತಹ ಕೃತಕ ಭಯ-ಭೀತಿಗಳೇ, ಅವರಲ್ಲಿ ಭಯದ ಅಸ್ಥಿಭಾರವಾಗಿ ರೂಢಿಗತವಾಗುತ್ತವೆ.

ಗುಮ್ಮ ಬಂತು ಗುಮ್ಮ, ಕಳ್ಳ ಬರ್ತಾನೆ, ಭೂತ ಬಂತು, ಗುಡುಗುಡು ಅಮ್ಮಾ ಬರ್ತಾಳೆ, ಪೋಲೀಸ್ ಬಂದಾ.. ಇವೇ ಮೊದಲಾದ ಮಾತುಗಳನ್ನು ಆತನಲ್ಲಿ ಹಠಮಾರಿತನ ನಿಲ್ಲಿಸಲೋ. ಅಳು ನಿಲ್ಲಿಸಲೋ ಬಳಸತೊಡಗುತ್ತಾರೆ.

ಇದೇ ಕ್ರಮೇಣ ಭಯದ ಪರಿಕಲ್ಪನೆ ಮೂಡಲು ನಾಂದಿಯಾಗುತ್ತದೆ. ಇಲ್ಲಿ ನಿರ್ದಿಷ್ಟ ಕೇಡು, ಅಪಾಯ ಇಲ್ಲದಿದ್ದರೂ ಕೃತಕ ಊಹಾತ್ಮಕ ಭಯದ ನಿರ್ಮಾಣ ಎಂದು ಹೇಳಬಹುದು.

ಕ್ರಮೇಣ ಮಕ್ಕಳಲ್ಲಿ ಊಹಾತ್ಮಕ ಕೃತಕ ವಿಚಾರಗಳಿಗೆ ಭಯ ಉಂಟಾಗತೊಡಗಿ ಇತರ ವಿಚಾರಗಳಲ್ಲಿಯೂ ಭಯದ ಕಲ್ಪನೆ ಮೂಡತೊಡಗುತ್ತದೆ. ಮಕ್ಕಳ ಧೈರ್ಯ ಹಾಗೂ ಆತ್ಮವಿಶ್ವಾಸವನ್ನು ಕುಂದಿಸುವ ಅಂಶಗಳಿಂದಲೂ ಭಯಗೊಳ್ಳುವ ಪ್ರವೃತ್ತಿ ಪ್ರಾರಂಭವಾಗುತ್ತದೆ. ಅಲ್ಲದೆ, ಇದೇ ಪ್ರವೃತ್ತಿಯು ಪುಷ್ಟಿಗೊಂಡಲ್ಲಿ ಮುಂದೆ ಮಕ್ಕಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಆಯಾಸಗೊಂಡಾಗ ಮತ್ತು ಅನಾರೋಗ್ಯದ ಭಾದೆಗೆ ಒಳಗಾದಾಗಲೂ ಭಯಗೊಳ್ಳುವರು.

ಮಕ್ಕಳ ಸಾಮರ್ಥ್ಯಗಳಿಗೆ ಸೂಕ್ತ ಒತ್ತಾಸೆ ದೊರೆಯದಿದ್ದಾಗ, ಮನೆ ಮತ್ತು ಹೊರಗಿನ ಪರಿಸರದಲ್ಲಿ ಪ್ರೀತಿ-ವಾತ್ಸಲ್ಯ ದೊರೆಯದಿದ್ದಾಗ, ತಮ್ಮನ್ನು ಗುರುತಿಸಲ್ಪಡಲು ಅವಕಾಶಗಳಿಂದ ವಂಚಿತರಾದಾಗ ಅವರಲ್ಲಿ ಅಪರಾಧಿ ಪ್ರಜ್ಞೆ ಮೂಡಿ ತಾವು ಸಮರ್ಥರಲ್ಲ, ಸಲ್ಲುವವರಲ್ಲ ಎಂಬ ಭಾವನೆ ಮೂಡಿ ವೈಯಕ್ತಿಕ ಬೆಳವಣಿಗೆ ಕುಂಠಿತವಾಗಲು ಅವಕಾಶವಾಗುತ್ತದೆ.

ಮಕ್ಕಳಿಗೆ ದೊರೆಯುವ ಲಾಲನೆ, ಪಾಲನೆ, ಪೋಷಣೆಗಳು ಒಮ್ಮೆಲೆ ನಿಂತಾಗ, ಸ್ಥಗಿತಗೊಂಡಾಗ ಅವರಲ್ಲಿ ಭಯ - ಭೀತಿಯ ವಾತಾವರಣ ನಿರ್ಮಾಣವಾಗುತ್ತದೆ. ಈಗಾಗಲೇ ಚರ್ಚಿಸಿದಂತೆ ಭಯ ಮನೆಯ ಒಳಗೆ ಹಾಗೂ ಹೊರಗೆ (ಆಂತರಿಕವಾಗಿ ಮತ್ತು ಬಾಹ್ಯವಾಗಿ) ಎರಡರಿಂದಲೂ ಉಂಟಾಗುತ್ತದೆ. ಆದರೆ, ಬಹುಪಾಲು ಭಯದ ಕಾರಣಗಳು ಬಾಹ್ಯ ಪ್ರಚೋದಕವಾದವುಗಳು. ಅನಾವಶ್ಯಕ ಭಯದ ಪ್ರಚೋದನೆಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದರೆ ಮುಂದೆ ಬೆಳವಣಿಗೆಗೆ ತುಂಬಾ ಅಡ್ಡಿಯುಂಟಾಗುತ್ತದೆ.

ಅನಾವಶ್ಯಕ ಭಯದ ವಾತಾವರಣ, ಸನ್ನಿವೇಶಗಳಿಂದ ಮುಕ್ತರಾಗಲು ಇರುವ ಸುಲಭವಾದ ಏಕೈಕ ತಂತ್ರವೆಂದರೆ, ಭಯಗೊಳ್ಳಲು ಏನಾಗಿದೆ, ಅಲ್ಲೇನಿದೆ ಎಂದು ಹೇಳಿಕೊಂಡು ದೃಢ ನಿಲುವು ತಾಳುವುದು. ಅಲ್ಲದೆ, ಅವರು ಭಯಗೊಂಡಿರುವ ಭಯದ ವಾತಾವರಣ ಮತ್ತು ಸನ್ನಿವೇಶಗಳಿಂದ ಮುಕ್ತರಾಗಲು ಇತರರಿಗೆ ಸಹಾಯ ಮಾಡುವುದರಿಂದಲೂ ತಾನೇ ಆ ವಾತಾವರಣದಿಂದ ಮುಕ್ತನಾದಷ್ಟು ನೆಮ್ಮದಿ ದೊರೆಯುತ್ತದೆ. ತನ್ಮೂಲಕ ಮಗು ತನ್ನ ಸಾಮರ್ಥ್ಯಗಳು ಹಾಗೂ ಕೌಶಲ್ಯಗಳಲ್ಲಿ ದೃಢತೆಯನ್ನು ಹೊಂದುವ ಮೂಲಕ ಅಂತಹ ಭಯದ ವಾತಾವರಣವನ್ನು ಸಮರ್ಥ ರೀತಿಯಲ್ಲಿ ಎದುರಿಸುವಲ್ಲಿ ಸಮರ್ಥನಾಗುತ್ತಾನೆ.

ಕೆಲವು ಭಯದ ವಾತಾವರಣವನ್ನು ಹಂತ ಹಂತವಾಗಿ ಅನ್ಯರ ಸಹಕಾರದಿಂದ ಪರಿಹರಿಸಬಹುದು

**ಉದಾ: ಸಭಾಕಂಪನ** : ಸಭೆಯನ್ನು ನೋಡಿ ಭಯಗೊಳ್ಳುವುದು. ಅಂತಹ ಮಕ್ಕಳನ್ನು ಗುಂಪಿನ ಜೊತೆಯಲ್ಲಿ ಒಂದೆರೆಡು ಬಾರಿ ತೊಡಗಿಸಿದಾಗ ಕ್ರಮೇಣ ಅವನಲ್ಲಿ ಭಯ ಹೋಗುತ್ತದೆ. ಸಾಮಾನ್ಯವಾಗಿ ಹೊರಗೆ ಹತ್ತಾರು ಜನ ಆತ್ಮೀಯರೇ ಇದ್ದಾಗ ಅನೌಪಚಾರಿಕವಾಗಿ ಎಷ್ಟಾದರೂ ಮಾತನಾಡುವ ಮಕ್ಕಳು ಅದೇ ಆತ್ಮೀಯರನ್ನು ಕುರಿತು ಒಂದು ವೇದಿಕೆಯ ಮೇಲೆ ಅಷ್ಟೇ ಸರಳವಾಗಿ ಮಾತನಾಡಲು ಹಿಂಜರಿಯುತ್ತಾರೆ. ಕಾರಣ ಭಯಕ್ಕಿಂತ ಮಿಗಿಲಾಗಿ ಆತ್ಮವಿಶ್ವಾಸ ಇಲ್ಲದಿರುವುದು. ಇಂತಹ ಸಂದರ್ಭದಲ್ಲಿ, ಗುಂಪಿನ ಜೊತೆಯಲ್ಲಿ ವೇದಿಕೆಗೆ ಹೋಗಿ ನಿಲ್ಲುವ ಮತ್ತು ಒಂದೆರಡು ಸರಳವಾದ ಮಾತುಗಳನ್ನಾಡಲು ಅವಕಾಶ ಕಲ್ಪಿಸಿದರೆ ಕ್ರಮೇಣ ಅವರು ನಿರ್ಭಯರಾಗಿ ವೇದಿಕೆಯ ಮೇಲೆ ತಮ್ಮ ಸಾಮರ್ಥ್ಯವನ್ನು ಉತ್ತಮವಾಗಿ ಪ್ರದರ್ಶಿಸಬಲ್ಲರು.

ಶಾಲೆಯ ಕಲಿಕೆಯಲ್ಲಿ ಹಿಂದಿರುವ ಮಕ್ಕಳಿಗೆ ತೀವ್ರತರವಾಗಿ ದಂಡನೆ ನೀಡಿದರೆ, ಆ ಮಕ್ಕಳು ಶಿಕ್ಷಕರ ಬಗ್ಗೆ ಭಯಗೊಂಡು ಶಾಲೆಯನ್ನೇ ಬಿಡಬಹುದು, ಇಲ್ಲವೆ, ಶಿಕ್ಷಕರ ಬಗ್ಗೆ ಭಯ-ಭೀತಿ ನಿರ್ಮಾಣವಾಗಿ ಮಕ್ಕಳ ಬೋಧನಾ, ಕಲಿಕಾ ಚಟುವಟಿಕೆಗಳು ಉತ್ತಮವಾಗಿದ್ದರೂ ಅವರಲ್ಲಿ ಉತ್ತಮ ಪರಿಣಾಮ ಕಂಡು ಬರುವುದಿಲ್ಲ. ಹೀಗಾಗಿ ಅಂತಹ ಮಕ್ಕಳು ಸದರಿ ಶಿಕ್ಷಕರ ತರಗತಿಯಲ್ಲಿ

ದುರ್ಬಲರೆಂಬ ಪಟ್ಟವನ್ನು ಹೊತ್ತು ಹಿಂದುಳಿಯುತ್ತಾರೆ. ಒತ್ತಾಸೆ ಇಲ್ಲದಿದ್ದರೆ ಆತ್ಮವಿಶ್ವಾಸ ಬಲವಿಲ್ಲದೆ ಶಾಲೆ ಬಿಡುವ ಸನ್ನಿವೇಶವೂ ಉಂಟು. ಇಂತಹ ಪ್ರಸಂಗ ಗಳು ಹಿಂದೆ ಹೆಚ್ಚಿತ್ತಾದರೂ ಇಂದು ಇಲ್ಲವೆನ್ನುವಂತಿಲ್ಲ. ದಂಡಿಸಲು ಹೋಗಿ ಕಣ್ಣು ಕಳೆದುಕೊಂಡ, ಸಾವಪ್ಪಿದ ಸಾರ್ವತ್ರಿಕ ಸುದ್ದಿಯಾದ ಪ್ರಸಂಗಗಳು ಕೆಲವಾಗಿದ್ದರೆ ಸುದ್ದಿಯಾಗದೆ ಉಳಿದ ಪ್ರಸಂಗಗಳು ಬಹಳಷ್ಟಿವೆ.

" ಮಕ್ಕಳು ಅವರವರ ಮನೆ ಎಂಬ ಸಾಮ್ರಾಜ್ಯದ ರಾಜಕುಮಾರರು ಮತ್ತು ಆ ಮನೆಯ ನಂದಾದೀಪ ". ಅಂತಹವರಿಗೆ ಶಾಲೆಯು ಪ್ರೀತಿ-ವಾತ್ಸಲ್ಯ ಮುಕ್ತ ವಾತಾವರಣ ರಹಿತ ಕಾರಾಗೃಹಗಳಾದರೆ, ಅರ್ಥವಿಲ್ಲದ ವಿಷಯಗಳ ಕಲಿಕೆ ಯಾದರೆ, ಕಲಿಕೆಯಲ್ಲಿ ಹಿಂದುಳಿದರೆ, ದಂಡಿಸಲ್ಪಟ್ಟಲ್ಲಿ, ಅವರು ಭಯಗೊಳ್ಳದೆ ಇರುವರೇ? ಆದುದರಿಂದ ಶಾಲೆಯಲ್ಲಿ ಮಕ್ಕಳು ಭಯ - ಭೀತಿಯಿಂದ ಮುಕ್ತವಾಗಿ ರೂಪಿತವಾದರೆ, ಬಹುಪಾಲು ಮಕ್ಕಳು ಕಲಿಕೆಯಲ್ಲಿ ಪ್ರಗತಿ ಸಾಧಿಸುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಶಾಲೆಯಲ್ಲಿ ಪಠ್ಯ ಹಾಗೂ ಸಹಪಠ್ಯ ಚಟುವಟಿಕಗಳಲ್ಲಾಗಲೀ, ಮನೆಯಲ್ಲೇ ಆಗಲಿ, ತಮ್ಮ ಮುಕ್ತ ಅಭಿಪ್ರಾಯ, ಅನಿಸಿಕೆಗಳನ್ನು ಅಭಿವ್ಯಕ್ತಪಡಿಸಲು ಕೂಡಾ ಭಯಪಡುವ ಮಕ್ಕಳ ಸಂಖ್ಯೆ ತುಂಬಾ ಇದೆ. ಅಂಥವರಿಗೆ ಮುಕ್ತ ವಾತಾವರಣ ಕಲ್ಪಿಸಲು ಒತ್ತಾಯಪೂರ್ವಕ ಪ್ರೇರಣೆ, ಒತ್ತಾಸೆ, ನಿರಂತರವಾಗಿ ದೊರೆಯು ವಂತಾದರೆ ಖಂಡಿತ ಅವರು ತಮ್ಮ ಆತ್ಮವಿಶ್ವಾಸ ದೃಢಪಡಿಸಿಕೊಂಡು ಕ್ರಿಯಾಶೀಲ ರಾಗುತ್ತಾರೆ.

ಭಯ ಮತ್ತು ಭಯಗೊಳ್ಳಲು ಕಾರಣಗಳು ಏನೆಂದು ವಸ್ತುನಿಷ್ಠವಾಗಿ ಪರಿಶೀಲನೆ ಮಾಡಿದಾಗ ಅನಾವಶ್ಯಕವಾಗಿ ಭಯ-ಭೀತಿಗೊಳ್ಳುವ ಅಂಶಗಳ ಬಗ್ಗೆ ಅರಿವು ಮೂಡಿಸಿ ಮುಕ್ತರನ್ನಾಗಿ ಮಾಡುವುದು ಅಗತ್ಯವಿದೆ. ಒಂದು ವೇಳೆ ಸಹಜವಾಗಿ ಭಯಗೊಳ್ಳಬೇಕಾದ ಅಂಶಗಳಾಗಿದ್ದಲ್ಲಿ ತಾಳ್ಮೆಯಿಂದ, ಆತ್ಮವಿಶ್ವಾಸದಿಂದ ವಿಚಾರ ಶೀಲರಾಗಿ ಆ ಭಯದ ವಾತಾವರಣದಿಂದ ಮುಕ್ತರಾಗಲು ಬೇಕಾದ ಅರಿವನ್ನು ಮಕ್ಕಳಿಗೆ ಪ್ರಾರಂಭ ಹಂತದಿಂದಲೇ ಮಾಡಿಕೊಡುವುದು ಅತ್ಯಾವಶ್ಯಕ.

**ಯಾವೆಲ್ಲ ರೀತಿಯ ಭಯವು ಉದಯಿಸುವುದೋ ಅವೆಲ್ಲಾ ಮೂರ್ಖನ ಮನಸ್ಸಿನಲ್ಲಿ ಉಂಟಾಗು ತ್ತದೆ, ಜ್ಞಾನಿಯಲ್ಲಿ ಅಲ್ಲ.**

**ಏಕಾಂತ ಫಲರಸವನ್ನು ಕುಡಿದು, ಶಾಂತಿರಸದ ಸವಿಯನ್ನು ಉಂಡವನು, ಪಾಪವಿಲ್ಲದವ ನಾಗುತ್ತಾನೆ, ಧಮ್ಮರಸವನ್ನು ಸವಿದವನು ಭಯರಹಿತನಾಗುತ್ತಾನೆ.**

**ನಾಲ್ಕು ರೀತಿಯ ಭಯಗಳಿವೆ. ಅವೆಂದರೆ : ಜನ್ಮ ಭಯ, ರೋಗ ಭಯ, ವೃದ್ಧಾಪ್ಯ ಭಯ ಮತ್ತು ಮರಣದ ಭಯ. ಮತ್ತೇ ನಾಲ್ಕು ರೀತಿಯ ಭಯಗಳಿವೆ ಅವೆಂದರೆ : ಬೆಂಕಿಯ ಭಯ, ನೀರಿನ ಭಯ, ರಾಜರ ಭಯ ಮತ್ತು ಕಳ್ಳರ ಭಯ.**

**ಮತ್ತೆ ನಾಲ್ಕು ರೀತಿ ಭಯಗಳಿವೆ ಅವೆಂದರೆ : ಸ್ವನಿಂದನ ಭಯ, ಪರನಿಂದನಾ ಭಯ, ಶಿಕ್ಷೆಯ ಭಯ ಮತ್ತು ದುರ್ಗತಿಯ ಭಯ.**

**ಪ್ರಿಯವಾದುದರಿಂದ ಶೋಕವು ಹುಟ್ಟುತ್ತದೆ. ಪ್ರಿಯವಾದುದರಿಂದ ಭಯವು ಹುಟ್ಟುತ್ತದೆ. ಯಾರು ಪೂರ್ಣವಾಗಿ ಪ್ರಿಯಭಾವನೆಯಿಂದ ಮುಕ್ತರೋ ಅವರಿಗೆ ಶೋಕವಿಲ್ಲ, ಭಯ ಇನ್ನೆಲ್ಲಿ?**

# 7. ಸಂಸ್ಕೃತಿ ಮುತ್ತು ಮಾನವ ಮೌಲ್ಯಗಳ ಉಗಮ ಮತ್ತು ಆಗಮ

ಡಾ॥ಶೀಲ :ಪುರಾತನ ಕಾಲದಿಂದಲೂ ನಮ್ಮಪೂರ್ವಜರು ಏಕೆ ಪ್ರಕೃತಿಯನ್ನುಆರಾಧಿಸುತ್ತಿದ್ದರು?

ಡಾ॥ರಾಮು : ಪುರಾತನ ಕಾಲದಿಂದಲೂ ನಮ್ಮ ಪೂರ್ವಜರು ಸೂರ್ಯ, ಚಂದ್ರ, ಅಷ್ಟದಿಕ್ಪಾಲಕರಾದಿ ಪ್ರಕೃತಿಯನ್ನು ಆರಾಧಿಸುತ್ತಿದ್ದರು.

ಅದಕ್ಕೆ ಮೂಲಕಾರಣ ಅದರ ಮೇಲಿದ್ದ ಗೌರವ, ಪ್ರೀತಿ-ಪ್ರೇಮ ಮಿಗಿಲಾಗಿ ಭಯ-ಭೀತಿ ಪ್ರಮುಖವಾದುದು ಎಂದು ಮನಗಾಣುತ್ತೇವೆ.

ಅಂದು ಮಾನವರು ಭೀಕರ ಅನಾಹುತ ಮಾಡುವ ವರುಣನಿಗೆ ಹೆದರಿದರು, ಗುಡುಗು-ಮಿಂಚಿಗೆ ಹೌಹಾರಿದರು, ಬಿರುಗಾಳಿಗೆ ಭೀತಿಗೊಂಡರು, ಚಂಡಮಾರುತಕ್ಕೆ ತಲ್ಲಣಿಸಿದರು, ಭೂಕಂಪ-ಜ್ವಾಲಾಮುಖಿಗಳಿಗೆ ಜರ್ಜರಿತರಾದರು, ರೋಗರುಜಿನ, ಕ್ಷಾಮಡಾಮರ್‌ಗಳಿಗ ಢವಗುಟ್ಟಿದರು, ಸಾವು-ನೋವುಗಳಿಗೆ ಬೆದರಿ ಬೆಚ್ಚಿದರು.

ಹೀಗೆ ಒಂದಲ್ಲಾ ಒಂದು ಪ್ರಕೃತಿಯ ಅಪರಿಮಿತ ಶಕ್ತಿ-ವಿಸ್ಮಯಗಳನ್ನು ಕಂಡು ನಲುಗಿದ ಮುಗ್ದಮಾನವರು ತಮ್ಮ ರಕ್ಷಣೆಗಾಗಿ, ಆತ್ಮ ಸಂಯಮಕ್ಕಾಗಿ ಪ್ರಕೃತಿಯನ್ನು ಆರಾಧಿಸತೊಡಗಿದರು.

ಡಾ॥ಶೀಲ : ನಮ್ಮ ಪೂರ್ವಜರು ಪ್ರಕೃತಿಯನ್ನು ಆರಾಧಿಸುತ್ತ ನೆಮ್ಮದಿ, ಸುಖ ಶಾಂತಿ ಪಡೆಯುತ್ತಲಿದ್ದರೆ ?

ಡಾ॥ರಾಮು : ನಮ್ಮ ಪೂರ್ವಜರು ಪ್ರಕೃತಿಯ ನಿಗೂಢತೆಗೆ ತಲೆಬಾಗಿ, ಹಮ್ಮ-ಬಿಮ್ಮ ತೋರದೆ, ಭಯ-ಭಕ್ತಿಯಿಂದ ವರ್ತಿಸತೊಡಗಿದರು. ತಮಗೆ ಪ್ರಕೃತಿಯಿಂದ ಲಭ್ಯವಾದ ಸಂಪನ್ಮೂಲದಿಂದಲೇ ನೆಮ್ಮದಿ, ಸುಖ, ಶಾಂತಿ ಪಡಯುತ್ತಿದ್ದರು.

ಡಾ॥ಶೀಲ : ನವನಾಗರೀಕತೆಯ ಮೆಟ್ಟಲು ಹತ್ತಿದ ಈಗಿನ ಮಾನವ ನೆಮ್ಮದಿ, ಸುಖ ಶಾಂತಿ ಪಡೆಯುತ್ತಲಿದ್ದಾನೆಯೇ ?

ಡಾ॥ರಾಮು : ನವನಾಗರೀಕತೆಯ ಮೆಟ್ಟಲು ಹತ್ತಿದ ಈಗಿನ ಮಾನವ, ವೈಜ್ಞಾನಿಕ ಆಸ್ಫೋಟನೆಯಿಂದಾಗಿ ಹಕ್ಕಿಯಂತೆ ಹಾರಾಡಿದ, ಮೀನಿನಂತೆ ಈಜಾಡಿದ, ಪ್ರಕೃತಿಯ ನಿಗೂಢತೆಗಳನ್ನೆಲ್ಲಾ ಭೇದಿಸತೊಡಗಿದ, ಎದುರಾಗಿದ್ದ ಅಪಾರ ಸಮಸ್ಯೆಗಳು ನೋವು-ಸಂಕಷ್ಟಗಳಿಗೆ ಪರಿಹಾರ ಕಂಡುಕೊಂಡ.

ಮನಸ್ಸಿನಲ್ಲಿ ವೇಗವಾಗಿ ಚಲಿಸತೂಡಗಿದ, ವಿಶ್ವವನ್ನೇ ಕ್ಷಣಾರ್ಧದಲ್ಲಿ ಪರ್ಯಟನೆ ಮಾಡುವಲ್ಲಿ ಜಯಶೀಲನಾದ. ವಿಶಾಲ ಪ್ರಪಂಚವನ್ನೇ ಕಿರುದಾಗಿಸಿದ.

ಗುರು ಹಿರಿಯರಿಗೆ ಹೆದರುವ, ಲಜ್ಜಿಸುವ, ಭಯಪಡುವ ಮಿಗಿಲಾಗಿ ವಿಧೇಯನಾಗಿರಬೇಕೆನ್ನುವ ಪರಿಕಲ್ಪನೆಯನ್ನು ಬಡಿದೋಡಿಸಿದ.

ಸ್ಪರ್ಧಾತ್ಮಕ ಯುಗದಲ್ಲಿ ನೀನೇನು ಹೆಚ್ಚು ನಾನೇನು ಕಡಿಮೆ ಎಂಬ ಸವಾಲು ಹಾಕಿ ಸವಾರಿಮಾಡತೊಡಗಿದ.

ತತ್ಪರಿಣಾಮ ವೈಜ್ಞಾನಿಕ ತಂತ್ರಜ್ಞಾನ ಯುಗದಲ್ಲಿ ನವನಾಗರಿಕತೆ ಹೆಸರಲ್ಲಿ ಒಳಿತುಗಳ ಜೊತೆ ಜೊತೆಯೇ ಅಮೃತದ ಜೊತೆ ಹಾಲಹಲವೂ ಉದ್ಭವಿಸಿದಂತೆ ಕೆಡಕುಗಳೂ ಉದ್ಭವಿಸತೊಡಗಿದವು.

ಹಿರಿಯ–ಕಿರಿಯ, ಉಚ್ಚ–ನೀಚ, ಪಾಪ–ಪುಣ್ಯ, ಒಳಿತು–ಕೆಡಕುಗಳ ಭಾವನೆಗಳೇ ಇಲ್ಲದೆ ಸ್ವೇಚ್ಛಾಚಾರ, ನಿರ್ಭಯ, ನಿರ್ಭಿತಿಯಿಂದ ಭಯ–ಭೀತಿಯ ಅರ್ಥಕಲ್ಪನೆಯನ್ನೇ ದೂರವಾಗಿಸಿದೆ.

ವಿನಾಶ ಕಾಲೇ ವಿಪರೀತ ಬುದ್ಧಿಯೆಂಬಂತೆ ಪ್ರಕೃತಿಗೆ ವಿರುದ್ಧವಾಗಿ ಹೋರಾಡತೊಡಗಿದ್ದಾನೆ.

ಪ್ರಕೃತಿಯು ತನ್ನ ಸಮತೋಲನೆ ತಪ್ಪಿ, ಬುದ್ದಿಗಳ ಭಾವ ಶೂನ್ಯನಾಗತೊಡಗಿ, ವಿಚಾರ ಶೂನ್ಯತೆ ಯಿಂದ ಸಂಕುಚಿತವಾಗಿ ಚಿಂತನೆ ಮಾಡುವವರ ಸಂಖ್ಯೆ ಹೆಚ್ಚಾಯಿತು.

ಭಾರತೀಯ ಸತ್ ಸಂಪ್ರದಾಯ, ಸಂಸ್ಕೃತಿ, ಮೌಲ್ಯಗಳು ತಮ್ಮ ಸಿರಿ ನೆಲೆ ಕಳೆದುಕೊಂಡು ರಾಜ್ಯ ವಿಲ್ಲದ ರಾಜನಂತಾಗತೊಡಗಿದೆ. ತತ್ಫಲವಾಗಿ ಹತ್ತಿರ ಹತ್ತಿರವಿದ್ದ ಹೃದಯ–ಹೃದಯಗಳ ಹೃದಯವಂತಿಕೆಯನ್ನು ದೂರವಾಗಿಸಿದೆ.

ಡಾ॥ಶೀಲ : ಹತ್ತಿರ ಹತ್ತಿರವಿದ್ದ ಹೃದಯ–ಹೃದಯಗಳ ಹೃದಯತವಂತಿಕೆಯನು ಮತ್ತೆ ಅಳವಡಿಸಿಕೊಳ್ಳುವುದು ಹೇಗೆ ?

ಡಾ॥ರಾಮು : ಸತ್ಯ, ಪ್ರೇಮ, ಧರ್ಮ, ಶಾಂತಿ, ಅಹಿಂಸೆ ಇವೇ ಮುಂತಾದ ಪ್ರಮುಖ ಮೌಲ್ಯಗಳನ್ನು ಹಾಗೂ ತ್ಯಾಗ, ತಾಳ್ಮೆ, ಸ್ವಾಭಿಮಾನ, ವಾತ್ಸಲ್ಯ, ಹಾಗೂ ಕೋಪ–ತಾಪ, ನಗು–ಅಳು, ಭಯ–ಭೀತಿ, ವ್ಯಾಕುಲ, ಆಸೂಯೆ ಮುಂತಾದ ಪೂರಕ ಮೌಲ್ಯಗಳನ್ನು ಜೀವನದಲ್ಲಿ ಅತಿ ಅವಶ್ಯ ಅಳವಡಿಸಿ ಕೊಳ್ಳುವುದರಿಂದ ಹೃದಯ–ಹೃದಯಗಳ ಹೃದಯತವಂತಿಕೆಯನು ಮತ್ತೆ ಪಡೆಯಬಹುದು

ಡಾ॥ಶೀಲ : ಈ ಹಿನ್ನಲೆಯಲ್ಲಿ ಜೀವನದ ಪೂರಕ ಮೌಲ್ಯಗಳ ಅರ್ಥ, ಮಹತ್ವ ಅವುಗಳ ಕೊರತೆಯ ಪರಿಣಾಮ, ದೈನಂದಿನ ಬದುಕಿನಲ್ಲಿ ಅವುಗಳ ಅವಶ್ಯಕತೆ ಬಗ್ಗೆ ಕಿಂಚಿತ್ ಅರಿವನ್ನು ಹೇಗೆ ಮೂಡಿಸಬಹುದು ?

ಡಾ॥ರಾಮು : ಜೀವನದ ಪೂರಕ ಮೌಲ್ಯಗಳ ಅರ್ಥ, ಮಹತ್ವ ಅವುಗಳ ಕೊರತೆಯ ಪರಿಣಾಮ, ದೈನಂದಿನ ಬದುಕಿನಲ್ಲಿ ಅವುಗಳ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸುವುದರಿಂದ ಕಿಂಚಿತ್ ಅರಿವನ್ನು ಮೂಡಿಸಬಹುದು.

## 8. ಮಾನವೀಯ ಮೌಲ್ಯಗಳನ್ನು ವರ್ಧಿಸುವ ವಿಧಾನಗಳು

ಡಾ॥ಶೀಲ : ಮಾನವೀಯ ಮೌಲ್ಯಗಳನ್ನು ವರ್ಧಿಸುವ ವಿಧಾನಗಳಾವುವು ?

ಡಾ॥ರಾಮು : ಶಾಲೆಗಳಲ್ಲಿ ಮಾನವೀಯ ಮೌಲ್ಯ ಶಿಕ್ಷಣವನ್ನು ನೀಡಲು ಹಲವಾರು ವಿಧಾನಗಳನ್ನು ಮತ್ತು ನೂರಾರು ಚಟುವಟಿಕೆಗಳನ್ನು ಬಳಸಬಹುದು.

ಪ್ರಾಸಂಗಿಕ ವಿಧಾನ ಅಥವಾ ಪರೋಕ್ಷ ವಿಧಾನಗಳಿಂದ ಶಾಲೆಗಳಲ್ಲಿ ಯಾವುದಾದರೂ ಒಂದು ಆಕಸ್ಮಿಕ ಪ್ರಸಂಗ, ಸನ್ನಿವೇಶ ಒದಗಿ ಬಂದಾಗ ಆ ಅವಕಾಶವನ್ನು ಶಿಕ್ಷಕರು ಉಪಯೋಗಿಸಿಕೊಂಡು ವಿದ್ಯಾರ್ಥಿಗಳಿಗೆ ಆ ಪ್ರಸಂಗ, ಘಟನೆಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುವುದು, ಸ್ಪಷ್ಟೀಕರಣ ನೀಡುವುದು, ನಿದರ್ಶನ ನೀಡುವುದು, ಮಾರ್ಗದರ್ಶನ ಮಾಡುವುದು ಇತ್ಯಾದಿಗಳ ಮೂಲಕ ಸೂಕ್ತ ಅಪೇಕ್ಷಿತ ಮೌಲ್ಯ ಅಥವಾ ವರ್ತನೆ, ವರ್ಧನೆ ಮಾಡಲು ಮತ್ತು ಅನಪೇಕ್ಷಿತ ವರ್ತನೆ ಅಥವಾ ಮೌಲ್ಯ ಕೈಬಿಡಲು ಸೂಕ್ತ ಉತ್ತೇಜನ ಸಲಹೆ ಮತ್ತು ಬುದ್ಧಿವಾದವನ್ನು ನೀಡಬಹುದು.

ಉದಾಹರಣೆ :

(1) ತಡವಾಗಿ ಬರುವ ಮಕ್ಕಳು :

ತಡವಾಗಿ ಬರುವುದಕ್ಕೆ ಕಾರಣ ಕೇಳುವುದು. ಕಾರಣ ಸೂಕ್ತವಾಗಿದ್ದರೆ ಅದನ್ನು ಹೇಗೆ ಹೊಂದಿಸಿಕೊಂಡು ಶಾಲೆಗೆ ಕ್ರಮವಾಗಿ ಬರುವುದೆಂದು ಅರಿವು ಮೂಡಿಸುವುದು.

ಸೂಕ್ತ ಕಾರಣಗಳಿಲ್ಲದಿದ್ದರೆ, ತಡವಾಗಿ ಬರುವುದರ ಪರಿಣಾಮದಿಂದ ಉಂಟಾಗುವ ಫಲಾಫಲಗಳನ್ನು ಮನಮುಟ್ಟುವಂತೆ ತಿಳಿಹೇಳುವುದು.

ಶಿಕ್ಷಕರು ಅವರವರ ಶಾಲಾ ಪರಿಸರಕ್ಕೆ ಹೊಂದುವಂತೆ ಮತ್ತು ಅವರ ಅನುಭವಗಳಿಗೆ ಪೂರಕವಾಗಿ ಲಭ್ಯವಾಗುವ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಇನ್ನೂ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳ ಬಹುದು.

# 9. ಸಂಸ್ಕೃತಿ ಮತ್ತು ನಾಗರಿಕತೆ

## ವಾದ – ಸಂವಾದ

ಡಾ॥ಶೀಲ : ಮಾನವನ ಇತಿಹಾಸದಲ್ಲಿ ಹೆಚ್ಚು ಪ್ರಾಮುಖ್ಯ ಪಡೆದು, ಗಮನಾರ್ಹ ರೀತಿಯಲ್ಲಿ ಬಳಕೆಯಲ್ಲಿರುವ ಇನ್ನೊಂದು ಪದ ಸಂಸ್ಕೃತಿ.

ಡಾ॥ರಾಮು : ಮನುಷ್ಯನಿಗೆ ಮಾತ್ರ ಸಂಸ್ಕೃತಿ ಇರಲು ಸಾಧ್ಯ. ಸಂಸ್ಕೃತಿ ಎಂಬ ಪದಕ್ಕೆ ವಿಶಾಲವಾದ ಮತ್ತು ಅರ್ಥಗರ್ಭಿತವಾದ ವ್ಯಾಖ್ಯಾನ ಉಂಟು.

ಡಾ॥ಶೀಲ : ನಾಗರಿಕತೆ ಸಮಗ್ರ ಸಂಸ್ಕೃತಿಯ ಒಂದು ಮೆಟ್ಟಿಲು ಅಥವಾ ಹಂತ ಮಾತ್ರ.

ಡಾ॥ರಾಮು : ಮಾನವಶಾಸ್ತ್ರಜ್ಞರು ಸಂಸ್ಕೃತಿ ಎಂಬ ಪದವನ್ನು ವ್ಯಾಪಕವಾದ ಅರ್ಥದಲ್ಲಿ ಬಳಸಿದ್ದಾರೆ. ಅವರು ಅದನ್ನು ಭೌತ ಸಂಸ್ಕೃತಿ ಅಥವಾ ನಾಗರಿಕತೆ ಮತ್ತು ಅಭೌತ ಸಂಸ್ಕೃತಿ ಎಂದು ವಿಂಗಡಿಸಿದ್ದಾರೆ.

ಡಾ॥ಶೀಲ : ವಾಸದ ಮನೆಗಳು, ರೇಡಿಯೋ, ಉಡುಗೆ–ತೊಡುಗೆಗಳು, ಪಾತ್ರೆ, ಉಪಕರಣಗಳು, ಗ್ರಂಥಗಳು ಮುಂತಾದ ವಾಸ್ತವಿಕ ವಸ್ತುಗಳನ್ನು ಒಳಗೊಂಡದ್ದು ಭೌತ ಸಂಸ್ಕೃತಿ.

ಮಾನವನ ಸೃಷ್ಟಿಯೆನಿಸಿದ ಭಾಷೆ, ಸಾಹಿತ್ಯ, ಕಲೆ, ಧರ್ಮ, ವಿಜ್ಞಾನ, ಶಾಸನ ಮುಂತಾದ ಭಾವನಾಪ್ರಧಾನ ವಸ್ತುಗಳಿಗೆ ಸಂಬಂಧಿಸಿದ್ದು ಅಭೌತ ಸಂಸ್ಕೃತಿ.

ಡಾ॥ರಾಮು : ಸಮಾಜದ ಅಳಿವು–ಉಳಿವುಗಳು ಹೆಚ್ಚಾಗಿ ಸಂಸ್ಕೃತಿಯನ್ನು ಅವಲಂಬಿಸಿವೆ. ಮನುಷ್ಯನ ರೀತಿ–ನೀತಿಗಳು, ಸಾಮಾಜಿಕ ಪದ್ಧತಿ ಸಂಪ್ರದಾಯಗಳು, ಅವನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಭಾವನೆಗಳು, ಇವೆಲ್ಲವನ್ನೂ ಒಳಗೊಂಡ ವ್ಯವಸ್ಥಿತ ಜೀವನ ಕ್ರಮವೇ ಸಂಸ್ಕೃತಿ.

ಡಾ॥ಶೀಲ : ವಿಶಿಷ್ಟ ಸಮಾಜವೊಂದರ ಸದಸ್ಯರು ಪಾಲುಗೊಂಡ ವಂಶಪಾರಂಪರ್ಯವಾಗಿ ಸಾಗಿಸುವ ಜ್ಞಾನ, ಮನೋಭಾವಗಳು ಮತ್ತು ರೂಢಿಯಾದ ವರ್ತನಾರೂಪಿಕೆಗಳ ಒಟ್ಟು ಮೊತ್ತವೇ ಸಂಸ್ಕೃತಿ.

ಡಾ॥ರಾಮು : ಸಾಮಾಜಿಕ, ರಾಜಕೀಯ, ಆರ್ಥಿಕ, ಬೌದ್ಧಿಕ, ಕಲಾ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಒಂದು ಜನಸಮುದಾಯ ಸಾಧಿಸಿದ ಮಹತ್ತರ ಸಾಧನೆಗಳು ಸಂಸ್ಕೃತಿ.

ಡಾ॥ಶೀಲ : ಜೀವನದಲ್ಲಿ ಕಾಣಬಹುದಾದ ಸತ್ಯ, ಸೌಂದರ್ಯ, ಸೌಜನ್ಯಗಳನ್ನು ಗುರುತಿಸಿ ಅವನ್ನು ಮೆಚ್ಚಿಕೊಳ್ಳುವ ಪರಿಶುದ್ಧ ಮಾನಸಿಕ ಮತ್ತು ಬೌದ್ಧಿಕ ಸ್ಥಿತಿಯನ್ನು ಸಂಸ್ಕೃತಿಯೆನ್ನಬಹುದು.

ಡಾ॥ರಾಮು : ವ್ಯಕ್ತಿಯೊಬ್ಬನನ್ನು ಸಭ್ಯನನ್ನಾಗಿ, ಸಂಭಾವಿತನನ್ನಾಗಿ ಮಾಡುವ ಎಲ್ಲ ಸದ್ಗುಣಗಳ ಸಮುದಾಯ ಸಂಸ್ಕೃತಿ,

ಡಾ॥ಶೀಲ : ಮಾನವ ಸಮಾಜದ ಸದಸ್ಯನಾಗಿ ಪಡೆದ ಜ್ಞಾನ, ನಂಬಿಕೆ, ಕಲೆ, ನೈತಿಕ ನಿಯಮಗಳು, ಕಾನೂನು, ಸಂಪ್ರದಾಯ ಮತ್ತು ಇನ್ನಾವುದೇ ಸಾಮರ್ಥ್ಯಗಳನ್ನು ಒಳಗೊಂಡ ಅಖಂಡವಾದ ಸಂಕೀರ್ಣ ವ್ಯವಸ್ಥೆ ಸಂಸ್ಕೃತಿ.

ಡಾ॥ರಾಮು : ಸಂಸ್ಕೃತಿ ಇಲ್ಲದಿದ್ದರೆ ಜೀವನ ಬರಡು ಮತ್ತು ನಿರರ್ಥಕವೆನಿಸುತ್ತದೆ. ಆದ್ದರಿಂದಲೆ ಶತ ಶತಮಾನಗಳಿಂದಲೂ ಪ್ರತಿಯೊಂದು ಸಮಾಜ, ರಾಷ್ಟ್ರ ತನ್ನದೇ ಆದ ಸಂಸ್ಕೃತಿ ಮತ್ತು ಜೀವನಕ್ರಮವನ್ನು ರೂಪಿಸಿಕೊಂಡು ಬಂದಿದೆ. ಈಜಿಪ್ಟಿನವರು, ಸುಮೇರಿಯನರು, ಭಾರತೀಯರು, ಚೀನೀಯರು,

ಜಪಾನೀಯರು, ಪರ್ಷಿಯನರು, ಗ್ರೀಕರು, ರೋಮನರು, ಬ್ರಿಟಿಷರು, ಫ್ರೆಂಚರು ಎಲ್ಲರೂ ತಮ್ಮ ಸಂಸ್ಕೃತಿಯನ್ನು ಬೆಳೆಸಿ, ಪೋಷಿಸಿಕೊಂಡು ಬಂದಿದ್ದಾರೆ.

## ನಾಗರಿಕತೆ

ಡಾ॥ಶೀಲ : ನಾಗರಿಕತೆ ಮತ್ತು ಸಂಸ್ಕೃತಿಗಳು ಹೊರನೋಟಕ್ಕೆ ಬೇರೆ ಎನಿಸದಿದ್ದರೂ ಇವೆರಡರ ನಡುವೆ ವ್ಯತ್ಯಾಸಗಳನ್ನು ಕಾಣಬಹುದು. ನಾಗರಿಕತೆ ಸಂಚಿತ ಸ್ವರೂಪವುಳ್ಳದ್ದು. ಅದು ನಿರಂತರವಾಗಿ ಬೆಳೆಯುತ್ತಲೇ ಇರುತ್ತದೆ.

ಡಾ॥ರಾಮು : ಪ್ರತಿಯೊಂದು ತಲೆಮಾರಿನ ಜನಾಂಗವೂ ಜ್ಞಾನವನ್ನು ರಕ್ಷಿಸಿಡುವುದರ ಜೊತೆಗೆ ತನ್ನದೇ ಆದ ಪ್ರಮುಖ ಹಾಗೂ ವಿಶಿಷ್ಟ ಕೊಡುಗೆಯನ್ನು ನೀಡಿ ನಾಗರಿಕತೆಯ ಬೆಳವಣಿಗೆಗೆ ಕಾರಣವಾಗುತ್ತದೆ; ನಾಗರಿಕತೆಯ ಸಾಧನ ಸಲಕರಣೆಗಳಲ್ಲಿ ಸುಧಾರಣೆ ಮಾಡುವುದರ ಜೊತೆಗೆ ಹೆಚ್ಚಳವನ್ನು ಸಾಧಿಸುತ್ತದೆ.

॥ಶೀಲ : ಪ್ರತಿಯೊಂದು ಹೊಸ ಪ್ರಯೋಗವೂ ಒಂದು ವಸ್ತುವಿನ ಕಾರ್ಯಸಾಮರ್ಥ್ಯ ಮತ್ತು ಉಪಯೋಗವನ್ನು ಹೆಚ್ಚಿಸುವುದಕ್ಕೆ ಸಹಾಯಕವಾಗುತ್ತದೆ. ಬ್ಯಾಂಕಿಂಗ್ ಪದ್ಧತಿ ಹೆಚ್ಚು ಹೆಚ್ಚು ಪ್ರಯೋಗ ಮತ್ತು ಅನುಭವಗಳಿಂದ ಪರಿಪೂರ್ಣತೆ ಪಡೆಯುವ ಸಾಧ್ಯತೆ ಉಂಟು.

ಡಾ॥ರಾಮು : ಹಿಂದಿನ ಮಣ್ಣಿನ ಹಣತೆಗಳಿಗಿಂತ ಇಂದಿನ ವಿದ್ಯುಚ್ಛಕ್ತಿ ದೀಪಗಳು ಅಪಾರ ಸುಧಾರಣೆಯ ಸೂಚಕಗಳಾಗಿವೆ. ಅದೇ ರೀತಿ ಇಂದಿನ ಸಾರಿಗೆ ಸಾಧನಗಳಾದ ರೈಲು, ಹಡಗು, ವಿಮಾನಗಳ ವೇಗ, ಸಾಮರ್ಥ್ಯ ಮತ್ತು ವಿನ್ಯಾಸಗಳಲ್ಲಿ ತ್ವರಿತ ಬದಲಾವಣೆಗಳಾಗುತ್ತಿರುವುದನ್ನು ಕಾಣಬಹುದು. ಆದ್ದರಿಂದಲೇ ನಾಗರಿಕತೆಯನ್ನು ಪ್ರಗತಿಯ ಸೂಚನೆ ಅಥವಾ ಮುನ್ನಡೆ ಎಂದು ಕರೆಯಲಾಗಿದೆ.

ಡಾ॥ಶೀಲ : ಸಂಸ್ಕೃತಿ ಕೂಡುತ್ತ ಹೋಗುವಂಥದಲ್ಲ. ಸಂಸ್ಕೃತಿ ಯಾವಾಗಲೂ ಮುನ್ನಡೆಯುತ್ತಲೇ ಇರುತ್ತದೆಂದು ಹೇಳಲು ಬರುವುದಿಲ್ಲ. ಅದು ಮಂದಗತಿಯಲ್ಲಿ ಮುಂದುವರಿಯಬಹುದು ಅಥವಾ ಅನೇಕ ವೇಳೆ ಇಳಿಮುಖವಾಗಲೂಬಹುದು.

ಡಾ॥ರಾಮು : ಸಾಹಿತ್ಯ, ಕಲೆ, ಸಂಗೀತ, ಧರ್ಮ ಮತ್ತು ನೈತಿಕ ಕ್ಷೇತ್ರಗಳಲ್ಲಿ ಒಂದು ಕಾಲದಲ್ಲಿ ಆದ ಉತ್ಕೃಷ್ಟ ಸಾಧನೆಗಳು ಮತ್ತೆ ಅಸಾಧ್ಯವಾಗಬಹುದು. ವ್ಯಾಸ, ವಾಲ್ಮೀಕಿ, ಶೇಕ್ಸ್‌ಪಿಯರ್, ಮಿಲ್ಟನ್ ಮುಂತಾದ ಸೃಷ್ಟ್ಯಾತ್ಮಕ ಲೇಖಕರ ಗ್ರಂಥಗಳಲ್ಲಿ ಕಂಡುಬರುವ ಅಸಾಮಾನ್ಯ ಗುಣಲಕ್ಷಣಗಳನ್ನು ಇತರರ ಗ್ರಂಥಗಳಲ್ಲಿ ಕಾಣದೆ ಹೋಗಬಹುದು.

ಡಾ॥ಶೀಲ : ಅಜಂತ ಮತ್ತು ಎಲ್ಲೋರದ ಚಿತ್ರಗಳು ಅಸಾಧಾರಣ ಪ್ರತಿಭೆಯಿಂದ ಕೂಡಿದವು. ಮೈಕೆಲ್ಯಾಂಜೆಲೋ, ಲೀಯೊನಾರ್ಡೋ ದ ವಿಂಚಿ ಮುಂತಾದ ಪ್ರತಿಭಾವಂತರ ಕಲಾಕೃತಿಗಳನ್ನು ಮೀರಿಸುವಂಥವು ಬಂದಿವೆಯೇ ಎಂದು ಯೋಚಿಸಬೇಕಾಗಬಹುದು. ಸಂಸ್ಕೃತಿ ಸಂಚಿತವಾಗುವುದಲ್ಲವೆನ್ನಲು ಇವು ನಿದರ್ಶನಗಳು. ಸಂಸ್ಕೃತಿಯನ್ನು ಪ್ರತಿಯೊಂದು ಬಾರಿಯೂ ಹೊಸದಾಗಿ ಗಳಿಸಬೇಕಾಗುತ್ತದೆ.

ಡಾ॥ರಾಮು : ನಾಗರಿಕತೆಯ ಸಾಧನಗಳ ಕಾರ್ಯಶಕ್ತಿಯನ್ನು, ಉಪಯೋಗವನ್ನು ನಿಖರವಾಗಿ ಅಳೆಯಬಹುದು. ನಾಗರಿಕತೆಯ ಸಂಕೇತಗಳೆನಿಸಿದ ಅನೇಕ ಪ್ರಯೋಜನಕಾರಿ ವಸ್ತುಗಳನ್ನೂ ಅವುಗಳ ಪರಿಣಾಮಗಳನ್ನೂ ಹೋಲಿಸಿ ನೋಡುವಾಗ ಉತ್ತಮ ದರ್ಜೆಯದು ಯಾವುದು, ಕೆಳಮಟ್ಟದ್ದು ಯಾವುದು ಎಂಬುದನ್ನು ತಿಳಿಯಬಹುದು.

**ಡಾ॥ಶೀಲ** : ಆಧುನಿಕ ನಾಗರಿಕತೆಯ ಸಾಧನಗಳೆನಿಸಿದ ಮೋಟಾರು, ವಿದ್ಯುಚ್ಚಾಲಿತ ಮಗ್ಗ, ಲಾರಿ, ಉಗಿಬಂಡಿ, ವಿಮಾನ, ಟ್ರ್ಯಾಕ್ಟರ್ ಮುಂತಾದವು ಪರಂಪರಾನುಗತವಾಗಿ ಬಂದ ಸಾಧನಗಳ ಕಾರ್ಯಶಕ್ತಿಗಿಂತ ಹೆಚ್ಚಿನವು.

**ಡಾ॥ರಾಮು** : ಎತ್ತಿನ ಗಾಡಿಗಿಂತ ಲಾರಿ ವೇಗವಾಗಿ ಚಲಿಸುತ್ತದೆ. ಲಾರಿಗಿಂತಲೂ ವಿಮಾನ ಹೆಚ್ಚು ವೇಗದಲ್ಲಿ ಚಲಿಸುತ್ತದೆ. ನೇಗಿಲಿಗಿಂತ ಟ್ರ್ಯಾಕ್ಟರ್ ಹೆಚ್ಚು ಉತ್ತಮ ಮತ್ತು ಅನುಕೂಲವಾದ್ದು. ಕೈಮಗ್ಗಕ್ಕಿಂತ ವಿದ್ಯುಚ್ಚಾಲಿತ ಮಗ್ಗದಿಂದ ಅಧಿಕ ಉತ್ಪಾದನೆ ಸಾಧ್ಯ. ಹಿಂದಿನ ಅದಲು ಬದಲು ಪದ್ಧತಿಗಿಂತ ಆಧುನಿಕ ಯುಗದ ಹಣ ಚಲಾವಣೆ ಪದ್ಧತಿ ಉತ್ತಮವಾದದ್ದು ಎನ್ನಬಹುದು.

**ಡಾ॥ಶೀಲ** : ಸಂಸ್ಕೃತಿಯ ಸಾಧನಗಳು ಮತ್ತು ವಿಷಯಗಳ ಮೌಲ್ಯವನ್ನು ಹಾಗೂ ಪ್ರಯೋಜನವನ್ನು ಅಳೆಯಲು ನಿಖರವಾದ ಯಾವ ಮಾನದಂಡವೂ ಇಲ್ಲ. ಅಭಿರುಚಿಯ ಬಗ್ಗೆ ಇದೇ ಸರಿ ಎಂದು ಹೇಳಲು ಬರುವುದಿಲ್ಲ.

**ಡಾ॥ರಾಮು** : ಪಿಕಾಸೋನ ಚಿತ್ರಗಳು ಕೆಲವರಿಗೆ ಶ್ರೇಷ್ಠ ಕಲಾಕೃತಿಗಳೆನಿಸಿದರೆ, ಕೆಲವರಿಗೆ ಅಸಹ್ಯವೆನಿಸಬಹುದು. ಕೆಲವರಿಗೆ ಕಾಳಿದಾಸನ ನಾಟಕಗಳು ಮೆಚ್ಚಿಗೆಯಾದರೆ ಮತ್ತೆ ಕೆಲವರಿಗೆ ಭಾಸನ ನಾಟಕಗಳು ಇಷ್ಟವಾಗಬಹುದು.

**ಡಾ॥ಶೀಲ** : ಕೆಲವರಿಗೆ ಜನಪದ ಗೀತೆಗಳು ಹೆಚ್ಚು ಸಂತೋಷ ನೀಡಿದರೆ ಮತ್ತೆ ಕೆಲವರಿಗೆ ಕರ್ಣಾಟಕ ಶಾಸ್ತ್ರೀಯ ಸಂಗೀತ ಪ್ರಿಯವೆನಿಸಬಹುದು. ಈ ವಿಚಾರದಲ್ಲಿ ಸರ್ವಸಮ್ಮತವಾದ ಉತ್ತರ ದೊರೆಯುವುದು ಕಷ್ಟ.

**ಡಾ॥ರಾಮು** : ನಾಗರಿಕತೆಯ ಸಾಧನಗಳನ್ನು ಒಂದು ನಾಡಿನಿಂದ ಸುಲಭವಾಗಿ ಮತ್ತು ತೀವ್ರಗತಿಯಲ್ಲಿ ಎರವಲು ಪಡೆಯಬಹುದು ಮತ್ತು ಇನ್ನೊಂದು ನಾಡಿಗೆ ಸಾಗಿಸಲೂಬಹುದು. ಪ್ರಗತಿಪರ ರಾಷ್ಟ್ರಗಳು ನಿರ್ಮಿಸಿದ ಆಧುನಿಕ ನಾಗರಿಕತೆಯ ಸಾಧನ ಸಲಕರಣೆಗಳನ್ನು ಹಿಂದುಳಿದ ರಾಷ್ಟ್ರಗಳು ಸುಲಭವಾಗಿ ಅಳವಡಿಸಿಕೊಳ್ಳಬಹುದು.

**ಡಾ॥ಶೀಲ** : ಆಧುನಿಕ ನಾಗರಿಕತೆಯ ಫಲಗಳೆನಿಸಿದ ರೇಡಿಯೊ, ದೂರದರ್ಶನ, ದೂರವಾಣಿ, ಗಡಿಯಾರ, ಕಾರು ಮುಂತಾದವು ಯಾವ ಒಂದು ನಾಡಿನ ಸ್ವಾಮ್ಯವಾಗಿ ಉಳಿದಿಲ್ಲ. ಈ ವಸ್ತುಗಳ ಬಳಕೆಯನ್ನು ಪ್ರಪಂಚದಾದ್ಯಂತ ಕಾಣಬಹುದು.

**ಡಾ॥ರಾಮು** : ಯೋಗ್ಯ ಶಿಕ್ಷಣ ಮತ್ತು ಉತ್ತಮ ತರಬೇತಿಯಿಂದ ಎಂಥ ಜಟಿಲ ಯಂತ್ರವನ್ನಾದರೂ ಉಪಯೋಗಿಸುವ ವಿಧಾನವನ್ನು ಅರಿಯಬಹುದು. ಗೃಹಕೈಗಾರಿಕೆಗಳ ಬದಲು ಬೃಹತ್ ಕೈಗಾರಿಕೆಗಳು ಬೆಳೆದಿವೆ. ಭವ್ಯ ಸಾಧನಗಳನ್ನು, ಹೆದ್ದಾರಿಗಳನ್ನು ನಿರ್ಮಿಸುವ ಹೊಸ ಹೊಸ ವಿಧಾನಗಳನ್ನು ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಕಾಣಬಹುದು.

**ಡಾ॥ಶೀಲ** : ಆದರೆ ಇಷ್ಟು ಸುಲಭವಾಗಿ, ಸರಳವಾಗಿ ಸಂಸ್ಕೃತಿಯ ಸಾಧನಗಳನ್ನು ಅಳವಡಿಸಿಕೊಳ್ಳುವುದು ಅಸಾಧ್ಯ. ಎಂದರೆ ಸಂಸ್ಕೃತಿಯ ಹರಿವು ನಾಡಿನಿಂದ ನಾಡಿಗೆ ಸಾಧ್ಯವಿಲ್ಲವೆಂದಲ್ಲ. ಆದರೆ ಅದು ಸಾವಕಾಶವಾಗಿ ಹಂತಹಂತವಾಗಿ ಸಾಗುತ್ತದೆ. ಏಕೆಂದರೆ ಯಾವುದೇ ಸಂಸ್ಕೃತಿಯಲ್ಲಾದರೂ ಅವರದೇ ಆದ ವಾಸ್ತವಿಕ ಮೌಲ್ಯಗಳನ್ನು ಅಥವಾ ಅಂತಃಸತ್ತ್ವ ಇರುತ್ತದೆ. ಆ ಅಮೂಲ್ಯ ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳಲು ತುಂಬ ಕಷ್ಟವಾಗುತ್ತದೆ. ಅದಕ್ಕೆ ಸಂಸ್ಕಾರದ ನೆರವು ಅಗತ್ಯ.

ಡಾ॥ರಾಮು : ಪಾಶ್ಚಾತ್ಯರ ನಾಗರಿಕತೆಯನ್ನು ಪೌರಸ್ತ್ಯರು ಅನುಕರಿಸಬಹುದೇ ಹೊರತು ಅವರ ಸಂಸ್ಕೃತಿಯನ್ನಲ್ಲ. ಪಾಶ್ಚಾತ್ಯ ಸಂಸ್ಕೃತಿಯನ್ನು ನಿಧಾನವಾಗಿ ಸಮೀಕರಿಸಿಕೊಳ್ಳಬಹುದು. ಆದರೆ ಅದರಿಂದ ಹಳೆಯ ಸಂಸ್ಕೃತಿಯ ಸಂಪೂರ್ಣ ಸ್ಥಾನಪಲ್ಲಟ ಸಾಧ್ಯವಿಲ್ಲ. ಏಕೆಂದರೆ ಸಂಸ್ಕೃತಿ ಒಂದು ಜನಾಂಗದ ಅಸಾಧಾರಣ ಗುಣಲಕ್ಷಣಗಳನ್ನು ನೇರವಾಗಿ ಅಭಿವ್ಯಕ್ತಗೊಳಿಸುತ್ತದೆ.

ಡಾ॥ಶೀಲ : ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಪ್ರಭಾವದಿಂದಾಗಿ ಸ್ವಲ್ಪ ಬದಲಾಗುವುದು ಸಾಧ್ಯ. ಅಲ್ಲದೆ ಸಂಸ್ಕೃತಿಯ ಸಾಧನಗಳು ಸಮಾನಧರ್ಮದ ಅಥವಾ ಸಮಾನಾಭಿರುಚಿಯ ವ್ಯಕ್ತಿಗಳಿಗೆ ಮಾತ್ರ ಸಾಧ್ಯ.

ಡಾ॥ರಾಮು : ಕಲಾವಿದನ ಮನೋಧರ್ಮ ಮತ್ತು ಗುಣಗಳಿಲ್ಲದವನು ಕಲೆಯ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸುವುದಾಗಲಿ ಶಾಸ್ತ್ರೀಯ ಸಂಗೀತದ ಬಗ್ಗೆ ತಿಳುವಳಿಕೆ ಇಲ್ಲದವನು ಅದರಲ್ಲಿ ಅಭಿರುಚಿ ಬೆಳೆಸಿಕೊಳ್ಳುವುದಾಗಲಿ ಸಾಧ್ಯವಾಗದು.

ಡಾ॥ಶೀಲ : ಮಿಲ್ಟನ್ ಅಥವಾ ರವೀಂದ್ರನಾಥ ಠಾಕೂರರ ಸಾಹಿತ್ಯ ಮೌಲ್ಯಗಳ ಬಗ್ಗೆ ಸಾಮಾನ್ಯ ವ್ಯಕ್ತಿ ಏನೂ ಹೇಳಲಾರ. ಆದ್ದರಿಂದಲೇ ಆರ್ನಾಲ್ಡ್ ಟಾಯ್ನ್‌ಬಿ ಹೇಳುವಂತೆ, ಪಾಶ್ಚಾತ್ಯ ತಂತ್ರವಿದ್ಯೆಯನ್ನು ಅಥವಾ ವಿಧಾನವನ್ನು ರಫ್ತು ಮಾಡುವುದು ಪ್ರಪಂಚದಲ್ಲಿ ವ್ಯಾಪಾರ ದೃಷ್ಟಿಯಿಂದ ಸುಲಭ.

ಡಾ॥ರಾಮು : ಆದರೆ ಒಬ್ಬ ಪಾಶ್ಚಾತ್ಯ ಕವಿ ಅಥವಾ ಸಂತನಿಗೆ ಪಾಶ್ಚಾತ್ಯನಲ್ಲದವನ ಆತ್ಮದಲ್ಲಿ ತನ್ನಲ್ಲಿನ ಆಧ್ಯಾತ್ಮಿಕ ಜ್ಯೋತಿಯನ್ನು ಪ್ರಜ್ವಲಿಸುವಂತೆ ಮಾಡುವುದು ಅತ್ಯಂತ ಕಠಿಣವಾದ ಕೆಲಸ.

ಡಾ॥ಶೀಲ : ಪಾಶ್ಚಾತ್ಯ ರಾಷ್ಟ್ರಗಳು ಪೌರಾಸ್ತ್ಯರ ಪುರಾತನ ಸಂಸ್ಕೃತಿಯ ಸಾಧನಗಳನ್ನು ಸುಲಭವಾಗಿ ತಮ್ಮವನ್ನಾಗಿ ಮಾಡಿಕೊಳ್ಳಲಾರವು. ಅದೇ ರೀತಿ ಪಾಶ್ಚಾತ್ಯ ಸಂಸ್ಕೃತಿಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪೌರಸ್ತ್ಯರಿಗೂ ಅಷ್ಟೇ ಕಠಿಣವೆನಿಸುತ್ತದೆ.

ಡಾ॥ರಾಮು : ನಾಗರಿಕತೆ ಬಾಹ್ಯಪ್ರಧಾನವಾದ್ದು ಮತ್ತು ಭೌತಿಕ ಸಂಪತ್ತಿನಿಂದ ಕೂಡಿದ್ದು, ಆದರೆ ಸಂಸ್ಕೃತಿ ಅಂತರಂಗಕ್ಕೆ ಸೇರಿದ್ದು.

ಡಾ॥ಶೀಲ : ನಾಗರಿಕತೆ ಭೌತಿಕ ಸಂಪತ್ತಿಗೆ ಹೆಚ್ಚು ಆದ್ಯತೆ ನೀಡುತ್ತದೆ. ಬಾಹ್ಯ ಜೀವನಕ್ಕೆ ಬೇಕಾದ ಹಲವಾರು ಬೇಡಿಕೆಗಳನ್ನು ಪೂರೈಸಿಕೊಳ್ಳಲು ರಾಷ್ಟ್ರ, ಮನೆ, ವಿದ್ಯಾಲಯ, ಬ್ಯಾಂಕುಗಳು, ಕಾರ್ಖಾನೆಗಳು, ಚಿತ್ರಮಂದಿರ ಮೊದಲಾದವನ್ನು ಮಾನವ ನಿರ್ಮಿಸಿಕೊಂಡ. ವ್ಯಾಪಾರ, ವ್ಯವಹಾರ, ಶಾಸನಗಳು, ಸಂಚಾರ ಮತ್ತು ಸಮಾಚಾರದ ಸಾಧನಗಳನ್ನು ಮಾಡಿಕೊಂಡ.

ಡಾ॥ರಾಮು : ಈ ಸಾಧನ ಸಲಕರಣೆಗಳೆಲ್ಲವೂ ಮಾನವನ ಬಾಹ್ಯ ಜೀವನಕ್ಕೆ ಮತ್ತು ಭೌತಿಕ ಪ್ರಗತಿಗೆ ಸಂಬಂಧಿಸಿದ್ದು. ನಾಗರಿಕತೆಯಿಂದ ಭೌತಿಕ ಜೀವನದ ಭೋಗಭಾಗ್ಯಗಳೆಲ್ಲವನ್ನೂ ಪಡೆಯಬಹುದು. ನಾಗರಿಕತೆಯ ಸಾಧನಗಳು ಸಾರ್ವತ್ರಿಕಗಳೆನಿಸಿ ಮಾನವನನ್ನು ಪ್ರಪಂಚದ ಸುಖದೆಡೆ ಸೆಳೆಯುತ್ತದೆ.

ಡಾ॥ಶೀಲ : ಸಂಸ್ಕೃತಿ ಇದಕ್ಕೆ ವಿರುದ್ಧವಾದದ್ದು. ಅದು ಮಾನವನ ಅಂತರಂಗ ಜೀವನಕ್ಕೆ ಸಂಬಂಧಿಸಿದ್ದು. ಅದು ಆತ್ಮಸಂಪತ್ತು ಮತ್ತು ಸಂತೋಷಕ್ಕೆ ಹೆಚ್ಚು ಆದ್ಯತೆ ನೀಡುವುದು.

ಡಾ॥ರಾಮು : ಮನುಷ್ಯನ ಅಂತರಂಗದ ಭಾವನೆಗಳು, ಯೋಚನೆಗಳು, ಧ್ಯೇಯ ಮತ್ತು ನೈತಿಕ ಮೌಲ್ಯಗಳನ್ನು ಹೆಚ್ಚು ಪ್ರಧಾನವಾದದ್ದು. ಧರ್ಮ, ನೀತಿ, ಕಲೆ, ನಂಬಿಕೆ ಇವೆಲ್ಲವೂ ಮಾನವನ ಅಂತರಂಗಕ್ಕೆ ಸಂಬಂಧಿಸಿದವು.

**ಡಾ॥ಶೀಲ :** ವ್ಯಕ್ತಿಯ ಕ್ರಿಯೆಗಳಲ್ಲಿ, ಆಚಾರ-ವಿಚಾರಗಳಲ್ಲಿ, ಧರ್ಮ ಸಾಹಿತ್ಯ ಕಲೆಗಳಲ್ಲಿ ಅಭಿವ್ಯಕ್ತಗೊಳ್ಳುವ ಮಾನವ ಸ್ವಭಾವವೇ ಸಂಸ್ಕೃತಿ. ಸಂಸ್ಕೃತಿ ನಮ್ಮಲ್ಲಿ ಸಭ್ಯತೆ, ಯೋಗ್ಯ ನಡವಳಿಕೆ, ವಿನಯ, ಸೌಜನ್ಯ, ಸರಳತೆ, ಋಜುಮಾರ್ಗ ಮುಂತಾದ ಸದ್ಗುಣಗಳನ್ನು ಮೂಡಿಸುವಂಥದು.

**ಡಾ॥ರಾಮು :** ಸುಸಂಸ್ಕೃತ ವ್ಯಕ್ತಿ ಸರಳ ಉದಾತ್ತ ನೀತಿಯವನೂ ಸಂಯಮಿಯೂ ಆಗಿದ್ದು, ಸಂತೃಪ್ತ ಜೀವನ ನಡೆಸುವವನು. ಜೀವನದಲ್ಲಿ ಪರಿಪೂರ್ಣ ಸಂತೋಷವನ್ನು ಪಡೆಯುವ ಸಾಹಸದ ಫಲವೇ ಸಂಸ್ಕೃತಿ.

**ಡಾ॥ಶೀಲ :** ಪರಿಪೂರ್ಣತೆಯ ಬಯಕೆಯೇ ಸಂಸ್ಕೃತಿಯ ಉಗಮಸ್ಥಾನ.

**ಡಾ॥ರಾಮು :** ವೈಜ್ಞಾನಿಕ ಕುತೂಹಲ ಸಂಸ್ಕೃತಿಯ ಮೂಲವಲ್ಲ.

**ಡಾ॥ಶೀಲ :** ಪರಿಪೂರ್ಣತೆಯ ಪ್ರೇಮ ಮತ್ತು ಅಧ್ಯಯನ-ಇವು ಸಂಸ್ಕೃತಿಯ ಮೂಲ ಸಾಮಗ್ರಿ.

**ಡಾ॥ರಾಮು :** ಹೃದಯದ ಪರಿಪಕ್ವತೆಗೆ ಪರಿಪೂರ್ಣತೆಯ ಅಧ್ಯಯನ ನೆರವಾದಾಗ ಅದು ಸಂಸ್ಕೃತಿಯೆನಿಸುತ್ತದೆ.

**ಡಾ॥ಶೀಲ :** ವ್ಯಕ್ತಿ ವಿಕಾಸವೇ ಸಂಸ್ಕೃತಿ. ಸಂಸ್ಕೃತಿ ಬಾಳನ್ನು ಹದಗೊಳಿಸುತ್ತದೆ; ಆತ್ಮಶಿಕ್ಷಣ ಮತ್ತು ನಿಗ್ರಹಕ್ಕೆ ಅನುಕೂಲ ಮಾಡಿಕೊಡುತ್ತದೆ.

**ಡಾ॥ರಾಮು :** ಸಂಸ್ಕೃತಿ ಜನಾಂಗದ ಅಂತರಾತ್ಮವನ್ನು ಪ್ರತಿಬಿಂಬಿಸುತ್ತದೆ. ಆತ್ಮಸಂಪತ್ತಿನ ಪ್ರಗತಿಗಾಗಿ ಶ್ರಮಿಸುತ್ತದೆ.

**ಡಾ॥ಶೀಲ :** ನಮ್ಮ ನೈಜ ಸ್ವಭಾವವೇ ಸಂಸ್ಕೃತಿ ಮತ್ತು ಲೌಕಿಕ ಸಂಪತ್ತೇ ನಾಗರಿಕತೆ.

**ಡಾ॥ರಾಮು :** ನಾಗರಿಕತೆಗೂ ಸಂಸ್ಕೃತಿಗೂ ಇರುವ ಭೇದಗಳು ಸಾಧನಗಳಿಗೂ ಗುರಿಗಳಿಗೂ ಇರುವ ವ್ಯತ್ಯಾಸದ ಒಂದು ಬಗೆ ಎಂದು ಅವರ ಅಭಿಪ್ರಾಯ.

**ಡಾ॥ಶೀಲ :** ನಾಗರಿಕತೆ ಮತ್ತು ಸಂಸ್ಕೃತಿಗಳು ಬೇರೆ ಬೇರೆ ಎನಿಸಿದರೂ, ಅವುಗಳ ನಡುವೆ ಹಲವು ವ್ಯತ್ಯಾಸಗಳಿದ್ದರೂ, ಅವೆರಡೂ ಜೊತೆಯಾಗಿವೆ.

**ಡಾ॥ರಾಮು :** ನಾಗರಿಕತೆ ಮತ್ತು ಸಂಸ್ಕೃತಿಗಳು ಪರಸ್ಪರಾವಲಂಬಿಗಳು ಮತ್ತು ಪರಸ್ಪರ ಪರಿಣಾಮ ಬೀರುವಂಥವು.

**ಡಾ॥ಶೀಲ :** ನಾಗರಿಕತೆ ಸಾಧನವಾದರೆ, ಸಂಸ್ಕೃತಿ ಗುರಿಯೆನಿಸುವುದು.

**ಡಾ॥ರಾಮು :** ನಾಗರಿಕತೆಗೆ ಸಂಸ್ಕೃತಿಯ ಮಾರ್ಗದರ್ಶನ ಅತ್ಯಗತ್ಯವೆನಿಸಿದೆ.

**ಡಾ॥ಶೀಲ :** ಇಂದಿನ ಯುದ್ಧತಪ್ತ ಜಗತ್ತು ಜಟಿಲ ಹಾಗೂ ಸಂಕೀರ್ಣ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾಲದಲ್ಲಿ ಸಂಸ್ಕೃತಿ ಮಹತ್ತ್ವಪೂರ್ಣ ಪಾತ್ರವಹಿಸಬೇಕಾಗಿದೆ.

**ಡಾ॥ರಾಮು :** ನಾಗರಿಕತೆ ಮತ್ತು ಸಂಸ್ಕೃತಿಗಳ ನಡುವಣ ಸಂಬಂಧ ಹೆಚ್ಚಿದಷ್ಟೂ ಅನ್ಯೋನ್ಯವಾದಷ್ಟೂ ವಿಶ್ವಶಾಂತಿ ಹೆಚ್ಚು ಹತ್ತಿರವಾಗುತ್ತದೆ; ಮಾನವ ನೆಮ್ಮದಿಯ ಬಾಳ್ವೆ ನಡೆಸಲು ಸಾಧ್ಯವಾಗುತ್ತದೆ.

**ಡಾ॥ಶೀಲ :** ನಾಗರಿಕತೆ, ಸಂಸ್ಕೃತಿಗಳು ಎರಡೂ ನಾಣ್ಯದ ಎರಡು ಬದಿಗಳಿದ್ದಂತೆ. ಇವು ಮಾನವ ಜನಾಂಗದ ಎರಡು ಪ್ರಮುಖ ಜೀವನ ಕ್ಷೇತ್ರಗಳೆನಿಸಿವೆ.

**ಡಾ॥ರಾಮು** : ಮಾನವನ ಎಲ್ಲ ರಚನಾತ್ಮಕ ಕಾರ್ಯ ಚಟುವಟಿಕೆಗಳೂ ಇವಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಸಿರುತ್ತವೆ. ಆದಿ ಮಾನವ ಪ್ರಗತಿಯ ಹಾದಿ ಹಿಡಿದಂದಿನಿಂದಲೂ ಇವು ಬೆಳೆಯುತ್ತ, ಪ್ರಾಮುಖ್ಯ ಪಡೆಯುತ್ತ ಬಂದಿವೆ.

**ಡಾ॥ಶೀಲ** : ನಾಗರಿಕತೆ ಎಂಬ ಪದಕ್ಕೆ ನಿಖರವಾದ ವ್ಯಾಖ್ಯಾಯನ ನೀಡುವುದು ಕಷ್ಟ. ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಇತಿಹಾಸತಜ್ಞರು, ದಾರ್ಶನಿಕರು, ಸಾಹಿತಿಗಳು ನಾಗರಿಕತೆ ಸಂಸ್ಕೃತಿಗಳನ್ನು ಬೇರೆ ಬೇರೆ ಅರ್ಥಗಳಲ್ಲಿ ಬಳಸಿದ್ದಾರೆ.

**ಡಾ॥ರಾಮು** : ಇಂಗ್ಲಿಷಿನ ಸಿವಿಲಿಸ್ಲೇಷನ್ ಎಂಬ ಪದ ಲ್ಯಾಟಿನ್ ಭಾಷೆಯ ಸಿವಿಟಾಸ್ ಎಂಬ ಪದದಿಂದ ಬಂದದ್ದು. ಸಿವಿಟಾಸ್ ಎಂದರೆ ನಗರ ಎಂಬ ಅರ್ಥ ಉಂಟು.

**ಡಾ॥ಶೀಲ** : ನಾಗರಿಕತೆ ಎಂಬ ಪದ ನಗರ ಜೀವನವನ್ನು ಕುರಿತು ಹೇಳುತ್ತದೆ. ಅಂದರೆ ಮಾನವ ನಗರಗಳನ್ನು ನಿರ್ಮಿಸಿ ಜೀವನ ಆರಂಭಿಸಿದಂದಿನಿಂದ ನಾಗರಿಕತೆ ಆರಂಭವಾಯಿತೆಂದು ತಿಳಿಯಬಹುದು.

**ಡಾ॥ರಾಮು** : ನಗರ ನಿರ್ಮಾಣ ನಾಗರಿಕತೆಯ ಆರಂಭವನ್ನು ಸೂಚಿಸುತ್ತದೆ. ನಿರ್ದಿಷ್ಟ ಭೂಪ್ರದೇಶದಲ್ಲಿ ನೆಲೆಸುವುದು, ನಗರಗಳ ನಿರ್ಮಾಣ, ವ್ಯವಸ್ಥಿತ ಹಾಗೂ ವಿಕಾಸಗೊಂಡ ಸರ್ಕಾರದ ವಿಧಾನ, ವಾಣಿಜ್ಯದ ಬೆಳವಣಿಗೆ, ಅನಿರ್ಬಂಧವಾದ ಪ್ರಗತಿಯನ್ನು ಸಾಧಿಸುವ ಶಕ್ತಿ, ಇವೆಲ್ಲವೂ ನಾಗರಿಕತೆಯನ್ನು ಸೂಚಿಸುತ್ತವೆ ಎನ್ನಲಾಗಿದೆ.

**ಡಾ॥ಶೀಲ** : ಮಾನವ ಬರೆವಣಿಗೆಯ ಕಲೆ ಮತ್ತು ಲೋಹಗಳ ಬಳಕೆಯನ್ನು ಕಂಡುಕೊಂಡಾಗ ನಾಗರಿಕತೆ ಆರಂಭವಾಯಿತೆಂದು ಹೇಳಲಾಗಿದೆ.

**ಡಾ॥ರಾಮು** : ನಾಗರಿಕತೆ ಮಾನವನ ಭೌತಿಕ ಮತ್ತು ಬಾಹ್ಯಜೀವನಕ್ಕೆ ಸಂಬಂಧಪಟ್ಟಿದ್ದು, ಮಾನವನ ಜೀವನಕ್ಕೆ ಹೆಚ್ಚು ಸುಖ ಮತ್ತು ಅನುಕೂಲಗಳನ್ನು ನೀಡುವ ಎಲ್ಲ ಭೌತಿಕ ವಸ್ತುಗಳನ್ನು ಒಳಗೊಂಡಿರುವ ವಸ್ತುಸ್ಥಿತಿಯೇ ನಾಗರಿಕತೆ.

**ಡಾ॥ಶೀಲ** : ಸುಂದರ ವಸ್ತುಗಳ ನಿರ್ಮಾಣ, ಸ್ವತಂತ್ರ ವಿಚಾರಧಾರೆ, ಹೊಸದರ ಬಗ್ಗೆ ವಿಚಾರ ಮಾಡುವುದು, ಒಟ್ಟಿನ ಜೀವನ ನಡೆಸಲು ಶಾಸನಗಳನ್ನು ಮಾಡುವುದು–ಇವೇ ನಾಗರಿಕತೆ.

**ಡಾ॥ರಾಮು** : ಜೀವನದ ಸ್ಥಿತಿಗತಿಗಳನ್ನು ನಿಯಂತ್ರಿಸಲು ಮಾನವ ನಡೆಸಿದ ನಿರಂತರ ಪ್ರಯತ್ನದ ಫಲವಾಗಿ ರೂಪುಗೊಂಡ ಸಮಗ್ರ ರಚನೆ ಮತ್ತು ಸಂಘಟನೆಯನ್ನು ನಾಗರಿಕತೆ ಎಂದು ಕರೆಯುತ್ತಾರೆ.

**ಡಾ॥ಶೀಲ** : ಅರ್ನಾಲ್ಡ್ ಟಾಯ್ನ್‌ಬಿಯ ಪ್ರಕಾರ ರಾಜ್ಯ ಅಥವಾ ರಾಷ್ಟ್ರಕ್ಕಿಂತ ವಿಸ್ತಾರವಾದ ಕ್ಷೇತ್ರದ ಮೇಲೆ ತನ್ನ ಪ್ರಭುತ್ವವನ್ನು ಎತ್ತಿ ಹಿಡಿಯುವ ಧಾರ್ಮಿಕ ಮತ್ತು ನೈತಿಕ ಪದ್ಧತಿಯೆ ನಾಗರಿಕತೆ.

**ಡಾ॥ರಾಮು** : ನಾಗರಿಕತೆ ಎಂಬುದು ಪ್ರಗತಿ ಪಡೆದ ಸಾಮಾಜಿಕ ಜೀವನ. ಪ್ರಗತಿಪರ ಸಾಮಾಜಿಕ ಜೀವನವನ್ನು ಕಾಣುವುದು ಸಾಮಾನ್ಯವಾಗಿ ನಗರಗಳಲ್ಲಿ ಮಾತ್ರ. ಸಮಾಜ ಮತ್ತು ನಾಗರಿಕತೆಗಳು ಅನನ್ಯವಾದವು. ನಾಗರಿಕತೆಯ ಪ್ರಗತಿಯೇ ಸಮಾಜದ ಪ್ರಗತಿ.

**ಡಾ॥ಶೀಲ** : ಅವ್ಯವಸ್ಥೆ ಮತ್ತು ಅಭದ್ರತೆಗಳು ಕೊನೆಗೊಂಡು ಮಾನವ ವ್ಯವಸ್ಥಿತ ಜೀವನ ಮತ್ತು ರಾಜಕೀಯ ಸಂಘಟನೆಯನ್ನು ಸಾಧಿಸಿದಾಗ ನಾಗರಿಕತೆ ಪ್ರಾರಂಭವಾಯಿತೆಂದು ಹೇಳಬಹುದು.

ಡಾ||ರಾಮು : ಮಾನವ ಕುಲದ ಹಿತ ಮತ್ತು ಉದ್ಧಾರಕ್ಕಾಗಿ ಪ್ರಕೃತಿಯ ಶಕ್ತಿಗಳನ್ನು ತನ್ನ ಉಚ್ಚಮಟ್ಟದ ಬುದ್ಧಿಶಕ್ತಿ ಮತ್ತು ಗ್ರಹಣಶಕ್ತಿಯಿಂದ ಮಾನವ ಜಯಿಸಲು ಪ್ರಯತ್ನಿಸಿದಾಗ ನಾಗರಿಕತೆ ಅನಿವಾರ್ಯವಾಯಿತು.

ಡಾ||ಶೀಲ : ಕೆಲವೇ ಶ್ರೇಷ್ಠ ರಚನಾತ್ಮಕ ಮತ್ತು ಕಲ್ಪನಾಶಕ್ತಿಯುಳ್ಳ ವ್ಯಕ್ತಿಗಳು ಮೊದಲು ಅನುಷ್ಠಾನಕ್ಕೆ ತಂದು, ಉತ್ತಮ ಗುಣಲಕ್ಷಣಗಳ ಫಲವನ್ನು ಸಾಕಷ್ಟು ಮಾನವರು ಅನಂತರ ಒಪ್ಪಿ ಅನುಸರಿಸಿಕೊಂಡು ಬಂದು, ಅದೊಂದು ಸಾಮಾಜಿಕ ವಸ್ತುಸ್ಥಿತಿಯೆಂದು ಅಂಗೀಕರಿಸಿದ್ದು ನಾಗರಿಕತೆ.

ಡಾ||ರಾಮು : ಮಾನವನ ಭೌತಿಕ ಪ್ರಗತಿಯೇ ನಾಗರಿಕತೆ. ಅವ್ಯವಸ್ಥೆ ಅರಾಜಕತೆ ಇಲ್ಲದಾಗ ನಾಗರಿಕ ಜೀವನ ಸಾಧ್ಯ.

ಡಾ||ಶೀಲ : ಪ್ರಕೃತಿಯ ಬಗ್ಗೆ ಅರಿವು, ಕಲಾಪ್ರಪಂಚದಲ್ಲಿ ಪ್ರಗತಿ, ನೈತಿಕ ಸಂಹಿತೆ, ಸುಭದ್ರ ಸರ್ಕಾರ ಮುಂತಾದವು ನಾಗರಿಕ ಸಮಾಜದ ಲಕ್ಷಣಗಳೆನಿಸಿವೆ.

ಡಾ||ರಾಮು : ಆದಿಕಾಲದಿಂದಲೂ ನಾಗರಿಕ ಸಮಾಜವನ್ನು ಕಟ್ಟಲು, ಪ್ರಕೃತಿಯ ಮೇಲೆ ನಿಯಂತ್ರಣ ಹೊಂದಲು ಸಾಧ್ಯವಾಗುವಂಥ ಸಾಧನೆಗಳನ್ನು ಕಂಡುಹಿಡಿಯಲು ಮನುಷ್ಯ ನಡೆಸಿದ ಹೋರಾಟದ ಫಲವೇ ನಾಗರಿಕತೆ.

# 10. ಕರ್ಣಾಟಕ ಸಂಸ್ಕೃತಿ

ಡಾ॥ಶೀಲ : ಸಾವಿರಾರು ವರ್ಷಗಳಿಂದ ಬಾಳಿ, ಬದುಕಿನಲ್ಲಿ ಬಿಳಲು ಬಿಟ್ಟು, ವಿಸ್ತಾರವಾಗಿ ಬೆಳೆದು ನೆರಳನ್ನೀಯುತ್ತ ಸಾರ್ಥಕ ಮಾರ್ಗದಲ್ಲಿ ನಡೆದಿರುವ ಕರ್ಣಾಟಕ ಸಂಸ್ಕೃತಿ ಒಂದು ಸನಾತನ ವೃಕ್ಷ.

ಡಾ॥ರಾಮು : ಕಾಲದಿಂದ ಮತ್ತು ಸತ್ತ್ವದಿಂದ ಅದು ಸನಾತನ; ಆದರೆ ಅದರ ಚೇತನ ನಿತ್ಯನೂತನ. ಆಯಾ ಪ್ರದೇಶ, ಭಾಷೆ, ಧರ್ಮಗಳ ಜನರು ತಂತಮ್ಮ ಬಹುಮುಖ ಸಮಸ್ಯೆಗಳಿಗೆ ಉತ್ತರವನ್ನು ಕಾಣಬಯಸುವ ಅಂತರಂಗದ ಸಾಧನೆಯೇ ಸಂಸ್ಕೃತಿಯ ಮೂಲಸಾಮಗ್ರಿ.

ಡಾ॥ಶೀಲ : ಇಂದೂ ಹೊಸ ಹೊಸ ಬಿಳಲುಗಳು ಬೇರೂರಿ ಬೆಳೆಯುತ್ತಿವೆ; ಟಿಸಿಲುಗಳು ಕುಡಿಯೊಡೆದು ಹೂವುಗಳು ಅರಳುತ್ತಿವೆ. ನಿರಂತರವಾಗಿ ಬೆಳೆದುಬಂದ ಭಾರತೀಯ ಪರಂಪರೆಯಿಂದ ಅದು ಪೋಷಿತ ವಾಗುತ್ತದೆ.

ಡಾ॥ರಾಮು : ನಿಜವಾಗಿ ನೋಡಿದರೆ ಕರ್ಣಾಟಕ ಸಂಸ್ಕೃತಿ ಎಂಬುದು ಭಾರತೀಯ ಸಂಸ್ಕೃತಿಗಿಂತ ಭಿನ್ನವಾದು ದೇನಲ್ಲ.

ಡಾ॥ಶೀಲ : ಭರತಖಂಡದ ಒಂದು ಅವಿಭಾಜ್ಯ ಅಂಗವಾಗಿರುವ ಕರ್ಣಾಟಕ ತನ್ನ ಆಶೆಯ ಆಶೋತ್ತರಗಳಲ್ಲಿ, ಅವುಗಳ ಸಾಧನೆಯ ಮಾರ್ಗದಲ್ಲಿ, ಅನುಭವದ ಅಭಿವ್ಯಕ್ತಿಯ ಮಾಧ್ಯಮವನ್ನು ರೂಪಿಸಿಕೊಳ್ಳುವ ಕುಶಲ ಕಲೆಯಲ್ಲಿ ಭಾರತೀಯ ಮನೋಧರ್ಮವನ್ನೇ ಅವಲಂಬಿಸಿ ಬೆಳೆಯಿತು.

ಡಾ॥ರಾಮು : ನಾಡಿನ ಇತಿಹಾಸದ ಪ್ರಾರಂಭದಲ್ಲಿಯೇ ಜೈನಧರ್ಮ ಇಲ್ಲಿ ಕಾಲಿಟ್ಟು ಇನ್ನೆಲ್ಲೂ ಸಿಕ್ಕದಿರುವ ರಕ್ಷಣೆಯನ್ನು ಪಡೆದು ಬೆಳೆಯಿತು.

ಡಾ॥ಶೀಲ : ಬೌದ್ಧಧರ್ಮದ ಪ್ರಚಾರಕ್ಕೂ ಇದು ಕೇಂದ್ರವಾಗಿತ್ತೆಂಬುದು ಇಲ್ಲಿ ದೊರೆಯುವ ಅಶೋಕನ ಶಾಸನಗಳಿಂದ ವ್ಯಕ್ತವಾಗುತ್ತದೆ.

ಡಾ॥ರಾಮು : ಅನಂತರ ಶೈವಧರ್ಮ ವಿಶೇಷ ಪ್ರಾಬಲ್ಯಕ್ಕೆ ಬಂತು. ಶ್ರೀ ಶಂಕರಾಚಾರ್ಯರ ಕಾವ್ಯಕ್ಷೇತ್ರದ ಕೇಂದ್ರವಾಗಿ ಅವರ ಒಂದು ಮಠ ಇಲ್ಲಿ ಸ್ಥಾಪಿತವಾಯಿತು.

ಡಾ॥ಶೀಲ : ಶ್ರೀ ರಾಮಾನುಜರನ್ನು ಅವರ ಜನ್ಮಭೂಮಿಯಾದ ತಮಿಳುನಾಡೇ ಹೊರದೂಡಲು ಕನ್ನಡ ದೇಶ ಅವರಿಗೆ ಆಶ್ರಯವನ್ನಿತ್ತು ಶ್ರೀವೈಷ್ಣವಧರ್ಮವನ್ನು ಸ್ವಾಗತಿಸಿತು.

ಡಾ॥ರಾಮು : ಮಧ್ವಾಚಾರ್ಯರಂತೂ ಕನ್ನಡ ಗರ್ಭದಿಂದಲೇ ಮೂಡಿಬಂದವರು. ಈ ಎಲ್ಲ ಧರ್ಮಗಳನ್ನೂ ಸಮಾನ ಭಾವನೆಯಿಂದ ಕಾಣುವ ಸಮನ್ವಯ ಸಂಸ್ಕೃತಿ ಕರ್ಣಾಟಕದ ಸಹಜಗುಣ.

ಡಾ॥ಶೀಲ : ಸಂಸ್ಕೃತಿ ಎಂಬ ಶಬ್ದದ ಅರ್ಥ ಬಹು ವ್ಯಾಪಕವಾಗಿ ಬೆಳೆಯುತ್ತ ಬಂದಿದೆ. ಹೊಸ ಹೊಸ ಅರ್ಥಗಳನ್ನು ಒಳಗೊಂಡಿದೆ.

ಡಾ॥ರಾಮು : ಸಮಷ್ಟಿ ಜೀವನದ ಅಂತರಂಗದ ಸಾಧನೆಗೆ ಸಹಕಾರಿಯಾದ ಸಾಮಗ್ರಿಗಳಿಂದ ಹಿಡಿದು, ವ್ಯಷ್ಟಿ ಜೀವನದ ವಿಕಾಸಕ್ಕೆ ಕಾರಣವಾದ ಸಂಸ್ಕಾರದವರೆಗೆ ಈ ಪದದ ಅರ್ಥ ಬೆಳೆದಿದೆ.

ಡಾ॥ಶೀಲ : ವ್ಯಕ್ತಿಯ ವಿಕಾಸಕ್ಕೆ ಕಾರಣವಾಗುವ ಸಾಮಾಜಿಕ ಪರಿಕರಗಳು ಸಹ ಸಂಸ್ಕೃತಿಯಲ್ಲಿಯೇ ಸಮಾವೇಶಗೊಳ್ಳುತ್ತವೆ.

ಡಾ॥ರಾಮು : ಈ ಅರ್ಥದಲ್ಲಿ ಅದನ್ನು ಕೆಲವು ವೇಳೆ ದೇಶವಾಚಕವಾಗಿ ಬಳಸುವುದುಂಟು.

ಡಾ॥ಶೀಲ :ಒಟ್ಟು ಜನಜೀವನದ ಅಂತರಂಗದ ಅನುಭವ ಇಲ್ಲಿ ಪ್ರಧಾನವಾದ ಅಂಶವಾಗಿ ಗೋಚರ ವಾಗುತ್ತದೆ.

ಡಾ॥ರಾಮು : ಆದರೆ ಅದರ ಪ್ರಾದೇಶಿಕ ವೈವಿಧ್ಯಕ್ಕೆ ತನ್ನ ವಿಶಿಷ್ಟ ಸ್ವರೂಪವನ್ನಿತ್ತು ಅದರ ಶ್ರೀಮಂತಿಕೆಗೆ ಕಾರಣವಾಯಿತು.

ಡಾ॥ಶೀಲ : ಕರ್ಣಾಟಕವನ್ನಾಳಿದ ವಿವಿಧ ರಾಜವಂಶಗಳು, ಈ ನಾಡಿಗೆ ಬಂದ ಮತ್ತು ಇಲ್ಲಿಯೇ ಹುಟ್ಟಿ ಬೆಳೆದ ಧಾರ್ಮಿಕ ಆಂದೋಳನಗಳು, ಜನಪದವನ್ನು ಅವು ರೂಪಿಸಿದ ಬಗ್ಗೆ, ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳು ಪಡೆದ ಅಭಿವ್ಯಕ್ತಿ.

ಡಾ॥ರಾಮು : ವಾಸ್ತುಶಿಲ್ಪ, ಶಿಲ್ಪ ಸಂಗೀತ ನೃತ್ಯ ಚಿತ್ರಾದಿ ಕುಶಲ ಕಲೆಗಳ ಸಾಧನೆ–ಈ ಎಲ್ಲ ಅಂಶಗಳಲ್ಲಿಯೂ ಕರ್ಣಾಟಕದ ವೈಶಿಷ್ಟ್ಯವನ್ನು ಗುರುತಿಸಬಹುದು.

ಡಾ॥ಶೀಲ : ಮುಖ್ಯವಾಗಿ ಇಲ್ಲಿ ಕಾಣುವುದು ಒಂದು ಸಮನ್ವಯ ಮತ್ತು ಸಾಮರಸ್ಯ ದೃಷ್ಟಿ.

ಡಾ॥ರಾಮು:ರಾಜಕೀಯ ಚರಿತ್ರೆಯನ್ನು ನೋಡಿದರೆ ಕದಂಬರು ಅಥವಾ ಅವರಿಗಿಂತ ಹಿಂದಿನ ಶಾತವಾನರಿಂದ ಹಿಡಿದು, ಕೆಳದಿ ಮೈಸೂರು ಅರಸರವರೆಗೂ ಎಲ್ಲ ರಾಜವಂಶಗಳೂ ಉದಾತ್ತ ಹಿನ್ನೆಲೆಯಲ್ಲಿಯೇ ಬೆಳೆದು ಬಂದುವು.

ಡಾ॥ಶೀಲ : ತಮ್ಮ ಜಾತಿ ಮತ ಭಾವಗಳಲ್ಲಿ ಅಂಧರಾಗಿ ಇತರರನ್ನು ಹಿಂಸಿಸಲು ಹೊರಟ ರಾಜರು ಈ ದೀರ್ಘ ಇತಿಹಾಸದಲ್ಲಿ ಅಪ್ಪಿತಪ್ಪ ಕೂಡ ಕಾಣಸಿಗಲಾರರೆಂಬುದು ಗಮನಾರ್ಹವಾದ ಸಂಗತಿ.

ಡಾ॥ರಾಮು : ಈ ನೆಲದ ಗುಣವೇ ಅದೆನ್ನುವಷ್ಟರ ಮಟ್ಟಿಗೆ ಸಮನ್ವಯ ಮತ್ತು ಸಾಮರಸ್ಯ ಭಾವನೆಯನ್ನು ಅವರು ರೂಪಿಸಿಕೊಂಡರು.

ಡಾ॥ಶೀಲ : ರಾಜರ ವೈಯಕ್ತಿಕ ಬಲವನ್ನು ಅವಲಂಬಿಸಿ ಒಂದೊಂದು ಕಾಲದಲ್ಲಿ ಒಂದೊಂದು ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಿರಬಹುದು.

ಡಾ॥ರಾಮು: ಒಂದೇ ವಂಶದಲ್ಲಿಯೂ ಒಬ್ಬೊಬ್ಬ ರಾಜರು ಒಂದೊಂದು ಧರ್ಮಕ್ಕೆ ಹೆಚ್ಚಾಗಿ ಒಲಿಯುತ್ತಿ ದ್ದದ್ದೂ ಉಂಟು.

ಡಾ॥ಶೀಲ : ರಾಷ್ಟ್ರಕೂಟ ರಾಜರಲ್ಲಿ ಅನೇಕರು ಹಿಂದೂ ಧರ್ಮವನ್ನು ಅದರಲ್ಲಿಯೂ ವಿಶೇಷವಾಗಿ ಶೈವಧರ್ಮವನ್ನು ಅವಲಂಬಿಸಿದ್ದರೆ, ನೃಪತುಂಗ ಜೈನ ಧರ್ಮಕ್ಕೆ ಮನಸೋತಿದ್ದ.

ಡಾ॥ರಾಮು : ಹೊಯ್ಸಳ ಬಲ್ಲಾಳ ಶೈವನಾದರೆ, ಅವನ ತಮ್ಮ ವಿಷ್ಣುವರ್ಧನ ವೈಷ್ಣವ.

ಡಾ॥ಶೀಲ : ಅದು ಅವರ ವೈಯಕ್ತಿ ಒಲವು.

ಡಾ॥ರಾಮು : ಆದರೆ ಸಾರ್ವತ್ರಿಕವಾಗಿ ಅವರು ಸರ್ವಧರ್ಮ ರಕ್ಷಕರೆಂಬುದನ್ನು ಮರೆತಿರಲಿಲ್ಲ.

ಡಾ॥ಶೀಲ : ಹೆಚ್ಚೆಂದರೆ ತಾವು ಒಲಿದ ಧರ್ಮಕ್ಕೆ ಸ್ವಲ್ಪ ಹೆಚ್ಚು ಪ್ರೋತ್ಸಾಹ ಕೊಟ್ಟಿರಬಹುದು. ಆದರೆ ಇತರ ಧರ್ಮಗಳ ಮೇಲೆ ದ್ವೇಷವನ್ನು ಸಾಧಿಸಿದ ದುರ್ಘಟನೆ ಕರ್ನಾಟಕ ರಾಜಕೀಯದ ಇತಿಹಾಸದಲ್ಲಿ ಒಮ್ಮೆಯೂ ಸಂಭವಿಸಲಿಲ್ಲ.

ಡಾ॥ರಾಮು : ಚಾಳುಕ್ಯರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿಯ ನಾಯಕರು–ಈ ಎಲ್ಲ ಅರಸುಮನೆತನಗಳಿಗೂ ಈ ಮಾತನ್ನು ಅನ್ವಯಿಸಬಹುದು.

ಡಾ॥ಶೀಲ : ರಾಜಕೀಯ ಚರಿತ್ರೆಯಲ್ಲಿ ಉದ್ದಕ್ಕೂ ಕಾಣುವ ಒಂದು ಪ್ರಧಾನವಾದ ಅಂಶವೆಂದರೆ ಯುದ್ಧಗಳು.

ಡಾ॥ರಾಮು: ಇದು ಕರ್ಣಾಟಕಕ್ಕೆ ಮಾತ್ರವಲ್ಲ. ಇಡೀ ಭರತಖಂಡಕ್ಕೆ ಅಥವಾ ಪ್ರಾಚೀನ ಪ್ರಪಂಚಕ್ಕೆಲ್ಲ ಅನ್ವಯಿಸುವ ಮಾತು.

ಡಾ॥ಶೀಲ : ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅದು ಅನಿವಾರ್ಯವಾಗಿತ್ತು.

ಡಾ॥ರಾಮು : ಇಂಥ ವೀರಜೀವನದಲ್ಲಿಯೂ ಕರ್ಣಾಟಕದ ಸಾಧನೆ ಅನುಪಮವಾದುದು.

ಡಾ॥ಶೀಲ : ಅಖಿಲ ಭಾರತ ವ್ಯಾಪ್ತಿಯ ಮನ್ನಣೆಯನ್ನು ಪಡೆದಂಥ ವೀರರು ಈ ನಾಡಿನಲ್ಲಿ ಆಗಿಹೋದರು.

ಡಾ॥ರಾಮು : ಕದಂಬ ವಂಶದ ಸ್ಥಾಪಕನಾದ ಮಯೂರಶರ್ಮನಿಂದ ಹಿಡಿದು ಅವಿರತವಾಗಿ ಬೆಳೆದುಬಂದ ಈ ವೀರ ಪರಂಪರೆಯಲ್ಲಿ ಕೆಲವು ಹೆಸರುಗಳನ್ನು ಸ್ಮರಿಸಿಕೊಳ್ಳಬಹುದಾದರೆ 2ನೆಯ ಪುಲಕೇಶಿ, ಧ್ರುವ ಧಾರಾವರ್ಷ, 3ನೆಯ ಗೋವಿಂದ, 6ನೆಯ ವಿಕ್ರಮ, ವಿಷ್ಣುವರ್ಧನ, 2ನೆಯ ಬಲ್ಲಾಳ ಇಮ್ಮಡಿ ಪ್ರೌಢದೇವ ರಾಯ, ಕೃಷ್ಣದೇವರಾಯ–ಈ ಒಂದೊಂದು ಹೆಸರೂ ಪರಾಕ್ರಮದ ಸಂಕೇತವಾಗಿದೆ.

ಡಾ॥ರಾಮು : ಕೆಲವರ ಕಾಲದಲ್ಲಂತೂ ಉತ್ತರ ಭಾರತವೂ ತತ್ತರಿಸಿತು. ಕನ್ನಡ ಸೈನಿಕರ ಕುದುರೆಗಳು ಗಂಗಾನದಿಯಲ್ಲಿ ಮಿಂದು ಹಿಮಾಲಯದ ತಪ್ಪಲನ್ನು ಕಂಡವು.

ಡಾ॥ಶೀಲ : ನೇಪಾಳದವರೆಗೂ ಕನ್ನಡ ರಾಜವಂಶಗಳ ಪ್ರಭಾವ ಹಬ್ಬಿತು. ಅಲ್ಲಿಯೇ ಕೆಲವರು ನೆಲೆಸಿ ತಮ್ಮ ಶಾಖೆಯನ್ನು ಪ್ರಾರಂಭಿಸಿದಂತೆಯೂ ತೋರುತ್ತದೆ.

ಡಾ॥ರಾಮು : ನಾನ್ಯದೇವನನ್ನು ರಾಜನನ್ನಾಗಿ ಪಡೆದು ಆಳಿದ ಕರ್ಣಾಟಕ ರಾಜವಂಶವೊಂದು ನೇಪಾಳದಲ್ಲಿ ಕಂಡುಬರುತ್ತದೆ.

ಡಾ॥ಶೀಲ : ಹಾಗೆಯೇ ಬಂಗಾಳದ ಸೇನರು. ಜೋಧಪುರ ಮತ್ತು ಬಿಕನೀರಿನ ರಾಠೋಡರು ಕರ್ಣಾಟಕ ವಂಶಕ್ಕೆ ಸೇರಿದವರು.

ಡಾ॥ರಾಮು : ಕರ್ಣಾಟಕದ ರಾಜರು ಧರ್ಮವಿಜಯಿಗಳಾಗಿದ್ದರು.

ಡಾ॥ಶೀಲ : ಶತ್ರುಗಳೊಡನೆ ಹೋರಾಡುತ್ತಿದ್ದಾಗಲೂ ಉದಾತ್ತ ಆದರ್ಶ ಅವರ ಕಣ್ಣ ಮುಂದಿರುತ್ತಿತ್ತು. ವಿಜಯಿಗಳಾದಾಗಲೂ ಕ್ಷಮಾಗುಣ ಅವರ ಪರಾಕ್ರಮಕ್ಕೆ ಅಲಂಕಾರಪ್ರಾಯವಾಗಿ ಶೋಭಿಸುತ್ತಿತ್ತು.

ಡಾ॥ರಾಮು : ಶರಣಾಗತ ರಕ್ಷಣೆ ಕರ್ಣಾಟಕದ ರಾಜರುಗಳಲ್ಲಿ ಕಂಡುಬರುವ ಬಹುದೊಡ್ಡ ಗುಣ.

ಡಾ||ಶೀಲ : ಕೆಳದಿಯ ರಾಣಿ ಚೆನ್ನಮ್ಮನ ಸಾಹಸವನ್ನು ಸ್ಮರಿಸಿಕೊಳ್ಳಬಹುದು. ಶಿವಾಜಿಯ ಮಗನಿಗೆ ಆಶ್ರಯವನ್ನು ಕೊಟ್ಟು ಆಕೆ ಅದಕ್ಕಾಗಿ ಔರಂಗ್‌ಜೇಬನನ್ನು ದಿಟ್ಟತನದಿಂದ ಎದುರಿಸಿದ್ದು ಮಾತ್ರವಲ್ಲದೆ ಸೋಲಿಸಿ ಹಿಮ್ಮೆಟ್ಟಿಸಲು ಸಮರ್ಥಳಾದಳೆಂಬುದು ನೈತಿಕ ಬಲದ ಮಹಾವಿಜಯವನ್ನು ಸಾರಿಹೇಳುತ್ತದೆ. ಕೆಳದಿಯ ಶಿವಪ್ಪನಾಯಕನೂ ಈ ಸಂದರ್ಭದಲ್ಲಿ ಸ್ಮರಣೀಯ ವ್ಯಕ್ತಿ.

ಡಾ||ರಾಮು : ಪ್ರಾಚೀನ ರಾಜ್ಯಪದ್ಧತಿಯಲ್ಲಿ ರಾಜವಂಶಗಳ ಶಕ್ತಿ. ನಾಡಿನ ಆಗುಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿತ್ತು. ನಾಡಿನ ರಾಜಕೀಯ ಚರಿತ್ರೆಯೆಂದರೆ ರಾಜವಂಶಗಳ ಚರಿತ್ರೆಯೇ.

ಡಾ||ಶೀಲ : ಆದರೂ ಜನಜೀವನದ ಎಲ್ಲ ಅಂಶಗಳನ್ನೂ ಅದು ವ್ಯಾಪಿಸಲಿಲ್ಲ.

ಡಾ||ರಾಮು : ಜನಪದ ಜೀವನದ ಅಂತರಂಗವನ್ನು ಆವರಿಸಿದ್ದು ರಾಜ್ಯಶಕ್ತಿಯಲ್ಲ ; ಧರ್ಮಶಕ್ತಿ.

ಡಾ||ಶೀಲ : ರಾಜರು ಸಹ ಅದಕ್ಕೆ ಅಧೀನರಾಗಿ ನಡೆಯುತ್ತಿದ್ದರು. ಆಡಳಿತ ಕ್ರಮವನ್ನೂ ಆರ್ಥಿಕ ರೀತಿನೀತಿಗಳನ್ನೂ ರೂಪಿಸುವುದರಲ್ಲಿ ಸಹ ರಾಜನಿಗೆ ಧರ್ಮಶಾಸ್ತ್ರಗಳೇ ಮಾರ್ಗದರ್ಶಕವಾಗಿದ್ದುವು. ರಾಜ್ಯಶಕ್ತಿ ಧರ್ಮಶಕ್ತಿಗೆ ಅಧೀನವಾಗಿ ನಡೆಯುತ್ತಿತ್ತು.

ಡಾ||ರಾಮು :ಶಾಸನಗಳಿಂದಲೂ ಈ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ, ಕರ್ಣಾಟಕ ಸಂಸ್ಕೃತಿಯ ಸ್ವರೂಪವನ್ನು ತಿಳಿಯುವುದಕ್ಕೆ ಶಾಸನಗಳು ಅಮೂಲ್ಯವಾದ ಆಧಾರಗಳಾಗಿ ಪರಿಣಮಿಸಿವೆ.

ಡಾ||ಶೀಲ : ಊರಿನ ಮತ್ತು ನಾಡಿನ ರಕ್ಷಣೆಗಾಗಿ, ಕೆಡುಕಿನ ನಾಶಕ್ಕಾಗಿ, ಒಳಿತಿನ ಸಂವರ್ಧನೆಗಾಗಿ ನಾಡಿನ ವೀರರು ತಮ್ಮನ್ನು ಅರ್ಪಿಸಿಕೊಳ್ಳುತ್ತಿದ್ದ ಧರ್ಮ ವೀರತ್ವವನ್ನು ಅಸಂಖ್ಯಾತ ವೀರಗಲ್ಲುಗಳು ತೋರಿಸಿಕೊಡುತ್ತವೆ.

ಡಾ||ರಾಮು : ದಾನಶಾಸನ ದತ್ತಿಶಾಸನಗಳನ್ನು ನೋಡಿದಾಗ ನಾಡಿನ ಧಾರ್ಮಿಕ ಜೀನದ ವಿವಿಧ ಮುಖಗಳ ಪರಿಚಯವಾಗುತ್ತದೆ.

ಡಾ||ಶೀಲ : ರಾಜರು ಸಾಮಂತರು ಅಧಿಕಾರಿಗಳು ರಾಣಿಯರು ಮಾತ್ರವಲ್ಲದೆ ಸಾಮಾನ್ಯ ಕೆಲಸಗಾರರೂ ಸೇವಕರೂ ದಾನವಿತ್ತು ಶಾಸನಸ್ಥರಾಗಿರುವುದು ಕರ್ಣಾಟಕದ ಶಾಸನಗಳಲ್ಲಿ ಕಂಡುಬರುವ ವಿಶೇಷ ಅಂಶ.

ಡಾ||ರಾಮು : ಧರ್ಮಸಮನ್ವಯವನ್ನು ಶಾಸನಗಳು ಸಾಧಿಸಿರುವ ರೀತಿ ಕರ್ಣಾಟಕದ ಶಾಸನಗಳ ಇನ್ನೊಂದು ಪ್ರಮುಖ ಸಾಧನೆ.

ಡಾ||ಶೀಲ : ಸರ್ವಧರ್ಮಧೇನು ನಿವಹಕ್ಕಾಡುಂಬೊಲಂ ಬೆಳ್ವೊಲಂ–ಎಂದು ಒಂದು ಶಾಸನ ಹೇಳುವ ಮಾತನ್ನು ಇಡೀ ಕರ್ಣಾಟಕಕ್ಕೇ ಅನ್ವಯಿಸಬಹುದು.

ಡಾ||ಶೀಲ : ಜನಪದ ಸಂಸ್ಕೃತಿಯ ಸ್ವರೂಪವನ್ನೂ ಸಾರವನ್ನೂ ಇನ್ನೂ ಸಾರವತ್ತಾಗಿ ಮತ್ತು ಜೀವಂತವಾಗಿ ತೋರಿಸಿಕೊಡುವ ಮಾಧ್ಯಮವೆಂದರೆ ಜನಪದ ಸಾಹಿತ್ಯ. ಸಮಷ್ಟಿ ಮನಸ್ಸಿನ ನೇರವಾದ ಅಭಿವ್ಯಕ್ತಿ ಇದು.

ಡಾ||ರಾಮು: ಸಾಮಾನ್ಯ ಜನಗಳ ಅನುಭವಗಳಿಂದ ಮತ್ತು ಆಶೋತ್ತರಗಳಿಂದ ಇದು ಸಹಜವಾಗಿ ಹುಟ್ಟುತ್ತದೆ. ಕರ್ಣಾಟಕ ಜನಪದ ಸಾಹಿತ್ಯ ವಿಪುಲತೆ ವೈವಿಧ್ಯಗಳಲ್ಲಿ ಅಪಾರವಾಗಿರುವಂತೆ, ಸತ್ತ್ವದಲ್ಲಿ ಮಹೋನ್ನತವೂ ಮಹತ್ತ್ವಪೂರ್ಣವೂ ಆಗಿದೆ.

ಡಾ||ಶೀಲ : ಬಹುಮುಖವಾದ ಜೀವನದ ಹರಹನ್ನೂ, ಹಾಸುಬೀಸುಗಳನ್ನೂ ಶಕ್ತಿ ಸಂಪನ್ನವಾದ ರೀತಿಯಲ್ಲಿ ಜನಸಾಮಾನ್ಯರ ಭಾಷೆ ಹಿಡಿದಿಟ್ಟಿರುವ ಪವಾಡ ಇಲ್ಲಿಯ ಜನಪದ ಸಾಹಿತ್ಯದಲ್ಲಿ ಕಾಣುತ್ತದೆ.

ಡಾ||ರಾಮು : ಲಾವಣಿಗಳು, ಗರತಿಯ ಹಾಡುಗಳು, ಕೋಲಾಟದ ಪದಗಳು ಮೊದಲಾದವು ಜನಪದ ಸಾಹಿತ್ಯದ ವೈಶಿಷ್ಟ್ಯಕ್ಕೆ ಕರ್ಣಾಟಕದ ಕೊಡುಗೆಗಳೆನ್ನಬಹುದು.

ಡಾ||ಶೀಲ : ಯಕ್ಷಗಾನ ಬಯಲಾಟಗಳು, ತೊಗಲು ಬೊಂಬೆಯ ಆಟ, ಸುಗ್ಗಿಯ ಕುಣಿತ–ಮೊದಲಾದ ಜನಪದ ನೃತ್ಯಗಳನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ.

ಡಾ||ರಾಮು : ಜನತೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿರುವ ಅಷ್ಟೇ ಪ್ರಭಾವಶಾಲಿಯಾದ ಇನ್ನೊಂದು ಮುಖ, ಪ್ರೌಢಸಾಹಿತ್ಯ, ಇದಕ್ಕೆ ಹಿನ್ನಲೆಯಾಗಿ ವಿವಿಧ ಧರ್ಮಪರಂಪರೆಗಳೂ ಬೆಳೆದುಬಂದುವು.

ಡಾ||ಶೀಲ:ಜನಜೀವನದ ಅಂತರಂಗದ ಸಂಸ್ಕಾರಗಳನ್ನೂ ಅದಕ್ಕನುಗುಣವಾದ ಬಹಿರಂಗದ ನಡೆನುಡಿಗಳನ್ನೂ ರೂಪುಗೊಳಿಸುವುದರಲ್ಲಿ ಧರ್ಮ ಮತ್ತು ಸಾಹಿತ್ಯಗಳ ಸ್ಥಾನ ಅತಿ ಪ್ರಬಲವಾದದ್ದು.

ಡಾ||ರಾಮು : ಕರ್ಣಾಟಕದಲ್ಲಿ ಇವೆರಡೂ ಒಂದಕ್ಕೊಂದು ಪೂರಕವಾದುವು; ಒಂದೇ ಶಕ್ತಿಯ ಎರಡು ಮುಖಗಳಾಗಿ ಪರಿಣಮಿಸಿದುವು.

ಡಾ||ಶೀಲ : ಸಾಹಿತ್ಯಕ್ಕೆ ಧರ್ಮ ಪ್ರೇರಕಶಕ್ತಿಯಾಯಿತು; ಧರ್ಮಕ್ಕೆ ಸಾಹಿತ್ಯ ಪೂರಕಶಕ್ತಿಯಾಯಿತು. ಜನತೆಯ ಜಾಗೃತಿಗಾಗಿ ಇವೆರಡೂ ಮೀಸಲಾದುವು.

ಡಾ||ರಾಮು : 12ನೆಯ ಶತಮಾನವಂತೂ ಭರತಖಂಡದ ಧಾರ್ಮಿಕ ಇತಿಹಾಸದಲ್ಲಿಯೇ ಒಂದು ಅದ್ವಿತೀಯವಾದ ಯುಗ.

ಡಾ||ಶೀಲ : ಭರತಖಂಡ ಆ ಕಾಲದಲ್ಲಿ ಕಂಡರಿಯದಂಥ ಸಾಮಾಜಿಕ ಮತ್ತು ಧಾರ್ಮಿಕ ಸಮತತೆಯನ್ನು ಬೋಧಿಸಿದುದಲ್ಲದೆ ಸಾಧಿಸಿಯೂ ತೋರುವ ಅಪೂರ್ವ ಅವಕಾಶ ಕರ್ಣಾಟಕಕ್ಕೆ ಬಂತು.

ಡಾ||ರಾಮು : ಅದನ್ನು ತಂದುಕೊಟ್ಟವರು ಬಸವಣ್ಣನವರು ಮತ್ತು ಶರಣರು.

ಡಾ||ಶೀಲ : ಅಸ್ಪೃಶ್ಯತೆಯ ನಿರ್ಮೂಲನ, ಕಾಯಕದ ಮಹತ್ತ್ವ ಮೊದಲಾದ ಅವರ ಕ್ರಾಂತಿಕಾರಕ ಸಾಧನೆಗಳು ಕರ್ಣಾಟಕ ಸಂಸ್ಕೃತಿಯ ಒಂದು ಮಹತ್ತರ ಘಟ್ಟ.

ಡಾ||ರಾಮು : ಅವರ ಆ ಪುಣ್ಯಸಾಹಸದ ಫಲವಾಗಿ ರೂಪುಗೊಂಡಿದ್ದು ವಚನ ಸಾಹಿತ್ಯ.

ಡಾ||ಶೀಲ : ಈ ವಚನಗಳದು ಬಹುಶಃ ಇನ್ನಾವ ಭಾರತೀಯ ಭಾಷೆಗೂ ಇಲ್ಲದ ಒಂದು ವಿಶಿಷ್ಟ ರೂಪ.

ಡಾ||ರಾಮು : ಕರ್ಣಾಟಕದ ಗರ್ಭದಿಂದ ಆವಿರ್ಭವಿಸಿದ ಇನ್ನೊಬ್ಬ ಆಚಾರ್ಯ ಮಧ್ವರು ಪ್ರತಿಪಾದಿಸಿದ ತತ್ತ್ವಸಿದ್ಧಾಂತದ ಮೇಲೆ ಬೆಳೆದು ಪುರಂದರಾದಿ ದಾಸರ ಕೀರ್ತನೆಗಳಿಗೆ ಕಾರಣವಾದ ದಾಸಸಾಹಿತ್ಯ ಕನ್ನಡದ ಇನ್ನೊಂದು ವೈಶಿಷ್ಟ್ಯ.

ಡಾ||ಶೀಲ : ಅಂತೆಯೇ ನಿಜಗುಣ ಶಿವಯೋಗಿಗಳೇ ಮೊದಲಾದ ಸಂತರಿಂದ ಬೆಳೆದುಬಂದ ತತ್ತ್ವಸಾಹಿತ್ಯ ಅಗಾಧವಾದದ್ದು.

ಡಾ॥ರಾಮು : ಚಂಪೂ ರಗಳೆ ಷಟ್ಪದಿ ಸಾಂಗತ್ಯ ತ್ರಿಪದಿ ವಚನ ಹಾಡು–ಈ ಮೊದಲಾದ ವೈವಿಧ್ಯಗಳು ಕನ್ನಡ ಸಾಹಿತ್ಯ ಸಾಧನೆಯ ವಿಶಿಷ್ಟ ಅಂಶಗಳು.

ಡಾ॥ಶೀಲ :ಪ್ರಯೋಗಶೀಲತೆ ಕನ್ನಡ ಸಾಹಿತ್ಯದ ದಾರಿದೀಪ; ಪರಿಪಕ್ವ ಅನುಭವ ಆ ದಾರಿಯಲ್ಲಿ ಮುನ್ನಡೆಸುವ ಚೈತನ್ಯಶಕ್ತಿ.

ಡಾ॥ರಾಮು : ಇತರ ಕಲೆಗಳಲ್ಲಿಯೂ ಕರ್ಣಾಟಕ ಸಂಸ್ಕೃತಿಯ ಅಭಿವ್ಯಕ್ತಿ ಹಲವಾರು ರೂಪಗಳಲ್ಲಿ ಬೆಳೆದು ಬಂದಿದೆ.

ಡಾ॥ಶೀಲ : ವಾಸ್ತುಶಿಲ್ಪ, ಶಿಲ್ಪ, ಸಂಗೀತ, ನೃತ್ಯ, ಚಿತ್ರ ಈ ಎಲ್ಲ ಕಲೆಗಳಲ್ಲೂ ಇದರ ಅಭಿವ್ಯಕ್ತಿಯ ಅನೇಕ ಮುಖಗಳು ಕಂಡುಬರುತ್ತವೆ.

ಡಾ॥ರಾಮು : ಜನರ ಸೌಂದರ್ಯದೃಷ್ಟಿ ಮತ್ತು ಉದಾತ್ತವಾದ ಮನೋಧರ್ಮ ಇವುಗಳಲ್ಲಿ ಉಜ್ವಲವಾಗಿ ವ್ಯಕ್ತವಾಗಿದೆ.

ಡಾ॥ಶೀಲ : ಯಾವುದೇ ಕಲಾಕೃತಿ ಮಹೋನ್ನತವಾಗಬೇಕಾದರೆ ತಾನು ಹುಟ್ಟಿದ ಪರಿಮಿತವಾದ ಪರಿಸರವನ್ನು ಮೀರಿ ಬೆಳೆದು ವಿಶ್ವವ್ಯಾಪಕವಾಗಬೇಕು; ಮತ್ತು ವೈಯಕ್ತಿಕತೆಯಿಂದ ಮೇಲೇರಿ ಸರ್ವಸಾಧಾರಣವಾದ ಮಾನವೀಯ ಭಾವಗಳನ್ನು ಮಿಡಿಯಬೇಕು.

ಡಾ॥ರಾಮು : ಈ ಅಂಶಗಳನ್ನು ಕರ್ಣಾಟಕದ ಕಲಾಕೃತಿಗಳು ಸಾಧಿಸಿ ತೋರಿಸಿವೆ.

ಡಾ॥ಶೀಲ : ಎತ್ತರದ ಗಿರಿಶಿಖರದ ಮೇಲೆ ನಿಂತಿರುವ ಬೃಹದ್ ಭವ್ಯ ಗೊಮ್ಮಟೇಶ್ವರನನ್ನು ಕಂಡಾಗ, ಅಪೂರ್ವವಾದ ರೀತಿಯಲ್ಲಿ ಎರಡು ದೇವಾಲಯಗಳನ್ನು ಒಟ್ಟಾಗಿ ಸೇರಿಸಿದ ಹೊಯ್ಸಳೇಶ್ವರ ದೇವಾಲಯವನ್ನು ಪ್ರವೇಶಿಸಿದಾಗ, ಇಡೀ ಕಲ್ಲುಗುಡ್ಡವನ್ನೇ ಕೊರೆದು ನಿರ್ಮಿಸಿದ ಅಭೂತ ಪೂರ್ವವಾದ ಕೈಲಾಸದೇವಾಲಯದ ಬಳಿ ಸಾರಿದಾಗ, ಅಪಾರ ಅನುಕಂಪೆಯ ಚೈತನ್ಯ ಮೂರ್ತಿಯಾದ ಭೋಧಿಸತ್ತ್ವ ಪದ್ಮಪಾಣಿಯ ಪ್ರಭಾವಲಯಕ್ಕೆ ಒಳಗಾದಾಗ, ಎಲಿಫೆಂಟ ಗುಹೆಯನ್ನು ಹೊಕ್ಕು ಸೃಷ್ಟಿಸ್ಥಿತಿಪ್ರಲಯಗಳ ಸಾಂಕೇತಿಕ ನಿರೂಪಣೆಯ ಮಹಾ ಕಲಾಕೃತಿಯಾದ ತ್ರಿಮೂರ್ತಿಯ ಮುಂದೆ ನಿಂತಾಗ–ದೇಶಕಾಲಗಳ ಪರಿಮಿತ ವಲಯದಿಂದ ಮೇಲೇರಿ ವಿಶ್ವಮಾನವನ ಮಹತ್ಸಾಧನೆಯ ಸಾಕ್ಷಾತ್ಕಾರವನ್ನು ಪಡೆಯುತ್ತೇವೆ.

ಡಾ॥ರಾಮು : ಕರ್ಣಾಟಕ ಸಂಸ್ಕೃತಿಯ ಈ ಶಿಖರಗಳನ್ನು ಕಂಡು ಫರ್‌ಗೂಸನ್, ಹ್ಯಾವೆಲ್, ಕಸಿನ್ಸ್, ಪರ್ಸಿ ಬ್ರೌನ್, ಚಾರ್ಲ್ಸ್ ಫ್ಯಾಬ್ರಿ ಮೊದಲಾದ ಅನೇಕ ಪಾಶ್ಚಾತ್ಯ ತಜ್ಞರು ಮಾರುಹೋಗಿದ್ದಾರೆ.

ಡಾ॥ಶೀಲ : ಕರ್ಣಾಟಕದ ಕಲಾಕೃತಿಗಳು ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡಿವೆ. ಆದರೆ ಆ ಸ್ವಂತಿಕೆ. ಅವುಗಳ ಸುತ್ತಕಟ್ಟಿದ ಒಂದು ಬೇಲಿಯಾಗಿರದೆ, ಮೇಲೇರುವ ನಿಚ್ಚಣಿಗೆಯಾಗಿ ಪರಿಣಮಿಸಿದೆ. ವೈಶಿಷ್ಯವೆನ್ನುವುದು ಇತರರಿಂದ ಸಂಪೂರ್ಣ ಭಿನ್ನವಾಗಿವಾಗಿರಲೇ ಬೇಕೆಂಬ ವಿಕೃತ ಸಿದ್ಧಾಂತಕ್ಕೆಡೆ ಕೊಡಬಾರದು.

ಡಾ॥ರಾಮು : ಕರ್ಣಾಟಕದ ಕಲೆಗಳು ಮತ್ತು ಅವುಗಳನ್ನು ರೂಪಿಸಿದ ಜೀವನದೃಷ್ಟಿ ಸಹ ಇದರಿಂದ ಮುಕ್ತವಾಗಿವೆ.

ಡಾ॥ಶೀಲ : ಇತರ ಶೈಲಿಗಳಲ್ಲಿ ಕಾಣುವ ಒಳ್ಳೆಯ ಜೀವನದೃಷ್ಟಿ ಸಹ ಇದರಿಂದ ಮುಕ್ತವಾಗಿವೆ.

ಡಾ॥ರಾಮು : ಇತರ ಶೈಲಿಗಳಲ್ಲಿ ಕಾಣುವ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ಮತ್ತು ಅರಗಿಸಿಕೊಂಡು ಅವು ಪರಿಪುಷ್ಟವಾಗಿ ಬೆಳೆದಿವೆ.

ಡಾ॥ಶೀಲ : ಕಲಾವಂತಿಕೆಗಿರಬೇಕಾದ ಈ ಉದಾರಮನೋಭಾವದ ವಿಕಾಸಕ್ಕೆ ಕರ್ಣಾಟಕ ಪೋಷಕ ಭೂಮಿ ಯಾಗಿ ಪರಿಣಮಿಸಿತು.

ಡಾ॥ರಾಮು : ಧರ್ಮದಲ್ಲಿಯೇ ಆಗಲಿ, ಸಾಹಿತ್ಯದಲ್ಲಿಯೇ ಆಗಲಿ, ಇತರ ಯಾವ ಕಲಾಮಾಧ್ಯಮಗಳಲ್ಲಿಯೇ ಆಗಲಿ ಇನ್ನೊಂದು ಕಡೆಯಿಂದ ಒಳ್ಳೆಯದನ್ನು ತೆಗೆದುಕೊಳ್ಳಲು ಇದು ಎಂದೂ ಹಿಂದೆಮುಂದೆ ನೋಡಿಲ್ಲ.

ಡಾ॥ಶೀಲ : ಇದು ಅನುಕರಣೆಯಲ್ಲ, ಗುಣಗ್ರಾಹಿತನ, ಕರ್ಣಾಟಕ ಒಳ್ಳೆಯದನ್ನೆಲ್ಲ ಗ್ರಹಿಸಿತು; ಅನುಕರಿಸಲಿಲ್ಲ; ತನ್ನ ಪುನರನುಭವದಿಂದ ನೂತನವಾಗಿ ಸೃಷ್ಟಿಸಿತು.

ಡಾ॥ರಾಮು : ಆದುದರಿಂದ ಕರ್ಣಾಟಕ ಸಂಸ್ಕೃತಿಯಲ್ಲಿ ಮತ್ತು ಅದರ ಕಲಾಭಿವ್ಯಕ್ತಿಯಲ್ಲಿ ಎಲ್ಲ ಒಳ್ಳೆಯ ಅಂಶ ಗಳೂ ಸಮಾವೇಶಗೊಂಡುವು.

ಡಾ॥ಶೀಲ :ವಿಪುಲವೂ ವೈವಿಧ್ಯಪೂರ್ಣವೂ ವಿಸ್ತಾರವೂ ವ್ಯಾಪಕವೂ ಗಂಭೀರವೂ ಪೂರ್ಣದೃಷ್ಟಿಸಮನ್ವಿತವೂ ಆಗಿ ಬೆಳೆಯಲು ಈ ಮನೋಧರ್ಮ ಕಾರಣವಾಯಿತು.

ಡಾ॥ಶೀಲ : ಆಂತರಂಗಿಕ ಅನುಭವದ ಆಧ್ಯಾತ್ಮಿಕ ಸಾಧನೆಗಳು, ಧಾರ್ಮಿಕ ಆಚರಣೆಗಳು, ಹಬ್ಬಹರಿದಿನಗಳು, ಸಾಹಿತ್ಯಕಲೆಗಳು-ಮೊದಲಾದವುಗಳಿಂದ ಹಿಡಿದು ಬಹಿರಂಗದ ಪರಿಕರಗಳೆನ್ನಬಹುದಾದ ಬಟ್ಟೆ

ಡಾ॥ರಾಮು : ನೇಯುವುದು-ಬುಟ್ಟಿ ಹೆಣೆಯುವುದು. ಬಣ್ಣಹಾಕುವುದರ ವರೆಗಿನ ಎಲ್ಲ ಚಟುವಟಿಕೆಗಳೂ ವಿಶಾಲವಾದ ಅರ್ಥದಲ್ಲಿ ಈ ವಲಯದೊಳಕ್ಕೇ ಬರುತ್ತವೆ.

ಡಾ॥ಶೀಲ : ಜೀವನದ ಎಲ್ಲ ಅಂಗಗಳಲ್ಲಿಯೂ ಊರುಗಳ ಮತ್ತು ವ್ಯಕ್ತಿಗಳ ಹೆಸರುಗಳಲ್ಲಿಯೂ ನಾಡಿನ ಸಂಸ್ಕೃತಿಯ ಆತ್ಮಕಥೆ ಮಿಡಿಯುತ್ತಿದೆ.

ಡಾ॥ರಾಮು : ಬದಲಾಗುತ್ತಿರುವ ಸನ್ನಿವೇಶಕ್ಕೆ ಅನುಗುಣವಾಗಿ ಜನಜೀವನ ಹೊಂದಿಕೊಳ್ಳಬೇಕಾಗುತ್ತದೆ. ಹೊಸ ಹೊಸ ವಿಚಾರಗಳ ಮಂಥನದಿಂದ ಅನೇಕ ಹಳೆಯ ನಂಬಿಕೆಗಳು ಕುಸಿಯುತ್ತವೆ; ಹೊಸ ಬೆಳಕು ಮೂಡುತ್ತದೆ. ಅದು ಅನಿವಾರ್ಯ ಮತ್ತು ಅಗತ್ಯ; ಹಣ್ಣೆಲೆ ಉದುರಿ ಹೊಸ ಎಲೆ ಚಿಗುರುವಂತೆ ಸಹಜವೂ ಹೌದು. ವೃಕ್ಷ ಜೀವಂತವಾಗಿರುವುದರ ಲಕ್ಷಣ ಅದು.

ಡಾ॥ಶೀಲ : ಕರ್ಣಾಟಕ ಸಂಸ್ಕೃತಿ ಇಂಥ ಜೀವಂತ ಲಕ್ಷಣವನ್ನು ಪಡೆದು ಹೊಸ ಹೊಸ ಚಿಗುರನ್ನು, ಹೂವುಹಣ್ಣುಗಳನ್ನು ಅರಳಿಸುತ್ತ ಬಂದಿದೆ.

ಡಾ॥ರಾಮು : ತಳದಲ್ಲಿರುವ ತಾಯಿಬೇರಿನ ಸತ್ತ್ವದಿಂದ ಮೇಲೆ ಪಲ್ಲವಿಸಿ ನಿತ್ಯನೂತನವಾಗಿ ನಳನಳಿಸುತ್ತಿದೆ.

ಡಾ॥ರಾಮು : ಒಂದು ಸಂಸ್ಕೃತಿಯ ಹಿರಿಮೆ ಇರುವುದು ಅದರ ಶಿಖರಗಳಲ್ಲಿ ಮಾತ್ರವಲ್ಲ. ಅದರತ್ತ ಏರುವ ಒಂದೊಂದು ಹೆಜ್ಜೆಯಲ್ಲಿಯೂ ಅದು ವ್ಯಕ್ತವಾಗುತ್ತದೆ. ಪರಿಪಕ್ವ ಮನಸ್ಸಿನ ಪರಿಣತ ಫಲ ಸಂಸ್ಕೃತಿ.

**ಡಾ॥ಶೀಲ : ಇದರ ಹಿನ್ನೆಲೆಯನ್ನು ಒಳಗೊಂಡ ಕಲಾಕೃತಿಗಳು ಕಲಾವಿದನ ಪ್ರತಿಭೆಯ ಪ್ರತಿನಿಧಿ ಮಾತ್ರವಲ್ಲದೆ ಜನಾಂಗದ ನಿಧಿಯೂ ಆಗುತ್ತವೆ.**

**ಡಾ॥ರಾಮು : ಅವುಗಳ ವಿಕಾಸದಲ್ಲಿ ಜನಜೀವನದ ಪ್ರತಿಬಿಂಬವನ್ನೇ ಕಾಣುತ್ತೇವೆ.**

**ಡಾ॥ಶೀಲ : ಈ ಅರ್ಥದಲ್ಲಿ ಕಲೆ ಎನ್ನುವುದು ಸಮಾಜದ ಆತ್ಮಕಥೆ.**

**ಡಾ॥ರಾಮು : ಕರ್ಣಾಟಕದ ಕಲೆಗಳಿಗೆ ಈ ಮಾತು ಸಂಪೂರ್ಣವಾಗಿ ಅನ್ವಯಿಸುತ್ತದೆ. ಕನ್ನಡನಾಡಿನ ಆತ್ಮಕಥೆಯನ್ನು ಹೇಳುವ ಶಕ್ತಿಸಾಧನಗಳಾಗಿ ಅವು ಉಳಿದಿವೆ.**

# 11. ಕನ್ನಡ ನಾಡಿನ ಭೂ ಸ್ವರ್ಗದಲ್ಲಿ ಡಾ॥ ರಾಮು–ಡಾ॥ ಶೀಲ ! ! !

ಕಣಿವೆ ದಾರಿಯಲ್ಲಿ ಡೊಂಕುಡೊಂಕಾಗಿ ನಾಗರಹಾವಿನಂತೆ ಕಾರು ತಿರುಗಿ ತಿರುಗಿ ಹೋಗುತ್ತಿತ್ತು. ದಾರಿಯುದ್ದಕ್ಕೂ ಕಾಫಿ ತೋಟಗಳು, ಅವುಗಳ ನಡುವೆ ಬೆಳೆದ ಕಿತ್ತಲೆ ಗಿಡಗಳು ಜೊತೆಗೆ ಏಲಕ್ಕಿ ಮತ್ತು ಮೆಣಸಿನ ಗಿಡಗಳು ಸೊಂಪಾಗಿ ಬೆಳೆದು ಮಲೆನಾಡಿನ ಹಿರಿಮೆಯನ್ನು ಎತ್ತಿ ತೋರಿಸುತ್ತಿದ್ದುವು.

ಹಚ್ಚಹಸುರಿನ ಗಿಡಗಳು ಗುಂಪು ಗುಂಪಾಗಿ ಬೆಳೆದಿರುವುದನ್ನು ದೂರದಿಂದ ನೋಡಿದರೆ ಗಿಡ ಗಳದ್ದೇ ಗುಡ್ಡವೇನೋ ಬೆಟ್ಟವೇನೋ ಎನ್ನಿಸುತಿತ್ತು. ಅಲ್ಲಲ್ಲೇ ಮೂರು ನಾಲ್ಕು ಮನೆಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಇದ್ದವು. ಏನೇ ಆದರೂ 'ಕರ್ನಾಟಕದ ಕಾಶ್ಮೀರ' ಎಂದು ನಿಸರ್ಗ ಸೌಂದರ್ಯಕ್ಕೆ ಹೆಸರಾದ ಈ ಮಲೆನಾಡಿನ ಸೌಂದರ್ಯ, ತಣ್ಣನೆಯ ಹವಾ ವರ್ಣನಾತೀತವಾಗಿತ್ತು.

ಕಾರು ತಿರುವುಗಳಲ್ಲಿ ಹೋದಾಗಲೆಲ್ಲ ಡಾ॥ರಾಮುವಿನ ಮೇಲೆ ಬಿದ್ದಾಗ ಡಾ॥ಶೀಲಳಿಗೆ ನಾಚಿಕೆ ಯಾಗುತ್ತಿತ್ತು. ಇಕ್ಕೆಲದ ಮರಗಳ ನಡುವೆ ಕೊಂಕಿ, ಬಳುಕಿ ಹರಿದು ಹೋಗಿ ಕಣ್ಮರೆಯಾಗುತ್ತಿದ್ದ ರಸ್ತೆ ಯನ್ನು ಸಲಸಲವೂ ಬಯಕೆಯ ನಯನಗಳಿಂದ ಡಾ॥ಶೀಲ ನಿರೀಕ್ಷಿಸುತ್ತ ಕುಳಿತಿದ್ದಳು.

ಅಂಕುಡೊಂಕಾದ ಈ ರಸ್ತೆಗಳಲ್ಲಿ ಗುಡ್ಡಗಳನ್ನು ಹತ್ತಿ ಇಳಿಯುವುದೇ ಮೋಜು. ಅವರು ಒಬ್ಬರ ಮುಖವನ್ನೊಬ್ಬರು ನೋಡಿದರು. ನೋಟ ಬೆರೆಯಿತು. ಹೃದಯಗಳನ್ನು ಒಲುಮೆ ಬಂಧಿಸುವ ರೀತಿಯೇ ಅದು.

ದಾರಿಯಲ್ಲಿದ್ದ ಹೋಟಲ್‌ನಲ್ಲಿ ಕಾಫಿ ಮುಗಿಸಿದ ಮೇಲೆ ಕಾರು ತಲಕಾವೇರಿಯ ಕಡೆಗೆ ಹೊರಟಿತು. ಮೊದಲು ಸಿಕ್ಕಿದ್ದು ತಗ್ಗಿನ ಪ್ರದೇಶವಾದ ಭಾಗಮಂಡಲ. ಪವಿತ್ರಾತ್ಮರಾದ ಮಹಾಋಷಿಗಳು ತಪಸ್ಸನ್ನು ಆಚರಿಸಿದ ಸ್ಥಳ. ಅಲ್ಲಿ ಕೆಲವು ದೇವಸ್ಥಾನಗಳನ್ನು ದರ್ಶನಮಾಡಿ ಹೊರಟಾಗ ಡಾ॥ಶೀಲ ಸ್ಥಳ ಮಹಿಮೆ ಯನ್ನು ಡಾ॥ರಾಮುವಿಗೆ ವಿವರಿಸತೊಡಗಿದಳು.

ಹಿಂದೆ ಈ ಕ್ಷೇತ್ರಕ್ಕೆ ಭಾಗಮಂಡಲವೆಂದೂ, ಷಣ್ಮುಖಸ್ವಾಮಿಯಿಂದ ಅನುಗ್ರಹ ಪಡೆದು ಈ ಭೂಭಾಗವನ್ನು ಕೊಡುಗೆಯಾಗಿ ಸ್ವೀಕರಿಸಿದುದರಿಂದ ಮಲೆನಾಡಿನ ಈ ಭೂಭಾಗಕ್ಕೆ ಕೊಡಗು ಎಂಬ ಹೆಸರು ಬಂದಿದೆ. ಜೊತೆಗೆ ಕಡಿದಾದ ಬೆಟ್ಟಗಳಲ್ಲಿ ದಟ್ಟವಾದ ಅಡವಿ ಪ್ರದೇಶವನ್ನು ಹೊಂದಿರುವುದರಿಂದ ಇದಕ್ಕೆ 'ಕೊಡಗು' ಎಂಬ ಹೆಸರು ಬಂದಿತ್ತೆಂದು ಹೇಳುವವರು ಇದ್ದಾರೆ. ಒಟ್ಟಿನಲ್ಲಿ ಇದು ಕೋಟೆ ಬೆಟ್ಟಗಳ ನಾಡು.

ತಲಕಾವೇರಿಯತ್ತ ಮಲೆನಾಡ ಅಡವಿಯಲ್ಲಿ ಪ್ರಕೃತಿ ತಾಯಿಯ ಮಡಿಲಲ್ಲಿ ಕಾರು ವೇಗವಾಗಿ ಹೋಗುತ್ತಿತ್ತು. ಅತ್ತಕಾಡು, ಇತ್ತಕಾಡು, ದಟ್ಟವಾದ ಅರಣ್ಯಶ್ರೇಣಿ. ಎತ್ತರವಾಗಿದ್ದ ಮರಗಳಿದ್ದೆಡೆ ಆಕಾಶವೇ ಒಂದು ನೀಲಿಯ ಓಣಿ! ನಿಸರ್ಗ ಸೌಂದರ್ಯಕ್ಕೆ ರಮಣೀಯತೆಯನ್ನು ಲೇಪಿಸಿದಂತೆ ಇಲ್ಲಿ ಪ್ರಕೃತಿ ಅವರ್ಣನೀಯವಾಗಿ ಕಂಗೊಳಿಸುತ್ತಿತ್ತು. ಕಣ್ಣು ಹರಿಸಿದಲ್ಲೆಲ್ಲ ಈ ಚೆಲುವು ಚೆಲ್ಲುವರಿದು ಹಬ್ಬಿಕೊಂಡಿತು.

ಒಟ್ಟಿನಲ್ಲಿ ಈ ಪ್ರಾಂತ್ಯ ಸೃಷ್ಟಿಸೌಂದರ್ಯದಲ್ಲಿ, ಬೆಟ್ಟ, ಗುಡ್ಡ, ಪರ್ವತ, ನದಿ, ಕೊಳಗಳು, ವನ, ಫಲ-ಪುಷ್ಪ ಹಾಗೂ ಪಕ್ಷಿ - ಪ್ರಾಣಿಗಳಿಂದ ತುಂಬಿದ ಆವಾಸಸ್ಥಾನವೋ ಎಂಬಂತೆ ಶೋಭಿಸುತ್ತಿತ್ತು. ಸ್ವರ್ಗಎನ್ನುವುದು ಭೂಮಿಯ ಮೇಲೆ ಎಲ್ಲಿಯಾದರೂ ಇದ್ದರೆ ಕಾಶ್ಮೀರವನ್ನು ಬಿಟ್ಟರೆ ಅದು ಮಲೆನಾಡಿನಲ್ಲಿ ಮಾತ್ರ ಎಂದು ನಿಸ್ಸಂದೇಹವಾಗಿ ಹೇಳಬಹುದಿತ್ತು.

ದಾರಿಯಲ್ಲಿ ಡಾ||ಶೀಲ ಡಾ||ರಾಮುವಿಗೆ ತಲಕಾವೇರಿಯ ಇತಿಹಾಸವನ್ನು ಹೇಳ ತೊಡಗಿದಳು. ಕಾವೇರನೆಂಬ ಬ್ರಾಹ್ಮಣನು ಬ್ರಹ್ಮಗಿರಿಯಲ್ಲಿ ತನಗೆ ಸಂತತಿಯಾಗಬೇಕೆಂಬ ಬಯಕೆಯಿಂದ ಬ್ರಹ್ಮದೇವ ನನ್ನು ಕುರಿತು ತಪಸ್ಸು ಮಾಡಿದನಂತೆ. ಬ್ರಹ್ಮನು ತನ್ನ ಮಾನಸ ಪುತ್ರಿಯಾದ ಲೋಪಾಮುದ್ರೆಯನ್ನು ಕಾವೇರನಿಗೆ ದತ್ತು ಪುತ್ರಿಯಾಗಿ ಕಾವೇರಿಯೆಂಬ ನಾಮಾಂಕಿತದಿಂದ ಕೊಟ್ಟನಂತೆ. ಅವಳು ಆಶ್ರಮದಲ್ಲಿ ಬೆಳೆದು ದೊಡ್ಡವಳಾದಾಗ ಅಗಸ್ತ್ಯ ಮಹಾಋಷಿಗಳು ಅಲ್ಲಿಗೆ ಬಂದು ದೇವ ದೇವತೆಗಳ ಸಮ್ಮುಖದಲ್ಲಿ ವೇದೋಕ್ತವಾಗಿ ವೈಭವದಿಂದ ವಿವಾಹವಾದರಂತೆ.

ಒಂದು ದಿನ ಅಗಸ್ತ್ಯರು ಕಾವೇರಿಯನ್ನು ಜಲರೂಪವಾಗಿ ತನ್ನ ಕಮಂಡಲದಲ್ಲಿ ಆಹ್ವಾನಿಸಿ ಹೋಗುತ್ತಿದ್ದಾಗ, ದೈವ ಸಂಕಲ್ಪದ ಮೇರೆಗೆ ಕಾವೇರಿ ಜಲರೂಪವಾಗಿ ಹರಿದು ಭಾಗಮಂಡಲದ ಕಡೆ ಹೊರಟಳಂತೆ, ಅಲ್ಲಿಂದ ಬಲುಂಬುರಿಯಲ್ಲಿ ರಭಸವಾಗಿ ಹರಿಯ ತೊಡಗಿದಾಗ ಕದಂಬರಾಜಪುತ್ರ ರಾಜ ಚಂದ್ರವರ್ಮನ ಸಂತತಿಗೆ ಸೇರಿದ ಸ್ತ್ರೀಯರ ಸೀರೆ ನೆರಿಗಿಯು ಹಿಂಬಂದಿಗೆ ಸರಿದು ಹೋಯ್ತಂತೆ, ಆಗ ಕಾವೇರಿಯು ತಾನು ನದಿಯಾಗಿ ಹರಿದಿದುರ ಜ್ಞಾಪಕಾರ್ಥವಾಗಿ ಆ ದಿನ ಹಿಂದೆ ಸರಿದ ಸೆರಗು ಮುಂದೆಯೂ ಹೀಗೆಯೇ ನೆರಿಗೆ ಕ್ರಮವಾಗಿ ಸ್ತ್ರೀಯರಿಂದ ನಿತ್ಯಾಚರಣೆಯಲಲ್ಲಿ ಅನುಸರಿಸುವಂತಾಗಲಿ ಎಂದು ಹರಿಸಿದಳಂತೆ. ಅದಕ್ಕೆ ಮಲೆನಾಡಿನ ಈ ಭಾಗದ ಸ್ತ್ರೀಯರು ಸೀರೆಯ ನೆರಿಗೆಯನ್ನು ಈ ರೀತಿ ಕಟ್ಟುವುದು ಎಂದು ಹೇಳಿ ಕಾರನ್ನು ನಿಲ್ಲಿಸಿ ಲಜ್ಜೆಯಿಂದ ಡಾ||ರಾಮುವಿನ ಕಡೆ ನೋಡಿದಳು. ಆ ವೇಳೆಗೆ ಕಾರು ತಲಕಾವೇರಿಯನ್ನು ತಲುಪಿತು.

ತಲಕಾವೇರಿಯು ದಟ್ಟಡವಿಯ ವನದೇವತೆಯ ಸೌಂದರ್ಯದಿಂದ ಕಂಗೊಳಿಸುತ್ತಿತ್ತು. ಅದು ಮನಮೋಹಕ ನಿಸರ್ಗರಮಣೀಯ ಸ್ಥಳ. ಗಾಂಭೀರ್ಯ ಸೌಂದರ್ಯಗಳಿಂದ ಕೂಡಿ ನೆಲೆ ನಿಂತಿರುವ ಬ್ರಹ್ಮಗಿರಿ, ಗಜರಾಜಗಿರಿ, ವಾಯುಗಿರಿ, ಅಗ್ನಿಗಿರಿ ಎಂಬ ನಾಲ್ಕು ಬೆಟ್ಟಗಳ ನಡುವಿನ ಕಣಿವೆಯಲ್ಲಿ "ಶ್ರೀ ಕ್ಷೇತ್ರ ಕಾವೇರಿ" ಯು ಕಂಗೊಳಿಸುತ್ತಿತ್ತು. ಪರ್ವತಶ್ರೇಣಿಯ ಇಡೀ ವಾತಾವರಣ ಬ್ರಹ್ಮತತ್ವದಿಂದ ಸುಸ್ಪಂದಿಸುತ್ತಿದ್ದಂತೆ ಅನುಭವವಾಗುತ್ತಿತ್ತು.

ಡಾ||ರಾಮು, ಡಾ||ಶೀಲ ಮೆಟ್ಟಲುಗಳನ್ನು ಹತ್ತುತ್ತ ಬ್ರಹ್ಮಗಿರಿಯ ನೆತ್ತಿಗೆ ಹೋದರು. ರಮಣೀಯವೂ, ಶಾಂತವೂ ಆದ ಆ ಸ್ಥಳದಲ್ಲಿ ಭೂಮಿಯೂ ಆಕಾಶವೂ ಒಂದು ಹಾಲ್ಗಡಲಂತೆ ಕಿನ್ನರ ಪ್ರಪಂಚದಲ್ಲಿ ಇದ್ದಂತೆ ತೋರಿತು. ಡಾ||ಶೀಲ ರಾಮುವಿನ ಹತ್ತಿರ ಸರಿದು ಕುಳಿತಳು.

ಆ ಕಾಡಿನ ಹಿನ್ನೆಲೆಯಲ್ಲಿ, ಆ ವನ್ಯಪಕ್ಷಿ ಕೂಜನದ ಸಮ್ಮೋಹಕತೆಯಲ್ಲಿ, ಆ ಜಾಗ ಎಷ್ಟು ಏಕಾಂತವಾಗಿತ್ತು ಎಂದರೆ ಹೊಚ್ಚ ಹೊಸ ಗಂಡಹೆಂಡಿರ ಶೃಂಗಾರ ಜೀವನವನ್ನೂ ಪ್ರಣಯ ಚೇಷ್ಟೆ ಗಳನ್ನು ಉದ್ದೀಪಿಸಿದಷ್ಟು ಉದಾರವಾಗಿತ್ತು. ಅನೇಕ ಮಧುರ ಸುಮಧುರ ಸಾಹಸಮಯ ಪೂರ್ವಾನುಭ ಗಳಿಗೆ ಕಾರಣವಾಗಿದ್ದ ಆ ತಾಣದ ಮಹಾತ್ಮೆಯಿಂದಲೊ ಏನೊ ಡಾ||ಶೀಲಳ ಭಾವಕೋಶ ತುಂಬಿ ಅರಳಿದಂತಾಗಿ ಸಂಸ್ಕಾರ ರೂಪದಲ್ಲಿದ್ದ ಅವಳ ಕನ್ಯತ್ವ ಹೊರಕ್ಕೆ ಹಾರಿತು.

ಸ್ನೇಹ, ಪ್ರೀತಿ, ಸೌಹಾರ್ದ, ಆದರಗಳಿಂದ ಆವಳ ಕೈಗಳು ಅವನನ್ನು ಬಿಗಿದುವು. ಆಗ ಭೂಷಣಗಳು ಅಲುಗಾಡಿ ಝುಣಝುಣತ್ಕಾರ ಮಾಡಿದವು. ಅವನ ತೋಳು ಅವಳನ್ನು ಬಳಸಿತ್ತು. ಅವರಿಬ್ಬರು ಪ್ರೇಮ ಬಂಧನದಿಂದ ಬಂಧಿತರಾಗಿದ್ದರು. ತನ್ನ ಪ್ರೀಯಕರನ ದೇಹವನ್ನು ಡಾ||ಶೀಲ ಶ್ರೀಗಂಧದ ಮರವನ್ನು ಸುತ್ತಿಕೊಂಡಿರುವ ಸರ್ಪವೂ ಎಂಬಂತೆ ತನ್ನ ಎರಡು ಕೋಮಲವಾದ ಬಾಹುಲತೆಗಳಿಂದ ಅತ್ಯಂತ ಗಾಢವಾಗಿ ಬಿಗಿದಪ್ಪಿದ್ದಳು.

ಬೆರಳಿನಿಂದ ಮಿಡಿದರೆ ಸಾಕು ಬಿರಿಯುವಂತೆ ಇರುವ ಸುವರ್ಣದ ಕೊಡಗಳಂತಿರುವ ಡಾ||ಶೀಲಳ ಸ್ತನಗಳು ಡಾ||ರಾಮುವಿನ ವಿಶಾಲವಾದ ಮತ್ತು ಧೃಡವಾದ ಎದೆಯ ಗಾಢಾಲಿಂಗನದ ಒತ್ತುವಿಕೆಯಿಂದ

ಸ್ರವಿಸುತ್ತಿರುವ ಹಾಲಿನ ಬಿಂದುಗಳೊ ಎಂಬಂತೆ ಕಂಠಾಹಾರ ಕಿತ್ತುಹೋಗಿ ಅದರ ಮುತ್ತುಗಳು ಒಂದೊಂದಾಗಿ ಸುರಿದು ಬೀಳುತ್ತಿದ್ದವು.

ಡಾ॥ಶೀಲ ವಿಭ್ರಮೆ, ವಿಲಾಸ, ಬೆಡಗು, ಬಿನ್ನಾಣಗಳ ಮಾಧುರ್ಯವನ್ನು ಸೂಸುವ ಪ್ರೇಮ ಕಟಾಕ್ಷ ವನ್ನು ಬೀರಿದಳು. ಅವನ ಎದೆಯ ಮೇಲೆ ಒರಗಿದಳು. ಕೆಂಪನೆಯ ಗಲ್ಲಗಳು ಇನ್ನೂ ಕೆಂಪಾದವು. ಎಷ್ಟು ಮುದ್ದಿಸಿದರೂ ಸಾಲದು ಎನ್ನಿಸುತ್ತಿತ್ತು. ಅದೇನೋ ಉದ್ವೇಗ, ಅದೇನೋ ಆತುರ, ವಸಂತ ಕಾಲದ ಇಂಚರ, ಬಾನಾಡಿಯ ಹಾರಾಟ, ನವಿಲಿನ ನಲಿದಾಟ, ಹೂದುಂಬಿಯ ಚೆಲ್ಲಾಟಗಳು ಕಾರ್ಗತ್ತಲಲ್ಲಿ ಮಿಣುಕು ಹುಳುಗಳಂತೆ ಅವಳ ಸ್ಮೃತಿಪಟಲದಲ್ಲಿ ಹಾದು ಹೋಗುತ್ತಿದ್ದಂತಾಯಿತು.

ಡಾ॥ಶೀಲ ತನ್ನ ದೇಹವನ್ನು ಅವನನ್ನು  ಕೆಣಕುವಂತೆ ಬಾಗಿಸಿ ಅವನ ಹೃದಯವನ್ನು ಮೀಟು ವಂತಹ ಮೃದುವಾದ ಧ್ವನಿಯಲ್ಲಿ "ಈ ಲಕ್ಷ್ಮಿಗೆ ವಿಷ್ಣುವಿನ ಹೃದಯದಲ್ಲಿ ಶಾಶ್ವತ ಸ್ಥಾನವಿರುವುದು ತಾನೇ?" ಎಂದು ಕೇಳಿದಳು. "ಮೌನವೇ ವಿಷ್ಣುವಿನ ಪ್ರೇಮದ ಭಾಷೆ,  ಪ್ರೇಮಕ್ಕೆ ಯಾವ ಭಾಷೆಯ ಅಗತ್ಯವಿದೆ? ಕಣ್ಣು ಪ್ರೇಮದ ಭಾಷೆಯನ್ನಾಡುವ ನಾಲಿಗೆಯಲ್ಲವೇ ಲಕ್ಷ್ಮೀ?" ಎಂದು ಹೇಳಿ ಅವನು ಅವಳನ್ನು ರಮಿಸುವಂತೆ  ಮಾತನಾಡಿದನು. ಅವನ ಮಾತು ಅವಳ ಹೃದಯದಲ್ಲಿ ಹರಿದಾಡಿತು. ಮಾತಿನ ರಸಿಕತೆಯ ಮೋಡಿಯಿಂದ ಸುರಸುಂದರಿಯಂತೆ ಕಾಣುತ್ತಿದ್ದಳು.

ಡಾ॥ರಾಮುವಿನ ಭರವಸೆ ಅವಳಿಗೆ ಉತ್ಸಾಹ ನೀಡಿತು. ಅತನ ಉಕ್ಕಿನಂತಹ ತೋಳುಗಳ ಬಂಧನದಲ್ಲಿ ಆರೋಗ್ಯ ಸೂಸುವ ಮುಖದಲ್ಲಿ ಜೇನುಬಣ್ಣದ ಮೈಕಾಂತಿಯ ಹೊಳಪಿನ ವಿಸ್ತಾರವಾದ ಎದೆಯ ಮೇಲೆ ಒರಗಿದಳು. ಆಗ ಆ ಶೋಭನೆ ತನ್ನ ರಮಣನ ದೇಹವೆಂಬ ಕಲ್ಪವೃಕ್ಷವನ್ನು ಸುತ್ತಿ ಕೊಂಡು ಹಬ್ಬಿರುವ ಬಳ್ಳಿಯಂತೆ ಕಾಣುತ್ತಿದ್ದಳು.

ಕೋಮಲ ಕಪೋಲಗಳ ಮೇಲೆ ಪ್ರೇಮದ ಧ್ವನಿಗಳು ಚೆಲ್ಲುತ್ತಿದ್ದವು. ತನ್ನ ಹೃದಯಾಂತ ರಾಳದಲ್ಲಿ ತೂರಿ ಬರುತ್ತಿದ್ದ ಸಂತಸಕ್ಕೆ ಡಾ॥ಶೀಲ ಏನೆಂದು ಹೇಳಬೇಕು? ಆಕೆಯ ಹೃದಯದ ಹದಿನಾರು ಸಾವಿರ ಬಾಗಿಲುಗಳೆಲ್ಲವೂ ತೆರೆದು ಒಂದೊಂದರಿಂದಲೂ ತನ್ನ ಪ್ರಿಯತಮನನ್ನು ಎದುರು ನೋಡಿ ಆತನ ಒಲುಮೆಯನ್ನು ಬರಮಾಡಿಕೊಳ್ಳುತ್ತಿದ್ದವು.

ಆಕೆ ಓಡೋಡಿ ಬಂದು ಡಾ॥ರಾಮುವನ್ನು ಅಪ್ಪಿ ಮುದ್ದಾಡಿ ಮುತ್ತು ಕೊಟ್ಟು ದಿವ್ಯಪ್ರೇಮ ಲೋಕಕ್ಕೆ ಎಳೆದೊಯ್ದು ಅವನನ್ನು ಅಲಿಂಗಿಸಿ, ಚುಂಬಿಸಿ ಒತ್ತಿಕೊಂಡು ಪುಲಕಿತೆಯಾಗಿ ಆನಂದ ಮಗ್ನೆಯಾಗಿ ದ್ದಳು. ಅಲ್ಲಿ ಪ್ರೇಮದ ರಸ ಜೇನೇ ತುಂಬಿತು. ಮಧುರ ಮನಸ್ಸುಗಳ ಮಿಲನದಲ್ಲಿ ಸುಂದರ ಕನಸುಗಳ ಸ್ವರ್ಗಧಾಮವೇ ಸೃಷ್ಟಿಯಾಗಿತ್ತು. ಶತಕೋಟಿ  ತಾರೆಗಳೇ ಚಲಿಸಿದವು. ಪ್ರಪೂರ್ಣ ಚಂದ್ರನೇ ಆಗ ಮುಖ ಲೋಕದಲ್ಲಿ ವಿಜೃಂಭಿಸಿದ್ದ. ರಾಗ-ರಸ-ಭಾವಗಳೇ ಮೈಗೂಡಿ ಬಂದಿದ್ದವು. ಸನ್ನಿವೇಶ ರತಿ-ಮನ್ಮಥರ ಮಧುರರಸ ಸಮಯವನ್ನು ನೆನಪಿಗೆ ತರುತ್ತಿತ್ತು. ಪ್ರಕೃತಿ ಪುರುಷನ ಸಂಗಮವಾಗುತ್ತಿರುವಂತೆ ತೋರುತ್ತಿತ್ತು.

ಡಾ॥ಶೀಲಳಿಗೆ ತನ್ನ ಜೀವನ ಸಾರ್ಥಕವೆನ್ನಿಸಿತು. ಆಕೆಯ ಹೃದಯ ಈಗ ಸುಮಧುರವಾಗಿ ಹಾಡುತ್ತಿತ್ತು. ತಾನೆಂದೂ ಪ್ರೀತಿ ಪ್ರೇಮಗಳಿಂದ ತುಂಬಿರುವ ಹೊಸ ಸ್ವರ್ಗೀಯ ಪ್ರಪಂಚಕ್ಕೆ ಬಂದಿದ್ದೇನೆಂದು ಕೊಂಡಳು.

ತಲಕಾವೇರಿಯ ದರ್ಶನದಿಂದ ಪುಳಕಿತಳಾಗಿ ಆ ಬನದಲ್ಲಿ ಅವರು ಸ್ವಚ್ಛಂದವಾಗಿ ಅಲೆದು ಓಡಾಡಿ, ಕುಣಿದು ಕುಪ್ಪಳಿಸುತ್ತ ವಿನೋದ, ತಮಾಷೆಗೆ ಅನೇಕ ಚಲನಚಿತ್ರಗಳ ಯುಗಳಗೀತೆ (ಡ್ಯೂಯಲ್‌ಸಾಂಗ್ಸ್)ಗಳ ಪದಪುಂಜಗಳ ಪಂಕ್ತಿಗಳನ್ನು ಒಲವಿನಿಂದ ಹಾಡಿ ನಲಿದಾಡತೊಡಗಿದರು.

ಡಾ||ರಾಮು: ಕೊಡಗಿನ ಕಾವೇರಿ ……….. ಕಾವೇರಿ ನೀ ಬೆಡಗಿನ ವೈಯ್ಯಾರಿ ।
ನೀ ಕನ್ನಡ ಕುಲನಾರಿ … ಗಂಧದ ಸೀಮೆಯ ಸೌಂದರ್ಯಲಹರಿ ।

ಡಾ||ಶೀಲ : ಕಾವೇರಿ ತಾಯಿಯೇ ನಮ್ಮವ್ವ । ನಾವು ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು ।

ಡಾ||ರಾಮು: ಕನ್ನಡ ಭಾಷೇನೆ ನನ್ ಜೀವ । ನಾವು ಮೆಟ್ಟಿದರೆ ಕನ್ನಡ ಮಣ್ಣಿನ್ ಮೆಟ್ಟಬೇಕು ।

ಡಾ||ಶೀಲ : ಈ ಮಲೆನಾಡ ಮಣ್ಣು ಅಂದರೆ ಚಿನ್ನಾ । ಇಲ್ಲಿ ಹೆಣ್ಣು ಬಲು ಚೆನ್ನ ।

ಡಾ||ರಾಮು: ಈ ಕನ್ನಡ ನಾಡಿನಲ್ಲಿ ಹುಟ್ಟೋದೀನು ರನ್ನ । ಇಲ್ಲಿ ನಡೆ ಅಂದ ನುಡಿ ಚಂದ ।

ಡಾ||ಶೀಲ : ಇಲ್ಲಿ ಬಂಡೆಯ ಕೆತ್ತಿದರೆ ಬೇಲೂರು ಶಿಲಾಬಾಲಿಕೆ । ಪ್ರೇಮಕ್ಕೆ ಸ್ವರ್ಗ ಇದು ।

ಡಾ||ರಾಮು: ಇಲ್ಲಿ ಬೆಟ್ಟವ ಸುಲಿದರೆ ಬೆಳಗೊಳದ ಗೊಮ್ಮಟೇಶ್ವರ । ಧ್ಯಾನಕ್ಕೆ ಭೂಮಿ ಇದು ।

ಇಬ್ಬರೂ : ಈ ಭೂಮಿಮ್ಯಾಗೆ ಯಾರೋ ತೋಟಗಾರನು । ಮಲೆನಾಡ ಮಾಡಿಹೋಗ್ಯಾನೆ । ಈ ಹಾಲಿನ ಹೊಳೆಯಾಗಿ ಹರಿಯುವ ನೀರಲ್ಲಿ । ಬೆಳ್ಳಿಯ ಹಕ್ಕಿಯಾಗಿ ಹಾರಿಹೋಗಿ ನಾವು ಸಂಚಾರ ಮಾಡುವ ಬಾರ ।।

ಡಾ||ಶೀಲ : ಹೂವು ಚೆಲುವಾಗಿ ಅರಳಿ ದುಂಬಿ ಸೆಳೆಯೋದು ಸಹಜ ।

ಡಾ||ರಾಮು: ಹೆಣ್ಣು ಸೊಗಸಾಗಿ ಬೆಳೆದು ಗಂಡು ಬಯಸೋದು ಸಹಜ ।

ಡಾ||ಶೀಲ : ಯಾವುದೋ ನಂಟು । ನಮ್ಮಿಬ್ಬರ ನಡುವೆ ವಿಧಿ ಬೆಸೆದ ಗಂಟು ।

ಡಾ||ರಾಮು: ಯಾರಿಗೆ ಯಾರುಂಟು । ಈ ಸಂಸಾರ ನೀರಿನ ಮೇಲಿನ ಗುಳ್ಳೆಗಳ ಗಂಟು ।

ಡಾ||ಶೀಲ : ಮನವ ಕದ್ದ ರಾಜ ಮನಸ್ಸು ಕೊಡೆನು ಎಂದ । ಅನುಮಾನ ತೊರೆದಾಗ ಅನುರಾಗ ಬೆರೆತಾಗ ಜೀವನವೇ ಅಂದ ಚೆಂದ ಮಕರಂದ ।

ಡಾ||ರಾಮು: ಈ ನನ್ನ ಜೀವನವೂ ಸಂಘರ್ಷವು । ಇದು ನನ್ನ ಜೀವನ ಮಹಾಸಂಗ್ರಾಮವು ।

ಡಾ||ಶೀಲ : ಬಾಳ ಬಂಗಾರ ನೀನು । ಹಣೆಯ ಸಿಂಗಾರ ನೀನು । ನಿನ್ನ ಕೈಲಾಡೋ ಬೊಂಬೆ ನಾನಯ್ಯ । ಬೇಡೆಂದು ಜರಿದು ನೀ ದೂರ ಹೋದರೂ । ಬಿಡದಂತೆ ನಿನ್ನ ನೆರಳಾಗಿ ಬರುವೆ । ನೂರಾರು ಜನುಮ ನೀ ತಾಳಿ ಬಂದರೂ । ಸತಿಯಾಗಿ ನಿನ್ನ ಜೊತೆಯಲ್ಲೆ ಇರುವೆ ।

ಡಾ||ರಾಮು: ಏನ್ ಹುಡ್ಗೀರೋ ಇದ್ಯಾಕಿಂಗಾಡ್ತೀರೋ । ಲವ್ವು, ಲವ್ವು ಅಂತ ಕಣ್ಣೀರಿಡ್ತೀರೋ ।

ಡಾ||ಶೀಲ : ಪ್ರೀತಿ ಮಾಡು ತಪ್ಪೇನಿಲ್ಲ । ಅಂತಾ ಎಲ್ಲ ಹೇಳ್ತಾರಲ್ಲ । ನಾ ಮೆಚ್ಕೊಂಡಿರೋ ನಾ ಹಚ್ಕೊಂಡಿರೋ ದೇವರು ಕಲ್ಲಾ ।

ಡಾ||ರಾಮು: ಹೂವು ಎಂದೂ ತಾನಾಗಿ ಅರಳಬೇಕಮ್ಮ ಪ್ರೀತಿ ಎಂದೂ ತಾನಾಗಿ ಹುಟ್ಟಬೇಕಮ್ಮ ಎಡವಿದ ಮೇಲೆ ನೋವುಂಟು । ದುಡುಕಿದ ಮೇಲೆ ವ್ಯಥೆಯುಂಟು ।

ಡಾ||ಶೀಲ : ಲೋಕವೆ ಹೇಳಿದ ಮಾತಿದು । ವೇದದ ಸಾರವೇ ಕೇಳಿದು । ನಾಳಿನ ಚಿಂತೆಯಲಿ ಬಾಳಬಾರದು । ಬಾಳಿನ ಮೂಲವ ಇಲ್ಲಿ ಕೇಳಬಾರದು ।

ಡಾ||ರಾಮು: ಅಂತಿಂಥ ಗಂಡು ನಾನಲ್ಲ । ನಾನೇ ಬೇರೆ ನನ್ನ ಸ್ಟೈಲೇ ಬೇರೆ ।

ಡಾ||ಶೀಲ : ಅಂತಿಂಥ ಹೆಣ್ಣು ನಾನಲ್ಲ । ನನ್ನಂಥ ಹೆಣ್ಣು ಭೂಲೋಕದಲ್ಲಿ ಬೇರಿಲ್ಲ ।

ಇಬ್ಬರೂ : ಮನವೇ ಸುಖಸಾಧನ ಅನುದಿನ ನಗುತಿರೆ ಆನಂದ ಜೀವನ ಆತ್ಮ ಅವಲೋಕನ ।

ಡಾ॥ಶೀಲ : ಚೆಲುವೆ ಒಂದು ಕೇಳ್ತಿನಿ । ಇಲ್ಲ ಅಂದ್ರೆ ಕೊಡ್ತೀಯ । ನಿನ್ನ ಪ್ರೀತಿ ಮಾಡ್ತಿನಿ । ಮನಸ್ಸು ಹೃದಯ ಕೊಡ್ತೀಯಾ ।

ಡಾ॥ರಾಮು: ನಿನ್ನ ಪ್ರೀತಿ ಮಾಡ್ತಿನಿ । ನಿಜವಾದ ಹೆಣ್ಣೆ ಆದ್ರೆ ನೀನು ಗಂಡನ್ನ ಗೆಲ್ಲೆ ನೀನು । ಮನಸ್ಸನ್ನು ಕದಿಯೇ ನೀನು । ಆಮೇಲೆ ಪ್ರೀತಿ ಅಲ್ಲವೇನು ।

ಡಾ॥ಶೀಲ : ಸ್ವಾಭಿಮಾನದ ನಲ್ಲ ಸಾಕು ಸಂಯಮ ಬಲ್ಲೆ ।

ಡಾ॥ರಾಮು: ತುಂಬು ಹರೆಯದ ಹೊಸ ಹೆಣ್ಣೆ । ಒಲೆಯ ಮೇಲಿನ ಹಸಿ ಬೆಣ್ಣೆ ।

ಡಾ॥ಶೀಲ : ಕೀಟಲೆ ಮಾಡುವ ಹೀರೋ ನಿನ್ನಾಟಕೆ ಗೋಲಿ ಮಾರೋ ।

ಡಾ॥ರಾಮು: ದುಡ್ಡಿನ ಜಂಭದ ಕೋಳಿ । ನಿಲ್ಲಿಸೆ ನಿನ್ನ ಚಾಳಿ ।

ಡಾ॥ಶೀಲ : ಈ ಘಾಟಿ ಹೆಣ್ಣಿನ ಮುಂದೆ ಈ ತುಂಟಾಟವು ಬೇಡಪ್ಪ ।

ಡಾ॥ರಾಮು: ಈ ಭರ್ಜರಿ ಗಂಡಿನ ಮುಂದೆ ಬಂಡಾಟವು ಬೇಡಮ್ಮ ।

ಡಾ॥ಶೀಲ : ನೀನೊಂದು ಸಲ ನಕ್ಕು ಎನ್ನನ್ನೂ ನಗಿಸು । ನಿನ್ನ ನಗು ಮೊಗದಲ್ಲಿ ಎನ್ನ ಮೈ ಮರೆಸು । ಜನುಮ ಜನುಮದಲ್ಲಿ ಈ ಜೀವ ನಿನಗೆ ಮುಡುಪಾಗಿದೆ ।

ಡಾ॥ರಾಮು: ನಿಜವ ನುಡಿಯಲೆ ನನ್ನಾಣೆ ನಲ್ಲೆ । ಪ್ರೀತಿಯ ರಂಗು ನೀ ಚೆಲ್ಲಿದೆ । ಪ್ರೇಮದ ಗುಂಗು ನನ್ನಲ್ಲಿ ಮೂಡಿದೆ ।

ಡಾ॥ಶೀಲ : ನನ್ನೆದೆ ಹೊಸ ನಗೆಯ ಕಂಡಿದೆ । ಬಾಳಿಗೆ ಭರವಸೆ ತಂದಿದೆ । ಆಸೆಯು ಅಲೆ ಅಲೆಯಾಗಿ ಕೂಗಿದೆ ।

ಡಾ॥ರಾಮು: ನನ್ನಲ್ಲಿ ಪ್ರೀತಿ ತಂದೋಳು ನೀನೆ । ಇದು ಪ್ರೀತಿಯ ಸ್ಪಂದನ । ಪ್ರೇಮದ ಬಂಧನ ।

ಇಬ್ಬರು : ಬದುಕೆಲ್ಲ ಒಂಟಿಯಾಗಿ ಅಲೆದಾಡಿ । ಇನ್ನೆಂದು ಒಂಟಿಯಿಲ್ಲ ನಮ್ಮ ಜೋಡಿ । ಸ್ವರಗಳ ಮಾಧುರ್ಯ ಮೃಗಗಳ ತಣಿಸೆ । ರಾಗದ ಸೌಂದರ್ಯ ಖಗಗಳ ಸೆಣಸೆ । ಲತೆಗಳು ಓಲಾಡಿವೆ ಹೂಗಳು ತೂಗಾಡಿವೆ । ನಮ್ಮ ನಯನದಿ ನಯನ ಬೆರೆತು ಮನ ತಣಿಯಿತು ಮನ ಕುಣಿಯಿತು ಇದು ಎನೂ ಮಾಯವ್ರೋ ।।

ಡಾ॥ಶೀಲ : ಈ ಕಣ್ಣಿಗೂ ಗಂಡಿಗೂ ಏನೂ ಸ್ನೇಹವ್ರೋ । ಹೊಸ ಸ್ನೇಹದಲ್ಲಿ ನವಜೀವನ ಸವಿಕಂಡೆ । ಹೊಸ ಪ್ರೇಮದಲ್ಲಿ ಹೊಸ ಬಾಳಿನ ಆನಂದ ಕಂಡೆ ।

ಡಾ॥ರಾಮು: ಈ ಹೆಣ್ಣಿಗೂ ಪ್ರೀತಿಗೂ ಏನೂ ಬಂಧನವ್ರೋ । ಜೀವನವೇ ಆಸೆಗಳ ಸರಮಾಲೆ । ಯೌವನವೇ ಆದರೊಳಗೆ ಮುತ್ತಿನ ಮಣಿಮಾಲೆ । ಎದೆಯಲ್ಲಿ ಸಾವಿರ ವೀಣೆಯ ನಾದ ಇದೇ ತಾನೇ ಅನುರಾಗ ।

ಡಾ॥ಶೀಲ : ಇಂಪಾಗಿ ಹಾಡಿದೆ ಪ್ರೇಮದ ಮೃದಂಗ ಇದೇ ತಾನೇ ಶುಭಯೋಗ ।

ಡಾ॥ರಾಮು: ಸುಳಿ ಮಿಂಚೊಂದು ಬಾನಿಂದ ಜಾರಿ ನಿನ್ನ ಮೈಯಲ್ಲಿ ಹರಿದಾಡಿತೇನು ।

ಡಾ॥ಶೀಲ : ನನ್ನ ಉಸಿರಾಟ ಬಿಗಿಯಾಗಿ ಹೋಗಿ ತನು ಅರಳುತ್ತ ಹೂವಾಯಿತೇನು ।

ಡಾ॥ರಾಮು: ಹೆಣ್ಣಿನ ಗಮ್ಮತ್ತು ನಿನಗೇರಿದೆ ಇವತ್ತು ।

ಡಾ॥ಶೀಲ : ಅದೆ ಗಂಡನ್ನು ಮೈ ಮರೆಸುವ ಮ್ಯಾಜಿಕ್ಕು ।

ಡಾ॥ರಾಮು: ಹೃದಯ ಪ್ರೀತಿಯ ಹಾಡನು ಹಾಡಿದೆ । ನಯನ ಪ್ರೇಮದ ಬಯಕೆ ಹೇಳಿದೆ ।

ಡಾ॥ಶೀಲ : ಬಾಳು ಸಂಗಾತಿಯ ಜೊತೆ ಬೇಕೆಂದಿದೆ । ಮನವು ನಲ್ಲನ ಕೂಡಲು ಕಾದಿದೆ ।

ಡಾ॥ರಾಮು: ರಾಗ ತಾಳ ಬೆರೆತ ಹಾಗೆ ಇನ್ನೆಷ್ಟು ಜನುಮ ಈ ಪ್ರೀತಿ ಕೊಡುವೆ ।

ಡಾ॥ಶೀಲ : ಜೀವಭಾವ ಸೇರಿದ ಹಾಗೆ ಈ ನಿನ್ನ ಸ್ನೇಹಕೆ ಮರುಜನ್ಮ ಪಡೆವೆ ।

ಇಬ್ಬರೂ : ನಮ್ಮ ಆಸೆ ಅನುರಾಗದ ಆನಂದ ಬೇಕೆಂದಿದೆ । ಸಂಸಾರ ಸತ್ಯ ಅರಿತಾಗ ಬಾಳು ಬಂಗಾರವು ದಾಂಪತ್ಯ ಆದರ್ಶವು ।।

ಡಾ॥ರಾಮು: ಸರಸಿ ಚೆಲುವಿನ ಆರಿಸಿ ಬಂದಳು ನನ್ನರಸಿ । ಕವನ ಕಾವ್ಯ ನಾಟ್ಯ ಗಮಕ ಕಲೆಗಳ ಸಿಂಗರಿಸಿ । ನೋಡಲು ಮೋಹಕ ಕೂಡಲು ಪ್ರೇರಕ ಏನೂ ಮಾಯವ್ರೋ ।

ಡಾ॥ಶೀಲ : ಲಲಿತೇ ಶ್ರೀ ಲಲಿತೆ ನೀ ನನ್ನ ಸೌಭಾಗ್ಯಧಾತೆ ದೇವಿ । ಶಂಕರಿ ಶುಭಕರಿ ಸೌಂದರ್ಯ ಲಹರಿ ಕೈ ಹಿಡಿದು ನಡೆಸೆನ್ನ ಸರ್ವೇಶ್ವರಿ ।

ಇಬ್ಬರೂ : ಪ್ರೇಮಲೋಕದಿಂದ ಬಂದ ಪ್ರೇಮದ ಸಂದೇಶ ಭೂಮಿಯಲ್ಲಿ ಹಾಡಿ ತಿಳಿಸೋಣ । ಪ್ರೀತಿ ಹಂಚೋಣ ಆನಂದ ಪಡೆಯೋಣ ಪ್ರೇಮದ ರಹಸ್ಯ ಹೇಳೋಣ ।।

ಡಾ॥ಶೀಲ : ಕನ್ನಡಾಂಬೆಗೆ ಜಯವೆನ್ನಿ ಕನ್ನಡ ಕುಲಕೆ ಶುಭವೆನ್ನಿ ।

ಕನ್ನಡ ನುಡಿಯ ಬೆಳಗಲು ಒಂದು ಗೂಡಿ ಬನ್ನೀ ।

ಡಾ॥ರಾಮು: ಹಚ್ಚೇವು ಕನ್ನಡದ ದೀಪ ಕರುನಾಡ ದೀಪ ಸಿರಿನುಡಿಯ ದೀಪ । ಚಿರಕಾಲ ಬೆಳಗಲಿ ಕನ್ನಡದ ದೀಪ ।

ಡಾ॥ಶೀಲ : ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ।

ಡಾ॥ರಾಮು: ಸಂಗೀತ ಕನ್ನಡ, ಸಾಹಿತ್ಯ ಕನ್ನಡ । ಸಂಸ್ಕೃತಿ ಕನ್ನಡ, ಜಾಗೃತಿ ಕನ್ನಡ । ಧಾರ್ಮಿಕ ಚೇತನ ನಿಲುವೆಲ್ಲ ಕನ್ನಡ । ಎಂದೆಂದು ಮೆರೆಯಲಿ ಈ ನಮ್ಮ ಕನ್ನಡ ।

ಇಬ್ಬರೂ : ನಡೆ ಮುಂದಕೆ ನಡೆ ಮುಂದಕೆ ಬಂದಿದೆ ವೇಳೆ । ಈ ವೈಭವ ವಿಜಯೋನ್ನತಿ ರಾಜೇಶ್ವರಿ ಲೀಲೆ । ಬೆಳಗಲಿ ಬೆಳಗಲಿ ಸುವರ್ಣ ಕರ್ನಾಟಕ ಸಾಮ್ರಾಜ್ಯ । ಧ್ವಜ ಪತಾಕೆ ಬೆಳಗಲಿ । ಕನ್ನಡ ಕೀರ್ತಿ ಕಹಳೆ ಎಲ್ಲೆಡೆಯು ಮೊಳಗಲಿ ।

ಡಾ॥ಶೀಲ : ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ । ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೇ ಹಾಡು ಬಾ ಕೋಗಿಲೆ । ಕನ್ನಡದ ಕಸ್ತೂರಿ ತಿಲಕವಿಟ್ಟೂ । ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ ।

ಡಾ॥ರಾಮು: ಕನ್ನಡ ಕಾವ್ಯಗಳ ಮಾಲೆ ತೊಟ್ಟು । ಕನ್ನಡದ ಕಾಲ್ಗೆಜ್ಜೆ ನಾದ ತೊಟ್ಟು । ಹೊನ್ನೊಡೆ ಭೂಮಿಯಲಿ ಹೆಜ್ಜೆಯಿಟ್ಟೂ । ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ । ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೇ ಹಾಡು ಬಾ ಕೋಗಿಲೆ ।

ಡಾ॥ಶೀಲ : ಇದೇ ಹೊಸ ಹಾಡು । ಹೃದಯ ಸಾಕ್ಷಿ ಹಾಡು । ಹೃದಯಾಸೆ ಭಾಷೆ ಈ ಹಾಡು । ಚಂದ್ರಕಾಂತಿ ಚಿಮ್ಮಿದ ಹಾಡು ಜನ್ನ ಜನ್ನದ ಪುಣ್ಯದ ಹಾಡು । ಕನ್ನಡಾಂಬೆ ಕಲಿಸಿದ ಹಾಡು ಎಂದು ಯಾರು ಮರೆಯದ ಹಾಡು ।

ಡಾ॥ರಾಮು: ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ । ಶಾಂತಿಯೆ ಉಸಿರಾಗಿರಲಿ । ಸೇವೆಯೆ ಗುರಿಯಾಗಿರಲಿ ।

ಡಾ॥ಶೀಲ : ಒಂದೇ ನಾಡು ಒಂದೇ ಕುಲವು ಒಂದೇ ದೈವವು । ಒಮ್ಮನದಿಂದ ಎಲ್ಲರು ದುಡಿದರೆ ಜಗವನೆ ಗೆಲ್ಲುವೆವು ।

ಡಾ॥ರಾಮು: ಹುಟ್ಟಿದ್ದರೇ ಕನ್ನಡ ನಾಡಿಲ್ಲಿ ಹುಟ್ಟಬೇಕು । ಮೆಟ್ಟಿದರೇ ಕನ್ನಡ ಮಣ್ಣನು ಮೆಟ್ಟಬೇಕು । ಬದುಕಿದು ಜಟಕೀ ಬಂಡೀ । ಇದು ವಿಧಿ ಓಡಿಸುವ ಬಂಡೀ । ಇದು ವಿಧಿ ಅಲೆದಾಡಿಸುವಾ ಬಂಡೀ । ಇದು ವಿಧಿ ದಡ ಸೇರಿಸುವಾಬಂಡೀ ।

ಇಬ್ಬರೂ : ಆ.. ಆಹ... ಆಹ.. ಆಹಹಾ.... ಓಹೋಹೋ... ಒಓಹೋ.. ನಾವಾಡುವ ನುಡಿಯೇ ಕನ್ನಡ ನುಡಿ ಚಿನ್ನದ ನುಡಿ ಸಿರಿಗನ್ನಡ ನುಡಿ । ನಾವಿರುವಾ ತಾಣವೆ ಗಂಧದ ಗುಡಿ.. ಅಂದದಗುಡಿ.. ಚಂದದಗುಡಿ.. ।

ಡಾ॥ಶೀಲ : ಇದು ಯಾರ ತಪಸಿನ ಫಲವೋ ಈ ಕಂಗಳು ಮಾಡಿದ ಪುಣ್ಯವೋ । ನಾವಿರುವಾ ತಾಣವೆ ಗಂಧದಗುಡಿ.. ಅಂದದಗುಡಿ.. ಚಂದದಗುಡಿ.. ।

ಡಾ॥ರಾಮು: ಕನ್ನಡದ ರವಿ ಮೂಡಿಬಂದ ಮುನ್ನಡೆವ ಬೆಳಕನ್ನು ತಂದಾ । ಕನ್ನಡ ರಾಜ್ಯೋತ್ಸವ ನಮ್ಮ ಕರ್ನಾಟಕ ರಾಜ್ಯೋತ್ಸವ ।

ಡಾ॥ಶೀಲ : ಶ್ರೀಗಂಧ ಸೌಗಂಧ ತುಂಬಿರುವ ನಾಡಿದು । ಶಿಲ್ಪಕಲೆಯ ಜೀವಂತ ಸ್ವರ್ಗವಾದ ಗೂಡಿದು ।

ಡಾ॥ರಾಮು: ಕರ್ನಾಟಕ ಸಂಗೀತ ಸಮ್ಮೋಹಿನಿ । ಕನ್ನಡದ ಸಾಹಿತ್ಯ ಸುಧೆ ವಾಹಿನಿ । ಕನ್ನಡದ ಕಣ ಕಣವು ಸಂಜೀವಿನಿ । ರಸಜೀವಿ ನೀನಾಗು ಬಾ.ಬಾ.ಬಾ.ಬಾ. ।

ಡಾ॥ಶೀಲ : ಜೇನಿನ ಹೊಳೆಯೋ ಹಾಲಿನ ಮಳೆಯೋ । ಸುಧೆಯೋ ಕನ್ನಡ ಸವಿ ನುಡಿಯೋ ।

ಡಾ॥ರಾಮು: ಕವಿ ನುಡಿ ಕೋಗಿಲೆ ಹಾಡಿದ ಹಾಗೆ । ಮಲ್ಲಿಗೆ ಹೂಗಳು ಅರಳಿದ ಹಾಗೆ । ಸುಮಧುರ ಸುಂದರ ಈ ಕನ್ನಡ ನುಡಿಯೋ ।

ಡಾ॥ಶೀಲ : ಅಪಾರ ಕೀರ್ತಿಗಳಿಸಿ ಮೆರವ ಭವ್ಯನಾಡಿದು । ಕರ್ನಾಟಕ ವಿದುವೇ ನೃತ್ಯ ಶಿಲ್ಪಕಲೆಯ ಬೀಡಿದು ।

ಡಾ॥ರಾಮು: ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ । ಬಾ ಕನ್ನಡಿಗ, ಲೋಕ ಸನ್ಮಾನಿತ ಹೊಸ ಚರಿತ್ರೆ ಬರೆಯುವ । ಭಾರತಾಂಬೆ ಮುಕುಟಮಣಿ ಕನ್ನಡಿಗನೆ ಎನ್ನಿಸುವ ।

ಇಬ್ಬರೂ : ಜಯ ಭಾರತ ಜನನಿಯ ತನುಜಾತೆ । ಜಯಹೇ ಕರ್ನಾಟಕ ಮಾತೆ । ಸರ್ವಜನಾಂಗದ ಶಾಂತಿಯ ತೋಟ । ಜಯಹೇ ಕರ್ನಾಟಕ ಮಾತೆ । ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ । ಜಯಹೇ ಕರ್ನಾಟಕ ಮಾತೆ । ಜಯಹೇ ಕರ್ನಾಟಕ ಮಾತೆ ।

ಡಾ॥ರಾಮು: ಕನ್ನಡ ಹೊನ್ನುಡಿ ದೇವಿಯನ್ನು ನಾ ಪೂಜಿಸುವೆ ಆರಾಧಿಸುವೆ । ನಾ ಎಂದು ಬರೆಯುತ ಬಾಳುವೆ ನಾ ಕನ್ನಡ ಡಿಂಡಿಮ ಬಾರಿಸುವೆ ।

ಡಾ॥ಶೀಲ : ಸಿರಿಗನ್ನಡದ ಚರಿತೆಯ ನಾವು ಸ್ವರ್ಣಾಕ್ಷರದಲ್ಲಿ ಬರೆಯೋಣ । ಕರ್ನಾಟಕ ಮಾತೆಯ ಹರಕೆಯ ಹೊತ್ತು ರಚಿಸುವ ನವಯುಗ ನಿರ್ಮಾಣ ।

ಅವರ ಪರಿಹಾಸ್ಯದಿಂದ ಸುತ್ತಣ ಅರಣ್ಯ ಅವರ ನಗೆಯ ಅಲೆಯಿಂದ ನಲಿಯಿತು. ನವಯೌವ್ವನ, ರೂಪುಲಾವಣ್ಯ ಭೂಷಿತರಾಗಿ ಶೋಭಿಸುತ್ತ, ಆ ಉಪವನದ ಸರೋವರದಲ್ಲಿ ಡಾ॥ರಾಮು, ಡಾ॥ಶೀಲ ಆಡುತ್ತಿದ್ದ ಜಲಕೇಳಿ ರಸಿಕ ಮನವನ್ನು ಭ್ರಾಂತಿಗೊಳಿಸುತ್ತ ಮೋಹಗೊಳಿಸುತ್ತಿತ್ತು.

ಕಣ್ಣುಗಳೋ ಮರಿಮೀನುಗಳೋ, ಮುಖವ್ರೋ, ತಾವರೆ ಹೂವ್ರೋ, ತ್ರಿವಳಿಗಳೋ ನೀರಿನ ಅಲೆಗಳೋ, ಕುತ್ತಿಗೆಯೋ ದಕ್ಷಿಣಾವರ್ತದ ಶಂಖವ್ರೋ, ಕುಚಗಳೋ ತಾವರೆಯ ಮೊಗ್ಗುಗಳೋ, ನಿತಂಬ ಪ್ರದೇಶವ್ರೋ ಮರುಳು ದಿಣ್ಣೆಗಳೋ, ಮೈ ಬಣ್ಣವ್ರೋ ತಿಳಿನೀರೋ, ಸೊಂಟವ್ರೋ ತಾವರೆದಂಟೋ ಎಂಬಂತೆ ಡಾ॥ಶೀಲ ಜಲಕ್ರೀಡೆ ಆಡುತ್ತಿರಲು ಡಾ॥ರಾಮು ಸರಸ ಸಲ್ಲಾಪವನ್ನಾಡುತ್ತ, ಶೃಂಗಾರ ರಸ ಭಾವಗಳನ್ನು ಪ್ರಕಟಿಸುತ್ತ ವಿನೋದದಿಂದ ಓಕುಳಿಯಾಟವಾಡುತ್ತ, ಡಾ॥ಶೀಲಳೊಡನೆ ಕಾಲಕಳೆಯ ತೊಡಗಿದನು. ಅವರು ಮೇಲಕ್ಕೆ ಎಸೆದ ತಿಳಿನೀರು ಕೆಳಕ್ಕೆ ತುಂತುರು ತುಂತುರು ಹನಿಗಳಾಗಿ ಬೀಳುತ್ತಿರುವ ನೋಟವು ಹೃದಯಸಂಗಮವಾಗಿತ್ತು. ನೋಟಕರ ಕಣ್ಮನಗಳನ್ನು ತಣಿಸುತ್ತಿತ್ತು.

ಡಾ॥ಶೀಲ ಸೌಂದರ್ಯದ ಸೌರಭವನ್ನು ಮೀರಿಸುವ ಅಂಗಾಂಗಗಳನ್ನು ಪಡೆದು ರೂಪ ಸಾಮ್ರಾಜ್ಞಿಯಾಗಿ ಆಗ ತೋರತೊಡಗಿದಳು. ಅವಳ ಪ್ರೀತಿ ಉಕ್ಕುವಂತಿತ್ತು. ಎವೆಯಿಕ್ಕದೆ, ಪ್ರಶಂಸನೀಯ ದೃಷ್ಟಿಯಿಂದ ಡಾ॥ರಾಮುವನ್ನೇ ನೋಡಿದಳು. ''ಇಂಥ ಚೆಲುವರು ಇನ್ನಿದ್ದಾರೆಯೇ ?'' ನಾನೆಂಥ ಪುಣ್ಯವಂತೆ ಎಂದು ಕೊಂಡಳು.

ಕಾಡಿನ ಹಸಿರು ಅಲ್ಲಲ್ಲಿ ಹೊಂಬಿಸಿಲಿನ ರಂಗಿನಲ್ಲಿ ಸುಮನೋಹರವಾಗಿ ಮನಮೋಹಿಸುವಂತಿತ್ತು. ಅಲ್ಲೇ ತೋಟ ಒಂದರ ಮೂಲೆಯಲ್ಲಿ ಇದ್ದ ಒಂದು ಪಾರಿಜಾತದ ಹೂವಿನ ಮರದಲ್ಲಿ ಕೋಟಿ ಕೋಟಿ, ಮಿಣುಕು ಹುಳುಗಳು ಕಿಕ್ಕಿರಿದು ಮುತ್ತಿ ಬೆಳಕನ್ನು ಚಿಮ್ಮಿ ಚಿಮ್ಮಿ ಚಿಮುಕಿಸುತ್ತಿದದ್ದು ಚೆತೋಹಾರಿ ದೃಶ್ಯವಾಗಿತ್ತು! ಅದನ್ನು ನೋಡಿ ನೋಡಿ ಡಾ॥ರಾಮು ಡಾ॥ಶೀಲ ಮೈ ಮರೆತು ತಣಿದರು.

ಆ ದಿವ್ಯ ವಾತವರಣದ ದೃಶ್ಯದ ಆಸ್ವಾದನೆಯಲ್ಲಿ ಬಹಳ ಹೊತ್ತು ಮಗ್ನರಾದರು. ಹಗಲಿಗೂ, ಇರುಳಿಗೂ ನಡುವಣ ಸಂಧಿಸಮಯದ ಸೌಂದರ್ಯ ಕಾಂತಿ ಮಲೆನಾಡನ್ನು ಅಪ್ಪಿಕೊಂಡಂತಿತ್ತು. ಯಾರ ಪರಿವೆಯೂ ಇಲ್ಲದೆ ಅವರಿಬ್ಬರೂ ಆಟ, ನೋಟ, ಓಟಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಹಾಡ ತೊಡಗಿದರು.

ಆ ರಾತ್ರಿ ಎಸ್ಟೇಟ್‌ನಲ್ಲೇ ಅವರು ತಂಗಿದ್ದರು. ರಾತ್ರಿಯೆಲ್ಲ ಮಳೆಯೋ ಮಳೆ! ''ಭೋ', ರೆಂಬ ಗಾಳಿಯ ಸದ್ದು! ಬೆಳಗ್ಗೆ ಮಂಜು, ಮೋಡ, ಗಾಳಿ, ಛಳಿ! ಬಾಗಿಲು ತೆರೆದರೆ ಸಾಕು ಮೋಡ ಕೊಠಡಿಯೊಳಗೆ ಬೆಳ್ಳಿಯ ಹೊಗೆಯಂತೆ ನುಗ್ಗುತಿತ್ತು. ಹೊರಗೆ ಬಂದ ಡಾ॥ರಾಮು ಡಾ॥ಶೀಲ ಆ ಮಂಜಿನಲ್ಲಿ, ಮೋಡದ ಮಂಜಿನಲ್ಲಿ, ಆ ಚಳಿ ಉಡುರಿನಲ್ಲಿ, ಆ ಗಾಳಿಯಲ್ಲಿ ಗಡಗಡ ನಡುಗಿದರು. ಆಗ ಅವರ ಬಾಯಿಂದ 'ಹಾ ಸೃಷ್ಟಿಯೇ! ಹಾ ಜೀವನವೇ!' ಎಂಬ ಉದ್ಗಾರದ ಮಾತು ಹೊರಬಂತು.

ಮಾರನೆಯ ದಿನ ಬೆಳಗ್ಗೆ ಕಾರು ಕ್ರೂರ ಮೃಗಗಳಿಂದ ಕೂಡಿದ ಕಾಡು ಕಣಿವೆ ಮಲೆಗಳಲ್ಲಿ ಸಂದಿ ಸಂದಿಗೊಂದಿಗಳಲ್ಲಿ, ಹಳ್ಳ, ಕೊಳ್ಳ ಹೊಳೆಗಳನ್ನು ದಾಟಿ ದುರ್ಗಮವಾದ ದಾರಿಯಲ್ಲಿ ಹಾದು ಶೃಂಗೇರಿಯ ಕಡೆಗೆ ಹೊರಟಿತು.

ಡಾ॥ರಾಮು ಮಲೆಯ ಕಣಿವೆಗಳ ಕಡೆ ಕಣ್ಣು ಹಾಯಿಸಿ, ಕಣ್ಣರಳಿಸಿ ಹಿಗ್ಗಿ ವಿಸ್ಮಯದಿಂದ ನೊರೆ ನೊರೆ ಹಾಲು ನಿಂತ್ಹಾಂಗೆ ನಿಂತ ಕಾವಣ ಕಂಡು ಅದು ಕಾಡನ್ನೆಲ್ಲ ಮುಚ್ಚಿರುವುದನ್ನು ಮೆಚ್ಚಿ ''ಏನು ಚೆಂದವಾಗಿ ಕಾಣುತ್ತದೆ ಡಾ॥ಶೀಲ! ನಾನು ಇಂಥಹ ಪ್ರಕೃತಿ ಸೌಂದರ್ಯದ ಸೊಬಗಿನ ಸೌರಭವನ್ನು ನೋಡೇ ಇರಲಿಲ್ಲ. ಸವಿದೂ ಇರಲಿಲ್ಲ!'' ಎಂದು ಅಚ್ಚರಿಗೊಂಡು ಹೇಳಿದನು. ''ಬರೀ ಬೆಂಗಳೂರಿನಲ್ಲೇ ಕೂತುಕೊಂಡಿದ್ರೆ ಇದೆಲ್ಲ ಹೇಗೆ ಕಾಣುತ್ತದೆ. ಎಲ್ಲಿ ಕಾಣುತ್ತದೆ. ನೋಡಿದಿರಾ ನನ್ನ ಜೊತೆ ಬಂದಿದಕ್ಕೆ ಏನೇನ್ನೆಲ್ಲ ಕಾಣುತ್ತದೆ? ಎಂದು ವೈಯಾರದಿಂದ ಕೇಳಿದಳು.

ಆ ವೇಳೆಗೆ ಪೂರ್ವ ದಿಂಗತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೆಳುತ್ತಿದ್ದನು. ಆಗ ಕಣಿವೆಗಳನ್ನು ತುಂಬಿದ ಆ ಮಂಜಿನ ನೊರೆ ನೊರೆಯ ಸಮುದ್ರ, ಹಸಿರು ದ್ವೀಪಗಳಂತೆ, ನಡುನಡುವೆ ತಲೆಯೆತ್ತಿದ್ದ ಮಲೆನೆತ್ತಿಗಳು ಮೂಡಿ ಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ ಡಾ॥ರಾಮುವಿನ ಹೃದಯದಲ್ಲಿ ಭೂಮಾನುಭೂತಿ ಸಂಚಾರವಾಗುವಂತೆ ಮಾಡಿತು.

ಆಗ ಡಾ॥ರಾಮು ''ಎಂತಹ ದೃಶ್ಯ ಸ್ವರ್ಗವಿರುವುದು! ಇದನ್ನು ನೋಡಲು ತಕ್ಕ ಕಣ್ಣಿರಬೇಕು'' ಎಂದನು. ಆಗ ಡಾ॥ಶೀಲ ''ನಮಗಾಗಿಯೇ ಪ್ರಕೃತಿ ಮಾತೇ ದೃಶ್ಯ ಸೌದರ್ಯಗಳನ್ನು ಮಂಜಿನ ಪರದೆ ಗಳ ಸಹಾಯದಿಂದ ವಿರಚಿಸಿ ತೋರಿಸುತ್ತಿದ್ದಾಳೆಯೋ ಏನೋ'' ಎಂದು ವಿಸ್ಮಯ ಆನಂದದಿಂದ ನಲಿದು ನಕ್ಕು ಹೇಳಿದಳು. ''ಇರಬಹುದು'' ಎಂದು ಒಪ್ಪಿ ಹೇಳಿದ ಡಾ॥ರಾಮು.

ದಾರಿಯಲ್ಲಿ ಡಾ॥ಶೀಲ ಡಾ॥ರಾಮುವಿಗೆ ಶೃಂಗೇರಿಯ ಇತಿಹಾಸವನ್ನು ಹೇಳ ತೊಡಗಿದಳು. ''ಶೃಂಗೇರಿಯ ನಿಜವಾದ ಹೆಸರು ಋಷ್ಯಶೃಂಗಗಿರಿ. ದಿನ ಬಳಕೆಯ ಉಪಯೋಗದಲ್ಲಿ ಶೃಂಗೇರಿ ಯಾಯಿತಂತೆ. ಹಿಂದೆ ಅಲ್ಲಿ ತಪಸ್ಸು ಮಾಡುತ್ತಿದ್ದ ವಿಭಾಂಡಕನೆಂಬ ಋಷಿಗೆ ಋಷ್ಯಿಶೃಂಗನೆಂಬ ಮಗ ನಿದ್ದನಂತೆ. ಅವನು ಕಾಡಿನಲ್ಲಿ ಮನುಷ್ಯ ಸಂಪರ್ಕವಿಲ್ಲದೇ ಬೆಳೆದು ಯೌವ್ವನಕ್ಕೆ ಬಂದಿದ್ದರೂ ಒಬ್ಬ ಹೆಂಗಸನ್ನೂ ನೋಡಿರಲಿಲ್ಲವಂತೆ.

ಆಗ ಆಂಗ ರಾಜ್ಯದಲ್ಲಿ ಮಳೆ ಇಲ್ಲದೆ ಕ್ಷಾಮಡಾಮರಗಳು ಉಂಟಾದಂತೆ. ಋಷ್ಯಿಶೃಂಗನನ್ನು ಹೇಗಾ ದರೂ ಮಾಡಿ ಅಂಗರಾಜ್ಯಕ್ಕೆ ಕರೆತಂದರೆ ಆ ರಾಜ್ಯದಲ್ಲಿ ಸುಭಿಕ್ಷವಾಗುವುದೆಂದು ದೊರೆ ಲೋಮಪಾದ ನಿಗೆ ಅವನ ಗುರುಗಳು ಸಲಹೆ ಮಾಡಿದರಂತೆ. ದೊರೆಯ ಮಗಳು ರಾಜಪುತ್ರಿ ಶಾಂತಾ ಋಷ್ಯಶೃಂಗನನ್ನು ಹೇಗಾದರೂ ಮೋಹಿಸಿ ಕರತರಬೇಕೆಂದು ನಿರ್ಣಯವಾಯಿತಂತೆ. ಒಮ್ಮೆ ಶಾಂತ ಮತ್ತು ಆಕೆಯಗೆಳತಿ ಯರು ತಪೋವನವಾಸಿಗಳಂತೆ ವೇಷಧರಿಸಿ ಋಷಿ ವಿಭಾಂಡಕ ನಿಲ್ಲದ ವೇಳೆಯಲ್ಲಿ ಋಷ್ಯಶೃಂಗನಲ್ಲಿಗೆ ಹೋಗಿ ತಮ್ಮ ಕ್ರೀಡಾ ವಿನೋದಗಳಿಂದ ಅವನ ಗಮನವನ್ನು ಸೆಳೆದರಂತೆ. ಆಗ ಅವನು ಅವರನ್ನು ತನ್ನ ಆಶ್ರಮಕ್ಕೆ ಕರೆದೊಯ್ದು ಎಲ್ಲರಿಗೂ ಆತಿಥ್ಯ ನೀಡಿದನಂತೆ. ಮರುದಿನ ಅವರು ತಮ್ಮ ಆಶ್ರಮಕ್ಕೆ ಬರ ಬೇಕೆಂದು ಋಷ್ಯಶೃಂಗನನ್ನು ಆಕರ್ಷಣೆಯಿಂದ ಮರುಳುಮಾಡಿ ಮನ ವೊಲಿಸಿದರಂತೆ. ಮಾರನೇಯ ದಿನ ತನ್ನ ಸುಂದರ ಸಹಯಾತ್ರಿಕರೊಂದಿಗೆ ನದಿಯಲ್ಲಿ ಹೂವಿನ ತೆಪ್ಪ ಏರಿ ಅಂಗರಾಜ್ಯಕ್ಕೆ ತೆರಳಿದನಂತೆ.

ಅವನು ಅಂಗ ರಾಜ್ಯದಲ್ಲಿ ಕಾಲಿರಿಸಿದೊಡನೆಯೇ ಅಲ್ಲಿ ಮಳೆ ಸುರಿದು ಮರಳಿ ಸುಭಿಕ್ಷ ಉಂಟಾಯಿ ತಂತೆ. ಸಂತಸಗೊಂಡ ಲೋಮಪಾದ ಮಗಳನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡಿದನಂತೆ. ಇದೇ ಋಷ್ಯಶೃಂಗ. ಅಯೋಧ್ಯೆಯ ರಾಜ ದಶರಥನ ಆಚಾರ್ಯನಾಗಿ ಅಶ್ವಮೇಧ ಯಾಗವನ್ನು ನೆರವೇರಿ ಸಿದನಂತೆ. ಅದರ ಫಲವಾಗಿ ದಶರಥನಿಗೆ ಸಂತಾನ ಪ್ರಾಪ್ತಿಯಾಗಿ ರಾಮಾಯಣಕ್ಕೆ ಕಾರಣವಾಯಿ ತಂತೆ'' ಎಂದು ಡಾ॥ಶೀಲ ಸ್ಥಳದ ಇತಿಹಾಸದ ಹಿನ್ನಲೆಯನ್ನು ತಿಳಿಸಿದಳು.

ಆ ನಿಬಿಡಾರಣ್ಯಗಳ ಮಧ್ಯೆ ನೀರವ ನಿರ್ಜನವಾದ ರಸ್ತೆಯಲ್ಲಿ ಕತೆ ಹೇಳುವ ಮತ್ತು ಕತೆ ಕೇಳುವ ಸ್ವಾರಸ್ಯದಲ್ಲಿ ಮಗ್ನರಾಗಿ ಅದುವರೆಗೆ ಕುಳಿತ್ತಿದ್ದ ಡಾ॥ಶೀಲ ಮತ್ತು ಡಾ॥ರಾಮು ಸ್ವಲ್ಪಹೊತ್ತು ಏನನ್ನೂ

ಮಾತನಾಡದೆ ಕಾಡಿನ ದಾರಿಯ ಆಜುಬಾಬುಗಳನ್ನು ವಿಕ್ಷೀಸುತ್ತಿದ್ದರು. ನವಿಲ ಹಿಂಡು ಗುಡ್ಡದ ಇಳಿಜಾರಿನಲ್ಲಿ ಮೇಯುತ್ತಿದ್ದು ಇವರನ್ನು ಕಂಡು ಓಡಿ ಹೋದವು.

ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಗೆ ತರತರದ ಹಕ್ಕಿಗಳು ಒಂದೊಂದರ ಕೂಗು ಒಂದೊಂದು ತರ ವಾಗಿ ಧ್ವನಿಸುತ್ತಿದ್ದವು. ಆಗ ರಾಮು ಎಷ್ಟು ಹಕ್ಕಿಗಳಿವೆ? ಎಷ್ಟು ಬಣ್ಣಬಣ್ಣದವು? ಎಂದು ಕೊಂಡನು. ಕಾಡಿನ ಅಂಚುಗಳಲ್ಲಿ ಗೂಡಿಗೊ ಗೊತ್ತಿಗೊ ಹಾರಿ ಹೋಗುವ ವಿವಿಧ ಹಕ್ಕಿಗಳ ನಾನಾಕಲರವ ಸುಮಧುರವಾಗಿತ್ತು.

ಹೋರಿಮಿಗವೊಂದು ತನ್ನ ಕೊಂಬುಗಳನ್ನು ನಿಮಿರಿ ಹಿಂಡಿನ ಜೊತೆ ನೆಗೆದು ಚಿಮ್ಮಿ ಮಿಂಚಿ ಹೋಗುತ್ತಿತ್ತು. ದಾರಿಯ ಪಕ್ಕದಲ್ಲೇ ಇದ್ದ ಒಂದು ಮೊಲ ಎದ್ದು ಬಾಣದ ಮೇಗದಿಂದ ಬಳುಕಿ, ಚಿಮ್ಮಿ ಚಂಗಚಂಗನೆ ಓಡಿಹೋಯಿತು. ಒಂದೆರಡು ಕಡೆ ಹಾವುಗಳು ಹಾದಿಗಡ್ಡ ಓಡಿಹೋದವು.

ರಸ್ತೆಯ ಅಂಚಿನಿಂದಲೆ ಆಕಾಶಮುಟ್ಟುವಂತೆ ಬೆಳೆದು ನಿಂತಿದ್ದ ಮರಗಳಿಂದ ದಟ್ಟವಾದ ಆ ಕಗ್ಗಾಡಿ ಗೆ ಒಂದು ಭವ್ಯ ಭೂಷಣೆಯ ಭಂಗಿ ಒದಗಿತ್ತು. ಸೂರ್ಯರಶ್ಮಿಗಳು ಆ ಮರಗಳ ಸಂಧಿಯಲ್ಲಿ ತೂರಿ ಬಂದು ಕೋಲು ಕೋಲಾಗಿದ್ದ ದೃಶ್ಯ ಸುಮನೋಹರವಾಗಿತ್ತು.

ಅಲ್ಲಲ್ಲಿ ಜೀರುಂಡೆಗಳ ಕರೆಕರೆಯ ಜೀರ್ದನಿ ಆ ನೀರವತೆಯನ್ನು ತನ್ನ ಗರಗಸದಿಂದ ಕೊಯ್ಯು ವಂತಾಗಿ ಕಿವಿಗೆ ಕರ್ಕಶವಾಗಿತ್ತು. ಗಾಳಿ ಜೋರಾಗಿ ಬೀಸಿದಾಗ ಗಗನಚುಂಬಿಗಳಾದ ವೃಕ್ಷ ಶಿಖರಗಳು ಬಳ್ಳಿಗಳಂತೆ ಬಳುಕಿ ಭಯಂಕರವಾಗಿ ತಲೆದೂಗಿದುವು. ಬೆಟ್ಟವಿಳಿದು ಕಾರು ತಗ್ಗಿನ ಪ್ರದೇಶಕ್ಕೆ ಬಂದಾಗ ಒಂದು ಕಾಮಳ್ಳಿಯ ಹಿಂಡು ಉಲಿಯುತ್ತಾ ರೆಕ್ಕೆ ಸದ್ದೂ ಕಿವಿಗೆ ಬರುವಷ್ಟು ಸಮೀಪದಲ್ಲಿ ಹಾರಿ ಹೋಯಿತು. ದೂರದಿಂದ ಕೋಗಿಲೆಗಳ ಇಂಚರ ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಬರುತ್ತಿತ್ತು. ಮತ್ತೊಂದು ತಾಣದಲ್ಲಿ ಹೂವು ತುಂಬಿ ಅಲಂಕೃತವಾದ ಮರಗಳ ಸಾಲೂ ಸಜೀವ ಸಂತೋಷದಂತಿದ್ದ ವಾಯು ಮಂಡಳದ ವೈಭವ ಪ್ರದರ್ಶಿಸುತ್ತಿದ್ದವು. ಹಕ್ಕಿಗಳು ಬಾನಿನಲ್ಲಿ ತೇಲಾಟವಾಡುತ್ತಿದ್ದುವು.

ದಾರಿಯಲ್ಲಿ ಸಿಕ್ಕ ಒಂದು ಪುಟ್ಟ ಹಳ್ಳಿಯಲ್ಲಿ ಏನೇನೋ ತಿನಸುಗಳನ್ನು ತೆಗೆದುಕೊಂಡು ಜಿಗಿಯುತ್ತಾ ಹೊರಟರು. ಅಲ್ಲಿ ಮನೆಗಳ ಮೇಲೆ ಪುಟ್ಟ ಗುಬ್ಬಚ್ಚಿಗಳು ಚಿಲಿಪಿಲಿ ಗುಟ್ಟುತ್ತಾ ಗುಂಪು ಗುಂಪಾಗಿ ಹಾರಾಡು ತ್ತಿದ್ದವು. ದಾರಿಯಲ್ಲಿ ಸಿಕ್ಕ ಕೋಟಿ ಪಕ್ಷಿಗಳ ಮಧುರಗಾನವನ್ನು ಕೇಳಿದರು. ಪುಷ್ಪಾವೃತ ವೃಕ್ಷಗಳನ್ನು ನೋಡಿ ಮೆಚ್ಚಿದರು. ಆ ದೃಶ್ಯಗಳು ಅದ್ಭುತವಾಗಿದ್ದುವು. ಕಾಡು ಬೆಟ್ಟಗಳು ಮನಮೋಹಕ. ಅಲ್ಲಲ್ಲಿ ಕಾಣಿ ಸುತ್ತಿದ್ದ ಕಾಡು ಪ್ರಾಣಿಗಳ ಹಿಂಡು ಹಿಂಡುಗಳಲ್ಲಿ ವೈವಿಧ್ಯಮನ್ನು ನೋಡಿ ನೋಡಿ ರೋಮಾಂಚಿತರಾದರು.

ತೆರೆ ಮೇಲೆ ತೆರೆಯೆದ್ದು ಹರಿದಂತೆ ದೂರ ದೂರಕೆ ಹಬ್ಬಿದ ಪರ್ವತ ದಿಗಂತ ಶೈಲಿ, ದೃಷ್ಟಿ ದಿಗಂತದ ಮೇಲ್ಮೆಯ ದಾಟಿ ಮಲೆನಾಡಿನ ಕಾಡು ಕಣಿವೆಯ ಮಂಜಿನ ಲೀಲೆಗಳು ಹೃದ್ಗೋಚರವಾಗುವ ಸ್ವರ್ಗೀಯ ಸೌಂದರ್ಯಸ್ವಾದನೆ ಜೊತೆಗೆ ಹಕ್ಕಿಗಳಿಂಚರವನ್ನಾಲಿಸುತ್ತಾ ಅವರು ಹೊರಟರು. ಡಾ||ರಾಮು ಈ ಕಾಡು ಬೆಟ್ಟ ಕಣಿವೆಗಳ ವೈಚಿತ್ರ ಸೌಂದರ್ಯಗಳನ್ನು ನೋಡಿ "ಕಾಡು ಮುತ್ತು ಕೊಡುತ್ತಲಿರುವ ಸೊಬಗಿನ ಬೀಡು " ಎಂದು ಉದ್ಗರಿಸಿದನು. ದಾರಿ ಉದ್ದಕ್ಕೂ ಅವರ ಸುಸಂಸ್ಕೃತಿಯ ಹಾಸ್ಯ ಪರಿಹಾಸ್ಯದ ನಗೆ, ಮಾತು ಮನಸ್ಸನ್ನು ವಿನೋದಕರವಾಗಿಸಿತು.

ಮಹೋನ್ನತವೂ, ಸುರಸುಂದರವೂ, ಚಿರಶ್ಯಾಮಲವೂ ಆಗಿರುವ ಮಲೆನಾಡಿನ ಪರ್ವತಶ್ರೇಣಿ ಗಳಲ್ಲಿ, ಹಸುರು ಮುದ್ದೆಮುದ್ದೆಯಾಗಿ ಎದ್ದಿರುವ ಮಲೆಗಳಲ್ಲಿ, ಮಧುರವಾಗಿ ಯಾವುದೋ ಒಂದು ಘನೀ ಭೂತವಾದ ಸಾಕಾರ ಆನಂದವೇ ಅವರ ಹೃದಯ ಪ್ರವೇಶ ಮಾಡಿ ಇಡೀ ಜಗತ್ತೇ ಬದಲಾಯಿಸಿದಂತೆ ಭಾಸವಾಗುತ್ತಿತ್ತು. ಅವರ ಸಮಸ್ತ ಚೇತನವನ್ನು ಒಂದು ಅಲೌಕಿಕತೆ ಆಕ್ರಮಿಸಿಕೊಂಡಿತು. ನಿಸರ್ಗದ

ವಿವಿಧ ಮುಖಗಳಲ್ಲಿ ಸೌಂದರ್ಯಸ್ವಾದನೆ ಮಾಡುವ ಡಾ॥ಶೀಲ ಮತ್ತು ಡಾ॥ರಾಮುವಿನ ಚೇತನಗಳಿಗೆ ಬ್ರಹ್ಮ ಸಂಸ್ಪರ್ಶವಾಯಿತು.

ಆ ವೇಳೆಗೆ ಕಾರು ಶೃಂಗೇರಿ ತಲುಪಿತು. ಶೃಂಗೇರಿಯ ಆಕರ್ಷಣಿಯ ಸುಮನೋಹರವಾಗಿ ಅಲ್ಲಿಗೆ ಹೋಗುವುದೆಂದರೆ ಎಲ್ಲರಿಗೂ ಖಷಿ, ಸಂಭ್ರಮ. ಡಾ॥ರಾಮು ಡಾ॥ಶೀಲ ಶೃಂಗೇರಿಯ ತುಂಗಾ ನದಿಯಲ್ಲಿ ಸ್ನಾನವನ್ನು ಮುಗಿಸಿ ಶಾರದ ದೇವಸ್ಥಾನಕ್ಕೆ ಹೋಗಿ ದೇವಿಯನ್ನು ಪೂಜಿಸಿ ಪುನೀತರಾದರು. ತುಂಗೆಯ ನದಿಯ ದೊಡ್ಡ ದೊಡ್ಡ ಮೀನುಗಳಿಗೆ ಕಳ್ಳೇಪುರಿ ಹಾಕಿ ಸಂತಸಗೊಂಡರು. ನದಿಯ ಎರಡು ದಡಗಳಲ್ಲಿ ದಟ್ಟವಾಗಿ ಬೆಳದಿದ್ದ ಅರಣ್ಯ ಶ್ರೇಣಿಗಳ ವೃಕ್ಷಮಾಲೆಯ ಸುಂದರ ದೃಶ್ಯ ನೋಡಿ ಮೋಹಗೊಂಡರು. ಮಂಜುಳನಾದದಿಂದ ಮಂದಗಮನೆಯಾಗಿ ಮಂಗಳ ತುಂಗೆ ಪ್ರವಹಿಸುತ್ತಿದ್ದಳು.

ಮಿಂಚಿನ ಚಟುವಟಿಕೆಯಿಂದ ಕೂಡಿದ ಮಿಾಂಚುಳ್ಳಿಗಳಿಂದ, ವಸಂತೋನ್ಮಕ್ತ ಕೋಗಿಲೆಗಳ ಹುಚ್ಚು ಹಿಡಿಸುವ ಚೀರಿಂಚರದಿಂದ ಕೂಡಿದ ನದಿಯ ಮೇಲುಗಡೆಯ ದೇವಾಲಯ ಸ್ವರ್ಗೀಯವಾಗಿ ಶೋಭಿಸುತ್ತಿತ್ತು. ಹಿಂದೂ ಧರ್ಮಕ್ಕೆ ಪುನರ್ಜನ್ಮ ನೀಡಿದ ರಸಿಕ ತತ್ವಜ್ಞ ಆದಿಶಂಕರಾಚಾರ್ಯರ ಮನಸ್ಸನ್ನು ಪ್ರತಿಬಿಂಬಿಸುತ್ತಿದ್ದ ಶೃಂಗೇರಿಯ ಈ ಮನೋಹರವಾದ ಕ್ಷೇತ್ರ ನೋಡಿ ಅವರು ಆನಂದದಿಂದ ಪುಳಕಿತರಾದರು.

ದಾರಿಯಲ್ಲಿ ಮುಳುಗುತ್ತಿರುವ ಸೂರ್ಯನ ಮನೋಹರತೆಯನ್ನು ಸವಿಯಲು ಸ್ವಲ್ಪ ಹೊತ್ತು ನಿಂತರು. ಆ ಸುಂದರ ದೃಶ್ಯ ನಿಜವಾಗಿಯೂ ಚೇತೋಹಾರಿಯಾಗಿತ್ತು. ಅತ್ಯದ್ಭುತವಾಗಿತ್ತು. ಸ್ವಲ್ಪ ಹೊತ್ತು ನಿಂತ ಮೇಲೆ ಮಿಣುಕು ಹುಳುಗಳು ಬನದ ಕಗ್ಗತ್ತಲಲ್ಲಿ ಚಿಮಿಕಿಸಿ ಚೆಲ್ಲಿ ಸೂಸುತ್ತಿದ್ದ ಮಿಂಚಿನ ಹನಿಗಳನ್ನು ನೋಡಿ ನೋಡಿ ಮೈಮರೆತರು. ಅಷ್ಟರಲ್ಲೇ ಇದ್ದಕ್ಕಿಂದ್ದಂತೆ ಡಾ॥ರಾಮು ಡಾ॥ಶೀಲ ಇಬ್ಬರಿಗೂ ಮಿಂಚು ಮುಟ್ಟಿದಂತಾಗಿ ಎದೆ ಧಿಗ್ಗೆಂದಿತು. ಕಾಡು ಕಂಪಿಸಿತು. ಹೆಮ್ಮರಗಳು ತರತರನೆ ನಡುಗಿದವು. ಇಡೀಕಾಡು ಬೆಟ್ಟಗುಡ್ಡ ಭೂಮಿಯೆಲ್ಲ ಕಂಪಿಸುತ್ತಿರುವ ಪ್ರತ್ಯಕ್ಷಕ್ಕಿಂತಲೂ ಪ್ರತ್ಯಕ್ಷವಾದ ಅನುಭವದೊಡನೆ ಕಿವಿ ಬಿರಿಯುವಂತೆ ತರಂಗ ತರಂಗವಾಗಿ ಎದೆ ನಡುಗಿಸುವ ಹೆಬ್ಬುಲಿಯ ಅಬ್ಬರಿಕೆಯ ಆರ್ಭಟ ಕಿವಿಗೆ ಅಪ್ಪಳಿಸತೊಡಗಿತು. ವಾಸ್ತವವಾಗಿ ಅದು ಎಲ್ಲ ದಿಕ್ಕುಗಳಿಂದಲೂ ಏಕ ಪ್ರಕಾರವಾಗಿ ಹೊಮ್ಮಿ ಬಂದು ಅಪ್ಪಳಿಸುತ್ತಿತ್ತು.

ಅವರಿಬ್ಬರ ಇಡೀ ದೇಹ ಭಾವಿಕವಾಗಿ ಭೌತಿಕವಾಗಿ ಅದುರುತ್ತಿತ್ತು. ಮೈ ಬಿಸಿಯೇರಿ ಉಸಿರಾಟ ಸೋದ್ವಿಗ್ನವಾಯಿತು. ಬಾಯಿಗಿಂತಲೂ ಹೆಚ್ಚಾಗಿ ಅವರ ಕಣ್ಣುಗಳೇ ಮಾತಾಡಿಕೊಂಡವು. 'ಹುಲಿಯ ಅಬ್ಬರಿಕೆಗೆ ಕಾಡು ನಡುಗುತ್ತದೆ' ಎಂಬರ್ಥದ ವಾಕ್ಯ ಕಾವ್ಯದ ರೀತಿಯ ಅಲಂಕಾರ ಉಕ್ತಿ ಎಂದು ತಿಳಿದಿದ್ದ ಡಾ॥ರಾಮು ಡಾ॥ಶೀಲರಿಗೆ ಈಗ ಅದು ಅಲಂಕಾರದಲ್ಲ. ಅತ್ಯಂತ ಲೋಕ ನಿಷ್ಠವಾದ ವೈಜ್ಞಾನಿಕ ಸತ್ಯದ್ದು ಎಂಬುದು ಅನುಭವಕ್ಕೆ ಬಂದಿತು.

ಅಷ್ಟರಲ್ಲೇ ರಸ್ತೆಯ ಪಕ್ಕದ ಪೊದೆಯ ಹತ್ತಿರದಲ್ಲಿ ನಿಂತಿದ್ದ ಹೆಬ್ಬುಲಿಯ ಕಣ್ಣುಗಳು ಗೋಲಿಯ ಗಾತ್ರದ ಮಿಣುಕು ಹುಳುಗಳಂತೆ ಹೊಳೆಯುತ್ತಿರುವುದನ್ನು ನೋಡಿ ಡಾ॥ಶೀಲ ಪಿಳಪಿಳನೆ ಕಣ್ಣುಬಿಟ್ಟು ಭೀತಿ ಯಿಂದ ಡಾ॥ರಾಮುವಿನ ಕಡೆಗೆ ನೋಡಿದಳು. "ಹೆದರಬೇಡ ಡಾ॥ಶೀಲ ಕಾರಿನ ವೇಗ ಬೇಗ ಏರಿಸು" ಎಂದು ಹೇಳಿದ, ಕಾರು ಶರವೇಗದಲ್ಲಿ ಚಲಿಸತೊಡಗಿತು. ಅಷ್ಟರಲ್ಲೇ ಢಾಂ! ಎಂದು ಒಂದು ತೋಟಾ ಕೋವಿಯ ಈಡು ಕಾಡನ್ನೇ ಕಲಕಿಬಿಟ್ಟಿತು. ನಡೆದ ಘಟನೆಯ ಭೀಷಣ ಭವ್ಯಾನುಭವಕ್ಕೆ ಸ್ತಂಭೀಭೂತವಾದಂತೆ ಡಾ॥ರಾಮು ಡಾ॥ಶೀಲ ಕೆಲವು ನಿಮಿಷ ಮೌನವಾಗಿದ್ದರು.

ಆ ರಮಣೀಯವಾದ ವನ ನಿರ್ಝರಿಣಿಯ ಸೃಷ್ಟಿ ಸೌಂದರ್ಯದ ರಸಲೋಕದಲ್ಲಿ ದೂರ ಬಹು ದೂರ ವಿವರಿಸತೊಡಗಿದರು. ಡಾ॥ರಾಮು ಡಾ॥ಶೀಲರಿಗೆ ಅದೇನೋ ಉಲ್ಲಾಸ! ಅದೇನೋ ಉತ್ಸಾಹ! ಅದೇನೋ ಉನ್ಮೇಷ! ಏನೋ ಸ್ನೇಹ ಮಾಧುರ್ಯ! ಅದೆಷ್ಟೋ ಬಾಂಧವ್ಯ! ಅವರ ಮೈ ನಿವಿರುನಿಮಿರಿ

ಅಂಗಾಂಗ ಸೆಡೆತು ನಿಂತವು. ಆ ಅರಣ್ಯ ಸನ್ನಿವೇಶದಲ್ಲಿ ಆ ಪ್ರಕೃತಿದಾರಿ ಅಷ್ಟು ಸ್ವಾದನೀಯ. ಅಷ್ಟು ಹಿತವಾಗಿತ್ತು. ಅವರಿಬ್ಬರಿಗೂ ಅದೊಂದು ಭಾಷಾತೀತವಾದ ಭಾವಮಯವಾದ ಮಹಾನಂದದ ದಿವ್ಯ ಮೂಹೂರ್ತವಾಗಿತ್ತು. ಮಹಾಕವಿ ಮಹಾಛಂದಸ್ಸಿನ ನಾದ ವಿನ್ಯಾಸವನ್ನು ಸವಿಯುವಂತೆ ಸವಿದು ಸುಖಿಸುತ್ತಲೂಇದ್ದರು. ಕಾರು ಶೃಂಗೇರಿ ಹತ್ತಿರದ ''ಮಧುಧಾಮ ಎಸ್ಟೇಟ್'' ತಲುಪಿದಾಗ ಸುರಸುಂದರಿ ಯರೂ, ಸುಸಂಸ್ಕೃತರೂ, ನಯಜೀವಿಗಳೂ ಅತಿಥಿ ಸತ್ಕಾರ ಲೋಲುಪೆಯರೂ ಆದ ಮಲೆನಾಡಿನ ಲಲನೆಯರೂ ಡಾ॥ರಾಮು ಡಾ॥ಶೀಲರಿಗೆ ಅದ್ಭುತ ಸ್ವಾಗತ ನೀಡಿದರು.

ಅದ್ಧೂರಿಯಿಂದ, ಆಡಂಬರದಿಂದ ಬೆಡಗಿನಿಂದ, ಮದುವೆಯ ಶಾಸ್ತ್ರಗಳು ಮಂಗಳ ವಾದ್ಯಗಳಿಂದ ಪ್ರಾರಂಭವಾದವು. ಪುರೋಹಿತರು ದೊಡ್ಡ ಧ್ವನಿಯಲ್ಲಿ ಮಂತ್ರಗಳನ್ನು ಹೇಳುತ್ತಿದ್ದರು. ಹೆಣ್ಣು ತನ್ನ ಸುಕೋಮಲವಾದ ಕೈಗಳನ್ನೆತ್ತಿ ಹೂಮಾಲೆಯನ್ನು ಗಂಡಿನ ಕೊರಳಿಗೆ ಹಾಕಿದಳು. ಬ್ರಾಹ್ಮಣೋತ್ತಮರು ಉಚ್ಚರಿಸುವ ಮಂತ್ರ ವಿಧಾನಗಳಿಗೆ ಅನುಸಾರವಾಗಿ ಅಗ್ನಿದೇವನ ಸಮ್ಮುಖದಲ್ಲಿ ಹೆಣ್ಣು ಗಂಡಿನ ಕೈ ಹಿಡಿದಳು. ಆಗ ವೈದಿಕ ಸಂಪ್ರದಾಯದಂತೆ ಪಾಣಿಗ್ರಹಣ, ಸಪ್ತಪದಿ, ಲಾಜಾ ಹೋಮ, ಆಜ್ಯಹೋಮ ಮೊದಲಾದ ವಿವಾಹ ಮಹೋತ್ಸವದ ವಿವಿಧ ಕಾರ್ಯಕಲಾಪಗಳು ವೇದಘೋಷದೊಂದಿಗೆ ನಡೆದುವು.

ಆ ಮಂಗಳ ಮುಹೂರ್ತದಲ್ಲಿ ಮಂಗಳವಾದ್ಯಗಳನ್ನು ಮೃದುವಾಗಿ, ಮನೋಹರವಾಗಿ, ಮಂಜುಳ ವಾಗಿ ಬಾರಿಸಿ ಧ್ವನಿ ಮಾಡಿದರು. ಮುತ್ತೈದೆಯರು ಮಂಗಳಕರವಾದ ಶೋಭಾನ ಹಾಡುಗಳನ್ನು ಹಾಡುತ್ತ ಮದುವೆಗೆ ಕಳೆಯೇರುವಂತೆ ಮಾಡಿದರು. ಗಂಡು ಹೆಣ್ಣು ರತಿಮನ್ಮಥರಂತೆ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದರು. ಮಕ್ಕಳಿಗೆ ಸಂಭ್ರಮವೋ ಸಂಭ್ರಮವಾಗಿ ಹೋಯ್ತು. ಅವರು ಇಂಥ ಅದ್ದೂರಿಯ ಮದುವೆಯನ್ನು ಎಂದೂ ನೋಡಿಯೂ ಇರಲಿಲ್ಲ. ಕೇಳಿಯೂ ಇರಲಿಲ್ಲ. ಈ ಸಂದರ್ಭಕ್ಕಾಗಿ ಹೆಣ್ಣಿನ ಹೃದಯ ಅದೆಷ್ಟು ಕನಸುಗಳನ್ನು ಕಂಡಿತ್ತೋ? ಅದೆಷ್ಟು ಹಿಗ್ಗಿನಿಂದ ಆ ಮಂಗಳ ಮುಹೂರ್ತಕ್ಕೆ ಕ್ಷಣವೊಂದು ಯುಗವಾಗಿ ಕಾಯುತ್ತಿತ್ತೋ? ಅವಳ ಹೃದಯದ ಹಿಗ್ಗನು ಅಳೆಯುವವರಾರು? ಅವಳ ಹೃದಯದಲ್ಲಿ ಮಿಡಿಯುತ್ತಿರುವ ಭಾವನೆಗಳನ್ನು ಹಿಡಿದಿಡುವಷ್ಟು ಶಬ್ದ ಸಾಮಗ್ರಿಗಳು ಯಾವ ಕವಿ ಸಾಮ್ರಟನಲ್ಲಿವೆ ?

ನೆರೆದಿದ್ದವರೆಲ್ಲರೂ ಚಿರೋಟಿ, ಹೋಳಿಗೆ, ಲಾಡು, ಪಾಯಸ, ಚಿತ್ರಾನ್ನ, ಮೊಸರನ್ನ, ಹಣ್ಣುಹಂಪಲು ಇತ್ಯಾದಿ ಭಕ್ಷ್ಯ ಭೋಜ್ಯಗಳ ಔತಣವನ್ನು ಗಡದ್ದಾಗಿ ಉಂಡರು. ಆಳುಕಾಳುಗಳೆಲ್ಲ ತಿಂದು ಕುಡಿದು ತಣಿದು ತೇಗುತ್ತಾ ಹೋದರು.ಮದುವೆಯ ಭೋಜನದಿಂದ ಸಂತೃಪ್ತರಾದ ಡಾ॥ರಾಮು ಡಾ॥ಶೀಲ ಕೂಡ ಮದುಮಗಳಿಗೂ, ಮದುಮಗನಿಗೂ ಉಡುಗೊರೆ ನೀಡಿ, ಶುಭ ಹಾರೈಸಿ ಬೆಂಗಳೂರಿಗೆ ಹೊರಟು ನಿಂತಾಗ ಬಹುದೂರದಿಂದ ಬಂದಿದ್ದ ಡಾ॥ರಾಮು, ಡಾ॥ಶೀಲರಿಗೆ, ಡಾ॥ವ್ಯಾಸರಾಯರು ಮತ್ತು ಕುಟುಂಬದವರೆಲ್ಲರೂ ಕೂಡಿ ಕೃತಜ್ಞತೆ ವ್ಯಕ್ತಪಡಿಸಿದರು. ಅವರನ್ನು ಇನ್ನೂ ನಾಲ್ಕು ದಿನ ತಮ್ಮ ಎಸ್ಟೇಟ್‌ನಲ್ಲಿ ತಂಗಿದ್ದು ಅತಿಥಿ ಸತ್ಕಾರ ಸ್ವೀಕರಿಸಬೇಕೆಂದು ಒತ್ತಾಯಿಸಿದರು.

ಹಾಸ್ಪಿಟಲ್‌ನಿಂದ ತೆಗೆದುಕೊಂಡ ರಜಾ ನಾಳೆಯೇ ಮುಗಿಯುವುದರಿಂದ ಅನಿವಾರ್ಯವಾಗಿ ತಾವು ಹೋಗಲೇಬೇಕೆಂದು ತಿಳಿಸಿ, ಕಾರಿನಲ್ಲಿ ಡಾ॥ರಾಮು ಡಾ॥ಶೀಲ ಕುಳಿತರು, ಗುಡ್‌ಬೈ ಹೇಳಿ ಕಾರು ಬೆಂಗಳೂರಿನತ್ತ ಹೊರಟಾಗ ಡಾ॥ವ್ಯಾಸರಾಯರು, ಡಾ॥ರಾಮು, ಡಾ॥ಶೀಲಳ ಕರ್ತವ್ಯ ನಿಷ್ಠೆಯನ್ನು ನೆನೆದು " ಕರ್ತವ್ಯವೇ ದೇವರು " (Duty is God) ಎಂದು ಉದ್ಗರಿಸಿದರು.

ಅದೇ ವೇಳೆಗೆ ಹಾಸ್ಟಲ್ ರೂಂ ಗಡಿಯಾರದ ಢಣ, ಢಣ ಎಂಬ ಶಬ್ಧ ಡಾ॥ಶೀಲಳನ್ನು ಎಚ್ಚರಗೊಳಿಸಿ ಪ್ರಜ್ಞಾಲೋಕಕ್ಕೆ ಕರೆತಂದಿತು. ಎಚ್ಚೆತ್ತ ಡಾ॥ಶೀಲ ವಿಸ್ಮಯ, ನಾಚಿಕೆ, ಆನಂದದಲ್ಲಿ ಮುಳುಗಿಹೋದಳು.

